ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 2 ಶನಿವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 314 | ಪುಟಗಳು: 12
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರು ಮಿತ್ರ ಶನಿವಾರ 2 ಮಾರ್ಚ್ 2024

ಬೈಕ್‌ಗೆ ಕ್ಯಾಂಟರ್ ಡಿಕ್ಕಿ: ದಂಪತಿ ಸಾವು


ರಾಜು


ಸುನಂದ

ಹುಣಸೂರು, ಮಾ.1– ಬೈಕ್ ಮತ್ತು ಕ್ಯಾಂಟರ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ದಂಪತಿ ಸಾವನ್ನಪ್ಪಿರುವ ಘಟನೆ ನಗರದ ಹೊರವಲಯದ ಹಾಲಿನ ಡೈರಿ ಬಳಿ ಶುಕ್ರವಾರ ಸಂಜೆ ನಡೆದಿದೆ.

ನಗರದ ಮಂಜುನಾಥ ಬಡಾವಣೆ ನಿವಾಸಿ, ಅಂಚೆ ಇಲಾಖೆ ನಿವೃತ್ತ ನೌಕರ ರಾಜು(64), ಅವರ ಪತ್ನಿ ಸುನಂದ (56) ಮೃತಪಟ್ಟವರು. ಮೂಲತಃ ತಾಲೂಕಿನ ಬನ್ನಿಕುಪ್ಪೆ ಗ್ರಾಮದ ನಿವಾಸಿ ರಾಜು ತಮ್ಮ ತಾಯಿ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಹುಣಸೂರಿನಿಂದ ಸ್ವಗ್ರಾಮಕ್ಕೆ ತೆರಳಿ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ, ಮತ್ತೆ ಹುಣಸೂರಿಗೆ ಹಿರೋ ಹೋಂಡಾ ಬೈಕ್‌ನಲ್ಲಿ (ಕೆಎ.45, ಜೆ.4149) ಪತ್ನಿ ಸುನಂದ ಅವರೊಂದಿಗೆ ಆಗಮಿಸುತ್ತಿದ್ದರು. ಸಂಜೆ 4.30ರಲ್ಲಿ ನಗರದ ಹೊರವಲಯದ ಹಾಲಿನ ಡೈರಿ ಬಳಿ ಹುಣಸೂರಿನಿಂದ ಮೈಸೂರು ಕಡೆಗೆ ತೆರಳುತ್ತಿದ್ದ ಕ್ಯಾಂಟರ್ ಗೂಡ್ಸ್ ವಾಹನ (ಕೆಎ.53, ಸಿ.9967) ಬೈಕ್‌ಗೆ ಡಿಕ್ಕಿ ಹೊಡೆದ ರಭಸಕ್ಕೆ ದಂಪತಿಗಳಿಬ್ಬರಿಗೂ ತಲೆ, ಮುಖಕ್ಕೆ ತೀವ್ರ ಪೆಟ್ಟಾಗಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅಪಘಾತದ ಬಳಿಕ ಕ್ಯಾಂಟರ್ ಚಾಲಕ ವಾಹನ ನಿಲ್ಲಿಸದೆ ಮೈಸೂರು ಕಡೆಗೆ ಪರಾರಿಯಾಗುತ್ತಿದ್ದ ವೇಳೆ ವಾಹನ ಸವಾರರು ಬೆನ್ನತ್ತಿ ಬಿಳಿಕೆರೆ ಬಳಿ ಕ್ಯಾಂಟರ್ ತಡೆಗಟ್ಟಿ ಚಾಲಕನನ್ನು ಬಿಳಿಕೆರೆ ಪೊಲೀಸರ ವಶಕ್ಕೊಪ್ಪಿಸಿದ್ದಾರೆ.

ರಾಜು ಅವರ ಹಿರಿಯ ಪುತ್ರ 2 ವರ್ಷಗಳ ಹಿಂದೆ ಸಾವನ್ನಪ್ಪಿದ್ದ. ನಗರದ ಮಂಜುನಾಥ ಬಡಾವಣೆಯಲ್ಲಿ ಮನೆ ನಿರ್ಮಿಸಿಕೊಂಡಿದ್ದ ರಾಜು ದಂಪತಿ ಕಿರಿಯ ಪುತ್ರನೊಂದಿಗೆ ನಿವೃತ್ತ ಜೀವನ ನಡೆಸುತ್ತಿದ್ದರು. ಅಪಘಾತದಿಂದ ಕೆಲಹೊತ್ತು ಹೆದ್ದಾರಿ ಸಂಚಾರ ಅಸ್ತವ್ಯಸ್ತವಾಗಿತ್ತು. ವಿಷಯ ತಿಳಿದು ನಗರ ಠಾಣೆ ಎಸ್‌ಐ ತಾಜುದ್ದೀನ್, ಡಿವೈಎಸ್ಪಿ ಗೋಪಾಲಕೃಷ್ಣ ಹಾಗೂ ಸಿಬ್ಬಂದಿ ಸ್ಥಳಕ್ಕಾಗಮಿಸಿ ಶವಗಳನ್ನು ಹುಣಸೂರು ಸಾರ್ವಜನಿಕ ಆಸ್ಪತ್ರೆ ಶವಾಗಾರಕ್ಕೆ ಸಾಗಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಿದರು. ಈ ಸಂಬಂಧ ಹುಣಸೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂತಾಪ: ವಿಷಯ ತಿಳಿದು ನಗರದ ಸಾರ್ವಜನಿಕ ಆಸ್ಪತ್ರೆ ಶವಾಗಾರದ ಬಳಿ ಆಗಮಿಸಿದ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಮೃತರ ಪುತ್ರ, ಕುಟುಂಬದವರಿಗೆ ಸಾಂತ್ವನ ಹೇಳಿದರು. ಈ ವೇಳೆ ದರಖಾಸ್ತು ಕಮಿಟಿ ಮಾಜಿ ಸದಸ್ಯ ಚಿಕ್ಕಸ್ವಾಮಿ, ರಾಘು, ಪ್ರಸನ್ನ, ಗಣೇಶ ಇನ್ನಿತರರಿದ್ದರು.

ಸೈಬರ್ ಆ್ಯಕ್ಟ್ ಸೇರಿ ಅವಶ್ಯ ವಿಚಾರಗಳ ಬಗ್ಗೆ ತರಬೇತಿ

ಅಧಿಕಾರಿಗಳಿಗೆ ಸಹಕಾರ ಮಹಾ ಮಂಡಳದ ಎಂಡಿ ನವೀನ್ ಭರವಸೆ

ಮೈಸೂರು, ಮಾ.1(ಬಿಎಲ್‌ಯು)– ಸೈಬರ್ ಆ್ಯಕ್ಟ್ ಸೇರಿದಂತೆ ಅವಶ್ಯವಿರುವ ಯಾವುದೇ ವಿಚಾರಗಳ ಬಗ್ಗೆ ತರಬೇತಿ ನೀಡಲು ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ಸಿದ್ಧವಿದೆ ಎಂದು ಮಹಾ ಮಂಡಳದ ವ್ಯವಸ್ಥಾಪಕ ನಿರ್ದೇಶಕ ಕೆ.ಎಸ್.ನವೀನ್ ಭರವಸೆ ನೀಡಿದರು.



ಮೈಸೂರಿನ ದಿ ಲೀ ರುಚಿ ದಿ ಪ್ರಿನ್ಸ್‌ನಲ್ಲಿ ಶುಕ್ರವಾರ ಮೈಸೂರು ವಿಭಾಗದ ಪಟ್ಟಣ ಸಹಕಾರ ಬ್ಯಾಂಕ್‌ಗಳ ಸರ್ವತೋಮುಖ ಅಭಿವೃದ್ಧಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಹಿರಿಯ ಅಧಿಕಾರಿಗಳಿಗೆ ಆಯೋಜಿಸಿದ್ದ ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳದ ವ್ಯವಸ್ಥಾಪಕ ನಿರ್ದೇಶಕ ಕೆ.ಎಸ್.ನವೀನ್ ಉದ್ಘಾಟಿಸಿ, ಮಾತನಾಡಿದರು. ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಹೆಚ್.ವಿ.ರಾಜೀವ್ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರಿನ ದಿ ಲೀ ರುಚಿ ದಿ ಪ್ರಿನ್ಸ್‌ನಲ್ಲಿ ಇಂದು ಮೈಸೂರು ವಿಭಾಗದ ಪಟ್ಟಣ ಸಹಕಾರ ಬ್ಯಾಂಕ್‌ಗಳ ಸರ್ವತೋಮುಖ ಅಭಿವೃದ್ಧಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಹಿರಿಯ ಅಧಿಕಾರಿಗಳಿಗೆ ಆಯೋಜಿಸಿದ್ದ ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂತಹ ತರಬೇತಿಗಳು ಅಧಿಕಾರಿಗಳಿಗೆ ಅತ್ಯವಶ್ಯವಾಗಿದ್ದು, ಅಧಿಕಾರಿಗಳಿಗೆ ಅರ್ಥಪೂರ್ಣ ಮಾಹಿತಿ ದೊರೆಯಲಿದೆ ಎಂದರು.

ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳಕ್ಕೆ 100 ವರ್ಷಗಳ ಇತಿಹಾಸವಿದ್ದು, ಈತನಕ ಇಂತಹ ನೂರಾರು ತರಬೇತಿಗಳನ್ನು ನೀಡಲಾಗಿದೆ. ಇದರಿಂದ ಸಹಕಾರ ಸಂಘಗಳ ಮತ್ತಷ್ಟು ಸಮರ್ಥವಾಗಿ ಕೆಲಸ ಮಾಡಲು ಪೂರಕವಾಗಿದೆ ಎಂದು ಅಭಿಪ್ರಾಯಪಟ್ಟರು.

ಕರ್ನಾಟಕದಲ್ಲಿ 46 ಸಾವಿರ ಸಹಕಾರ ಸಂಘಗಳಿದ್ದು, ದಿನ ಕಳೆದಂತೆ ಸಹಕಾರ ಚಳವಳಿ ಮತ್ತಷ್ಟು ಗಟ್ಟಿಗೊಳ್ಳುತ್ತಿದೆ. ಇಂತಹ ತರಬೇತಿಗಳಿಂದ ಅಧಿಕಾರಿಗಳು ಪ್ರಸ್ತುತ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳಬಹುದು ಎಂದು ನವೀನ್ ಸಲಹೆ ನೀಡಿದರು. ಈ ವೇಳೆ ಮಾತನಾಡಿದ ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಹೆಚ್.ವಿ. ರಾಜೀವ್, ನಷ್ಟದಿಂದ ಪಾರಾಗುವ ನಿಟ್ಟಿನಲ್ಲಿ ಪಟ್ಟಣ ಸಹಕಾರ ಬ್ಯಾಂಕ್‌ಗಳು ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕು ಎಂದು ಹೇಳಿದರು. ಸಹಕಾರ ಬ್ಯಾಂಕ್ ಆರಂಭಿಸಲು ಸರ್ಕಾರದಿಂದ ಲೈಸೆನ್ಸ್ ಸಿಗುವುದು ಬಹಳ ಕಷ್ಟ. ಇಂತಹ ಪರಿಸ್ಥಿತಿಯಲ್ಲಿ ಇರುವ ಲೈಸೆನ್ಸ್ ಉಳಿಸಿಕೊಳ್ಳಲು ಸಹಕಾರ ಬ್ಯಾಂಕ್‌ಗಳು ಸಮರ್ಥವಾಗಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಮಹಾ ಮಂಡಳದ ಕಾರ್ಯದರ್ಶಿ ಲಕ್ಷ್ಮಿಪತಿ, ಕಾರ್ಯಕ್ರಮದ ಸಂಚಾಲಕ ಜೆ.ಜಿ.ಸೀನಪ್ಪ ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಮಹದೇವಸ್ವಾಮಿ, ಬೈರಪ್ಪ ಹಾಗೂ ಎಂ.ಜಿ.ಮಂಜೇಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ, ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸಹಕಾರ ಯೂನಿಯನ್ ಸಂಯುಕ್ತವಾಗಿ ಕಾರ್ಯಕ್ರಮ ಆಯೋಜಿಸಿತ್ತು.

ಎಂ.ಎ.ಮೋಹನ್ ಮೈಸೂರು ನಗರ ಬಿಜೆಪಿ ವಕ್ತಾರ



ಮೈಸೂರು, ಮಾ.1(ಎಸ್‌ಬಿಡಿ)– ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಸೂಚನೆ ಮೇರೆಗೆ ಪಕ್ಷದ ಸಂಘಟನಾತ್ಮಕ ದೃಷ್ಟಿಯಿಂದ ಮೈಸೂರು (ಜಿಲ್ಲಾ) ನಗರ ಘಟಕಕ್ಕೆ ನೂತನ ಪದಾಧಿಕಾರಿಗಳನ್ನು ನೇಮಿಸಿ ನಗರಾಧ್ಯಕ್ಷ ಎಲ್.ನಾಗೇಂದ್ರ ಆದೇಶಿಸಿದ್ದಾರೆ.


ವಕ್ತಾರರಾಗಿ ಎಂ.ಎ.ಮೋಹನ್, ಸಹ ವಕ್ತಾರ ಕೆ.ದೇವರಾಜ್, ಉಪಾಧ್ಯಕ್ಷರಾಗಿ ಎಸ್.ಕೆ.ದಿನೇಶ್, ಟಿ.ರಮೇಶ್, ಹೇಮನಂದೀಶ್, ವಿಶ್ವೇಶ್ವರಯ್ಯ, ಸೋಮಶೇಖರ್ ರಾಜು, ಸಿ.ಕೆ.ರುದ್ರಮೂರ್ತಿ, ಎನ್.ಮಂಜುನಾಥ್(ಜೋಗಿ ಮಂಜು), ಹೆಚ್.ಎಸ್.ವೇದರಾಜ್, ಕಾರ್ಯದರ್ಶಿಗಳಾಗಿ ಎಂ.ಆರ್.ಬಾಲಕೃಷ್ಣ, ಕೃಷ್ಣಮೂರ್ತಿ ರಾವತ್, ಡಾ.ಭಾನುಪ್ರಕಾಶ್, ಪಿ.ನಾರಾಯಣ, ಕಿರಣ್‌ಗೌಡ, ಎಂ.ಎಸ್.ಮನೀತ್, ಜೆ.ನಾಗೇಂದ್ರ, ಕುಮಾರ್(ಕೇಬಲ್) ಹಾಗೂ ಎಂ.ಮೋನಿಕ, ಕಾರ್ಯಾಲಯ ಕಾರ್ಯದರ್ಶಿ ನಂದಕುಮಾರ್, ಮಾಧ್ಯಮ ಪ್ರಮುಖ್ ಮಹೇಶ್ ರಾಜೇ ಅರಸ್, ಸಹ ಪ್ರಮುಖ್ ಬಿ.ಎಂ. ಸಂತೋಷ್ ಕುಮಾರ್, ಖಜಾಂಚಿಯಾಗಿ ಮಹಾವೀರ್ ಜೈನ್ ಅವರನ್ನು ನೇಮಕ ಮಾಡಲಾಗಿದೆ.

ರಾಜ್ಯ ಅಭಿಯೋಜನಾ ನಿರ್ದೇಶಕರಾಗಿ ಎಸ್.ಜಿ.ಸಂಗ್ರೇಶಿ ನೇಮಕ



ಮೈಸೂರು, ಮಾ.1– ರಾಜ್ಯ ಸರ್ಕಾರದ ನಿರ್ದೇಶನದ ಮೇರೆಗೆ ಕಾನೂನು ಕಾರ್ಯದರ್ಶಿ ಎಸ್.ಜಿ.ಸಂಗ್ರೇಶಿ ಅವರು ಹೆಚ್ಚುವರಿಯಾಗಿ ರಾಜ್ಯ ಅಭಿಯೋಜನಾ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಇವರು ಈ ಹಿಂದೆ ಮೈಸೂರು ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸಿದ್ದರು.

ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ ನಿಧನಕ್ಕೆ ಪ್ರಸಾದ್, ಜಿಟಿಡಿ ಸಂತಾಪ



ಮೈಸೂರು, ಮಾ.1(ಎಸ್‌ಬಿಡಿ)– ನಿವೃತ್ತ ಹಿರಿಯ ಐಎಎಸ್ ಅಧಿಕಾರಿ ಕೆ.ಶಿವರಾಂ ಅವರ ಅಗಲಿಕೆಗೆ ಚಾಮರಾಜನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.


ವಿ.ಶ್ರೀನಿವಾಸ ಪ್ರಸಾದ್: ಕೆ.ಶಿವರಾಂ ಅವರು ತಮ್ಮ 70ನೇ ವಯಸ್ಸಿನಲ್ಲಿ ನಿಧನರಾದರು. ಅವರ ನಿಧನದಿಂದ ನನಗೆ ಅಪಾರ ದುಃಖವಾಗಿದೆ. ಅವರು ಹಲವಾರು ಹುದ್ದೆಗಳಲ್ಲಿ ತಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಸಮಾಜಮುಖಿಯಾಗಿ ರಾಜ್ಯಾದ್ಯಂತ ಛಲವಾದಿ ಮಹಾಸಭಾ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು. ದುಃಖತಪ್ತ ಅವರ ಕುಟುಂಬಕ್ಕೆ ದುಃಖ ನಿವಾರಿಸುವ ಶಕ್ತಿ ದೊರಕಲೆಂದು ಕೋರುತ್ತಾ ಅವರ ನಿಧನಕ್ಕೆ ಸಂತಾಪ ಸೂಚಿಸುತ್ತೇನೆ.

ಜಿಟಿಡಿ: ಕೆ.ಶಿವರಾಂ ಅವರ ನಿಧನ ತುಂಬಲಾರದ ನಷ್ಟ, ಅವರು ದಲಿತ ಸಮುದಾಯದ ಬಡ ಕುಟುಂಬದಿಂದ ಬಂದು ಮೊದಲ ಬಾರಿಗೆ ಕನ್ನಡದಲ್ಲಿ ಐಎಎಸ್ ಪಾಸ್ ಮಾಡಿದರು. ಜಿಲ್ಲಾಧಿಕಾರಿಯಾಗಿ ಸಾಕಷ್ಟು ಜನಪರ ಕೆಲಸಗಳನ್ನು ಮಾಡಿದ್ದರು. ನಿವೃತ್ತಿ ನಂತರ ಛಲವಾದಿ ಮಹಾಸಭಾದ ಅಧ್ಯಕ್ಷರಾಗಿ ಸಂಘಟನೆ ಮಾಡಿದ್ದರು. ಅವರು 1990 ರಿಂದ 1993 ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾಗಿದ್ದಾಗ ಪೌರ ಕಾರ್ಮಿಕರು, ದಲಿತರು ಮತ್ತು ಹಿಂದುಳಿದ ವರ್ಗದವರ ಮಕ್ಕಳು ಶಿಕ್ಷಣವಂತರಾಗಬೇಕೆಂದು ಶೇ.18 ಅನುದಾನ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ್ದರು. ನನ್ನ ಸ್ನೇಹಿತರಾಗಿದ್ದ ಕೆ.ಶಿವರಾಂ ಅಗಲಿಕೆಯಿಂದ ಅತೀವ ಆಘಾತವಾಗಿದೆ. ಅವರ ಕುಟುಂಬದವರು, ಅಪಾರ ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿಯನ್ನು ತಾಯಿ ಚಾಮುಂಡೇಶ್ವರಿ ನೀಡಲಿ. ಶಿವರಾಂ ಆತ್ಮಕ್ಕೆ ಚಿರಶಾಂತಿ ಕರುಣಿಸಲಿ.

ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿ ಟ್ಯಾಂಕರ್‌ನಿಂದ ಆಯಿಲ್ ಸೋರಿಕೆ

ಸ್ಕಿಡ್ ಆಗಿ ಬಿದ್ದು 30ಕ್ಕೂ ಹೆಚ್ಚು ವಾಹನ ಸವಾರರಿಗೆ ಸಣ್ಣಪುಟ್ಟ ಗಾಯ

ಮೈಸೂರು, ಮಾ.1(ಬಿಎಲ್‌ಯು)– ಟ್ಯಾಂಕರ್‌ನಿಂದ ಸೋರಿಕೆ ಆದ ಆಯಿಲ್ ರಸ್ತೆಯಲ್ಲಿ ಹರಡಿ 30 ಕ್ಕೂ ಹೆಚ್ಚು ಬೈಕ್ ಹಾಗೂ ಸ್ಕೂಟರ್ ಸವಾರರು ಸ್ಕಿಡ್ಡಾಗಿ ಬಿದ್ದು ಗಾಯಗೊಂಡ ಘಟನೆ ಮೈಸೂರಿನ ಬಂಬೂಬಜಾರ್‌ನಲ್ಲಿ ನಡೆದಿದೆ.


ಮೈಸೂರಿನ ಬಂಬೂಬಜಾರ್‌ನ ಸಯ್ಯಾಜಿರಾವ್ ರಸ್ತೆಯಲ್ಲಿ ಆಯಿಲ್ ಸೋರಿಕೆಯಿಂದ ಅಪಘಾತ ಸಂಭವಿಸುತ್ತಿದ್ದ ಸ್ಥಳದಲ್ಲಿ ಸಂಚಾರಿ ಪೊಲೀಸರು ನಿಂತು ನಿಧಾನವಾಗಿ ವಾಹನ ಚಾಲನೆ ಮಾಡುವಂತೆ ಸೂಚಿಸಿ ಹೆಚ್ಚಿನ ಅನಾಹುತವಾಗುವುದನ್ನು ತಪ್ಪಿಸಿದರು.

ನಗರದ ಬಂಬೂಬಜಾರ್‌ನ ಸಯ್ಯಾಜಿರಾವ್ ರಸ್ತೆಯಲ್ಲಿ ಇಂದು ಬೆಳಿಗ್ಗೆ ಬೆಂಗಳೂರು ಕಡೆ ಹೋಗುತ್ತಿದ್ದ ಟ್ಯಾಂಕರ್‌ನಲ್ಲಿ ಆಯಿಲ್ ಸೋರಿಕೆ ಆಗಿ ರಸ್ತೆಯಲ್ಲಿ ಚೆಲ್ಲಿದೆ. ನಯವಾದ ಕಾಂಕ್ರಿಟ್ ರಸ್ತೆಯಾದ ಕಾರಣ ಆಯಿಲ್ ಬಹಳಷ್ಟು ರಸ್ತೆಯಲ್ಲಿ ಹರಡಿದೆ.

ರಸ್ತೆಯಲ್ಲಿ ಆಯಿಲ್ ಹರಡಿರುವುದು ದ್ವಿಚಕ್ರ ವಾಹನ ಸವಾರರಿಗೆ ಸದ್ಯಕ್ಕೆ ಗೋಚರಿಸಲಿಲ್ಲ. ಆ ವೇಳೆ ವೇಗವಾಗಿ ಹೋಗುತ್ತಿದ್ದ ಬೈಕ್ ಹಾಗೂ ಸ್ಕೂಟರ್ ಸವಾರರು ಸ್ಕಿಡ್ಡಾಗಿ 30ಕ್ಕೂ ಹೆಚ್ಚು ದ್ವಿಚಕ್ರ ವಾಹನ ಸವಾರರು ಉರುಳಿ ಬಿದ್ದಿದ್ದಾರೆ. ಇದರಿಂದ ಬಹಳಷ್ಟು ವಾಹನ ಸವಾರರಿಗೆ ತಲೆ ಸೇರಿದಂತೆ ಕೈ–ಕಾಲಿಗೆ ಗಂಭೀರ ಗಾಯವಾಗಿದೆ. ಈ ವಿಚಾರ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಬಂದ ನರಸಿಂಹರಾಜ ಸಂಚಾರಿ ಪೊಲೀಸರು ಆಯಿಲ್ ಹರಡಿರುವ ಜಾಗದಲ್ಲಿ ಬ್ಯಾರಿಕೇಡ್ ಹಾಕಿದ್ದಾರೆ. ಜೊತೆಗೆ ಅಲ್ಲೇ ನಿಂತು ಆಯಿಲ್ ಚೆಲ್ಲಿರುವ ಬಗ್ಗೆ ವಾಹನ ಸವಾರರಿಗೆ ಎಚ್ಚರಿಸಿ, ನಿಧಾನವಾಗಿ ವಾಹನ ಚಾಲನೆ ಮಾಡುವಂತೆ ಸೂಚಿಸಿದ್ದಾರೆ. ಆಯಿಲ್ ಹರಡಿರುವ ಜಾಗದಲ್ಲಿ ಮಣ್ಣು ಹಾಕಿ ಅಪಘಾತ ತಡೆಯುವಂತೆ ಸಂಚಾರಿ ಪೊಲೀಸರು ನಗರ ಪಾಲಿಕೆಯವರಿಗೆ ತಿಳಿಸಿದರು. ಆದರೆ ಎರಡೂವರೆ ಗಂಟೆ ಆದರೂ ನಗರ ಪಾಲಿಕೆ ಸಿಬ್ಬಂದಿ ಇತ್ತ ಸುಳಿಯಲಿಲ್ಲ. ಅಲ್ಲಿ ತನಕ ಸಂಚಾರಿ ಪೊಲೀಸರು ಸ್ಥಳದಲ್ಲೆ ನಿಂತು ಹೆಚ್ಚಿನ ಅನಾಹುತ ಆಗುವುದನ್ನು ತಡೆದರು. ಸುಮಾರು 11.30 ಗಂಟೆಗೆ ಸ್ಥಳಕ್ಕೆ ಬಂದ ನಗರ ಪಾಲಿಕೆ ಸಿಬ್ಬಂದಿ ಆಯಿಲ್ ಹರಡಿರುವ ಜಾಗದಲ್ಲಿ ಮಣ್ಣು ಸುರಿದರು. ಅಂತೂ ಹೆಚ್ಚಿನ ಅನಾಹುತ ಆಗುವುದನ್ನು ತಡೆಯುವಲ್ಲಿ ಸಂಚಾರಿ ಪೊಲೀಸರು ಯಶಸ್ವಿಯಾದರು.

ರಾಜ್ಯದ ಜನರ ತಲಾ ಆದಾಯದಲ್ಲಿ ಹೆಚ್ಚಳ



ಹಾಸನ, ಮಾ.1–ರಾಜ್ಯದಲ್ಲಿ ಜನರ ತಲಾ ಆದಾಯ ಹೆಚ್ಚಳವಾಗಿದೆ. ಜಿಡಿಪಿ ಬೆಳವಣಿಗೆಗೆ ರಾಜ್ಯದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳೇ ಕಾರಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿಂದು ವಿವಿಧ ಇಲಾಖೆಗಳಡಿ ಅನುಷ್ಠಾನಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಹೊಸ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ದೇಶದಲ್ಲಿ ಶೇ.18ರಷ್ಟು ಜಿಡಿಪಿ ಬೆಳವಣಿಗೆಯಾಗಿ, ದೇಶದ ಅಭಿವೃದ್ಧಿಗೆ ಅತಿ ಹೆಚ್ಚು ಕೊಡುಗೆ ನೀಡಿದ ಪ್ರಥಮ ರಾಜ್ಯ ಕರ್ನಾಟಕವಾಗಿದೆ. ಈ ಬೆಳವಣಿಗೆ ಗ್ಯಾರಂಟಿ ಯೋಜನೆಗಳ ಫಲ ಎಂಬುದನ್ನು ಅಂಕಿ–ಅಂಶಗಳೇ ತೋರಿಸುತ್ತವೆ ಎಂದರು. ಗ್ಯಾರಂಟಿ ಯೋಜನೆಗಳ ಮೂಲಕ ಜನರ ಖಾತೆಗೆ ಬಂದ ಹಣದಿಂದಾಗಿ ಅವರಲ್ಲಿ ಕೊಳ್ಳುವ ಶಕ್ತಿ, ಉಳಿತಾಯದ ಶಕ್ತಿ ಹೆಚ್ಚಾಗಿದೆ. ಇದರ ಒಟ್ಟು ಪರಿಣಾಮ ರಾಜ್ಯದಲ್ಲಿ ಆರ್ಥಿಕ ಚಟುವಟಿಕೆ ತೀವ್ರಗೊಂಡು ಆರ್ಥಿಕ ಪ್ರಗತಿ ಕಂಡಿದೆ. ಮಹಿಳೆಯರು, ರೈತರು, ಕಾರ್ಮಿಕರು, ಹಿಂದುಳಿದವರು, ದುಡಿಯುವವರು, ಶ್ರಮಿಕರು ಎಲ್ಲರಿಗೂ ಅನುಕೂಲ ಆಗುವ ಜಾತಿ, ಧರ್ಮದ ಮಿತಿ ಇಲ್ಲದ ಕಾರ್ಯಕ್ರಮಗಳನ್ನು ನಾವು ರೂಪಿಸಿ, ಜಾರಿ ಮಾಡಿದ್ದೇವೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಜನರು ನೆಮ್ಮದಿ ಕಂಡುಕೊಳ್ಳುತ್ತಿದ್ದಾರೆ. ಈ ಫಲಾನುಭವಿಗಳ ಗಮನ ಬೇರೆಡೆ ಸೆಳೆಯಲು ಬಿಜೆಪಿ ನಾನಾ ನಾಟಕಗಳನ್ನು ಸೃಷ್ಟಿಸುತ್ತಿದೆ, ಭರ್ಜರಿ ನಾಟಕ ಆಡುತ್ತಿದೆ. ಬಿಜೆಪಿಯ ಟೀಕೆ, ನಾಟಕಗಳಿಗೆ ಮರುಳಾಗಬೇಡಿ ಎಂದು ಜನರಲ್ಲಿ ಮನವಿ ಮಾಡಿದ ಮುಖ್ಯಮಂತ್ರಿ, ಹಾಸನದ ಸರ್ವಾಂಗೀಣ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದ್ದು, ಏರ್‌ಪೋರ್ಟ್ ನಿರ್ಮಾಣಕ್ಕೆ ರಾಜ್ಯದ ಪಾಲಿನ ಹಣವನ್ನು ನಿರಂತರವಾಗಿ ನೀಡುತ್ತಿದೆ. ಅಭಿವೃದ್ಧಿ ವಿಚಾರದಲ್ಲಿ ಪಕ್ಷ ರಾಜಕಾರಣಕ್ಕೆ ಅವಕಾಶ ಕೊಡದೆ ರಾಜ್ಯದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು ಎಂದರು.

ಕುಡಿಯುವ ನೀರು ದುರ್ಬಳಕೆ ಮಾಡಿದರೆ ಕಠಿಣ ಕ್ರಮ

ಮೈಸೂರು, ಮಾ.1– ನಂಜನಗೂಡು ನಗರಸಭಾ ವ್ಯಾಪ್ತಿಯ ಕುಡಿಯುವ ನೀರಿನ ಮೂಲಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತಿರುವುದರಿಂದ ಸಾರ್ವಜನಿಕರಿಗೆ ನೀರನ್ನು ಮಿತವಾಗಿ ಬಳಸಲು ಹಾಗೂ ಖಡ್ಡಾಯವಾಗಿ ವಾಟರ್ ಮೀಟರ್ ಅನ್ನು ಅಳವಡಿಸಿ, ನೀರನ್ನು ಉಪಯೋಗಿಸಲು ಸೂಚಿಸಲಾಗಿದೆ.


ಅನಾವಶ್ಯಕವಾಗಿ ನೀರನ್ನು ಬಳಕೆ ಮಾಡುತ್ತಿರುವುದು ಕಂಡುಬಂದಲ್ಲಿ ದಂಡ ವಿಧಿಸಲಾಗುವುದು, ಇದು ಪುನರಾವರ್ತಿತವಾದಲ್ಲಿ ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಪ್ರಕಾರ ನಲ್ಲಿ ನೀರಿನ ಸಂಪರ್ಕ ಕಡಿತಗೊಳಿಸಲಾಗುವುದು ಹಾಗೂ ಕಾನೂನಿನನ್ವಯ ದಂಡ ವಿಧಿಸಿ ಕಾನೂನು ರೀತ್ಯಾ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ.

ನೀರು ಪೋಲಾಗುತ್ತಿರುವುದು ಕಂಡು ಬಂದಲ್ಲಿ ಟೋಲ್ ಫ್ರೀ ಸಂ:08221–226888ನ್ನು ಸಂಪರ್ಕಿಸಬಹುದು. ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾದರೆ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ನಂಜನಗೂಡಿನ ನಗರ ಸಭೆ ಪೌರಾಯುಕ್ತರು ತಿಳಿಸಿದ್ದಾರೆ.

‘ಅಶ್ವಮೇಧ ಕ್ಲಾಸಿಕ್’ ಬಸ್ಸುಗಳ ಲೋಕಾರ್ಪಣೆ ಸಮಾರಂಭ

ಮೈಸೂರು, ಮಾ.1– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಹೊಸ ವಿನ್ಯಾಸದ ಕರ್ನಾಟಕ ಸಾರಿಗೆ ‘ಅಶ್ವಮೇಧ ಕ್ಲಾಸಿಕ್’ ಬಸ್ಸುಗಳ ಲೋಕಾರ್ಪಣೆ ಸಮಾರಂಭವನ್ನು ಮಾ.2 ರಂದು ಬೆಳಗ್ಗೆ 11 ಗಂಟೆಗೆ ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಲೋಕಾರ್ಪಣೆ ಮಾಡುವರು ಎಂದು ಮೈಸೂರು ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ



ಸರಸ್ವತಿ ವಾಸುದೇವಮೂರ್ತಿ

ಮೈಸೂರು, ಮಾ. 1–ಮೈಸೂರಿನ ಮಹಾಜನ ಶಿಕ್ಷಣ ಸಂಸ್ಥೆ ಮಾಜಿ ಅಧ್ಯಕ್ಷರಾದ ದಿವಂಗತ ವಾಸುದೇವಮೂರ್ತಿ ಅವರ ಪತ್ನಿ, ಹಾಗೂ ವಿ.ವಿ. ಮೊಹಲ್ಲಾ ಗೋಕುಲಂ ರಸ್ತೆ ನಿವಾಸಿ ಸರಸ್ವತಿ ವಾಸುದೇವಮೂರ್ತಿ ಶುಕ್ರವಾರ ನಿಧನರಾದರು. ಮೃತರು ಪುತ್ರಿ ಡಾ॥ ಟಿ.ವಿಜಯಲಕ್ಷ್ಮೀ ಮುರಳೀಧರ್, ಅಳಿಯ ಮುರಳೀಧರ್ ಭಾಗವತ್, ಮೊಮ್ಮಕ್ಕಳು, ಮರಿ ಮಕ್ಕಳು, ರಟ್ಟೇಹಳ್ಳಿ ಕುಟುಂಬ, ಎಂಎಲ್‌ಆರ್ ಕುಟುಂಬ, ಭಾಗವತ್ ಕುಟುಂಬ, ಎಂಜಿಎಂ ಕುಟುಂಬ, ಪ್ರಭಾ ಟಾಕೀಸ್, ಮಹಾಜನ ಶಿಕ್ಷಣ ಸಂಸ್ಥೆ ಸಿಬ್ಬಂದಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿ ಧಾಮದಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಮೊಹಮ್ಮದ್ ಅಕ್ಬರ್



ಮೈಸೂರು, ಮಾ. 1– ಮೈಸೂರಿನ ಕೆಎಸ್‌ಆರ್‌ಟಿಸಿ ಲೇಔಟ್, ಬನ್ನಿಮಂಟಪ ಬಡಾವಣೆ ನಿವಾಸಿ ಹಾಗೂ ಸ್ಕ್ರಾಪ್ ಮರ್ಚೆಂಟ್ ಮೊಹಮ್ಮದ್ ಅಕ್ಬರ್ (75) ಗುರುವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಇಬ್ಬರು ಪುತ್ರರು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ.

ಈ ಸಂಬಂಧ ಗುರುವಾರ ಬನ್ನಿಮಂಟಪ ಬಡಾವಣೆಯ ಮಸೀದಿ ಹಲೀಮ್ ನಗರ ಮಸೀದಿಯಲ್ಲಿ ನಮಾಜ್–ಎ–ಜನಾಜ಼ ನಡೆದ ನಂತರ ಮೈಸೂರಿನ ಟಿಪ್ಪು ಸರ್ಕಲ್ ಹಿಂಭಾಗ, ಮೈಸೂರು–ಬೆಂಗಳೂರು ಹೈವೇ ಬಳಿ ಇರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.5 ರಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪುಷ್ಪಾ



ಮೈಸೂರು, ಮಾ.1–ಮೈಸೂರು ಜಯನಗರ ನಿವಾಸಿ ಲೇ.ಎಂ.ವಿ.ಪರಮೇಶ್ ಅವರ ಪತ್ನಿ ಪುಷ್ಪಾ(73) ಶುಕ್ರವಾರ ನಿಧನರಾದರು. ಮೃತರು ಸೆಸ್ಕಾಂ ಎಇಇ ಎಂ.ಪಿ.ಪ್ರಶಾಂತ್, ಎಂ.ಪಿ.ಸಂದೇಶ್ ಸೇರಿದಂತೆ ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ವಿದ್ಯಾರಣ್ಯಪುರಂನ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.3.2024 ಶನಿವಾರ, ಮಳೆ ನಕ್ಷತ್ರ: ಶತಭಿಷ 20.2.2024 ರಿಂದ 03.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ– ಪ್ರಾಯೋಜಿತ ಕಾರ್ಯಕ್ರಮ, 6.40 ಪದ ಸಂಸ್ಕೃತಿ–ಕನ್ನಡ ಪದಗಳ ಬಳಕೆ–ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು

ಮಧ್ಯಾಹ್ನ: 12.30 ದೇವರನಾಮ–ನರಸಿಂಹ ನಾಯಕ್, ಸಂಗೀತಾ ಕಟ್ಟಿ, 12.45 ಜನಪದ ಸಂಗೀತ, 1.20 ಭಾವಗೀತೆ, 3.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ– ಕೆ.ಬಿ. ಮೀನಾ, 4.00 ನಾಟಕ, 4.30 ನೆನಪಿನಂಗಳ, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರ್ ಉಮೇಶ್, ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ – ಪಂಡಿತ್ ನರೇಶ್ ಮಲ್ಹೋತ್ರಾ – ಗಾಯನ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಬೆಳಗ್ಗೆ 9 ರಿಂದ; ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ, ಬೆಳಗ್ಗೆ 6.30 ರಿಂದ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ :** ಡಾ. ಬಿ.ಆರ್. ಅಂಬೇಡ್ಕರ್ ಅವರ ಅಭಿವೃದ್ಧಿ ದೃಷ್ಟಿಕೋನಗಳು ಮತ್ತು ಸಮಕಾಲೀನ ಜಗತ್ತು ಎಂಬ ವಿಷಯದ ಮೇಲೆ ಎರಡು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು : ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಆಶಯ ಭಾಷಣ : ಅಸೋಸಿಯೇಟ್ ಎಡಿಟರ್ ಅಸಂಗ್ ವಾಂಖೇಡೆ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಸ್ಥಳ: ಘಟಿಕೋತ್ಸವ ಭವನ, ಕರಾಮುವಿವಿ, ಬೆಳಗ್ಗೆ 10.30ಕ್ಕೆ.

■ **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ :** ನೂತನ ಸಿಂಡಿಕೇಟ್ ಸದಸ್ಯರಿಗೆ ಅಭಿನಂದನಾ ಸಮಾರಂಭ, ಅಧ್ಯಕ್ಷತೆ : ಶಾಸಕ ಎ.ಆರ್. ಕೃಷ್ಣಮೂರ್ತಿ, ಮುಖ್ಯ ಅತಿಥಿಗಳು : ಕೆ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ ಎನ್.ಕೆ. ಲೋಕನಾಥ್, ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಡಾ. ಬಿ.ಎನ್. ನಂದಿನಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕರ್ನಾಟಕ ಪೊಲೀಸ್ ಅಕಾಡೆಮಿ ಡಿವೈಎಸ್ಪಿ ಎಂ. ಶಿವಶಂಕರ್, ಸ್ಥಳ: ವಿಶ್ವವಿದ್ಯಾನಿಲಯ ಸಂಜೆ ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜು :** ಫ್ರಾನ್ಸ್‌ನ ಖ್ಯಾತ ಸಂಗೀತಗಾರ ಲೂಗಿ ಕೋರ್ಡಾ ಮತ್ತು ಕ್ರಿಸ್ ಟಲ್‌ಡಾರ್ಕ್ ಅವರಿಂದ ಸಂಗೀತ, ಸ್ಥಳ: ಕಾಲೇಜು ಆವರಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ

■ **ಶ್ರೀ ಛಾಯಾದೇವಿ ಬಿ.ಇಡಿ ಕಾಲೇಜು :** ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಅರಿವು ಮೂಡಿಸುವ ಕಾಲ್ನಡಿಗೆ ಜಾಥಾ, ಭಾಗವಹಿಸುವವರು : ಡಾ. ನಿಶಾಂತ್, ಡಾ. ಅಂತೋಣಿ ಪಾಲ್‌ರಾಜ್ ಸಿ., ಸ್ಥಳ: ಸ್ಥಳ: ಕಾಲೇಜು ಆವರಣ, ರಾಜೇಂದ್ರನಗರ, ಬೆಳಗ್ಗೆ 11ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ :** ವಚನ ವಾಚನ–ವ್ಯಾಖ್ಯಾನ ಹಾಗೂ ಪ್ರಬಂಧ ಸ್ಪರ್ಧೆ, ಉದ್ಘಾಟನೆ : ಪ್ರಾಧ್ಯಾಪಕ ಡಾ. ಡಿ.ಎಸ್. ಗುರು, ವಿದ್ಯಾರ್ಥಿಗಳಿಂದ ವಚನ ವಾಚನ–ವ್ಯಾಖ್ಯಾನ ಹಾಗೂ ಪ್ರಬಂಧ ಸ್ಪರ್ಧೆ, ವಿಷಯ : ಇಂದಿನ ಶಿಕ್ಷಕರಿಗೆ ವಚನ ಸಾಹಿತ್ಯ ಜ್ಞಾನದ ಅವಶ್ಯಕತೆ, ಬಹುಮಾನ ವಿತರಣೆ : ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲರಾದ ಡಾ. ಹೆಚ್.ಎನ್. ಗೀತಾಂಬ, ಉಪಸ್ಥಿತರು : ಪ್ರವಾಚಕರಾದ ಸೋಮಶೇಖರಯ್ಯ, ಮಲ್ಲೇಸ್ವಾಮಿ, ರುದ್ರಮುನಿ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ನಜರ್‌ಬಾದ್, ಮಧ್ಯಾಹ್ನ 3ಕ್ಕೆ

■ **ಜನ ಚೈತನ್ಯ ಫೌಂಡೇಷನ್ :** ಬಾಲಿವುಡ್ ಮ್ಯೂಸಿಕಲ್ ಈವೆಂಟ್, ಖ್ಯಾತ ಘಜಲ್ ಹಾಗೂ ಹಿನ್ನೆಲೆ ಗಾಯಕ ಪಂಕಜ್ ಉದಾಸ್ ಅವರ ಸವಿನೆನಪಿನಲ್ಲಿ, ಮುಖ್ಯ ಅತಿಥಿಗಳು : ಚರ್ಮರೋಗ ತಜ್ಞ ಡಾ. ಕೆ.ಎ.ಕೆ. ಸುರೇಂದ್ರನ್, ಹಿರಿಯ ವಕೀಲ ಎಂ. ಷರೀಫ್, ಸಮಾಜ ಸೇವಕ ರವಿಗೌಡ, ರಂಗಭೂಮಿ ಕಲಾವಿದ ಆರ್.ಸಿ. ರಂಗಶೇಖರ್, ನಿವೃತ್ತ ಇಂಜಿನಿಯರ್ ಎನ್. ಶ್ರೀನಿವಾಸಲು, ಸಹಾಯಕ ಕಾರ್ಯಪಾಲಕ ಅಭಿಯಂತರ ಅಜರುದ್ದೀನ್, ಸಂಗೀತ ನಿರ್ದೇಶಕ ವೈಶಾಖ್ ಶಶಿಧರನ್, ಸ್ಥಳ: ನಾದಬ್ರಹ್ಮ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4 ರಿಂದ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ ಪದ್ಮ ಪುರಾಣ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮೀಪುರಂ, ಸಂಜೆ 5 ರಿಂದ.

■ **ಪ್ರಗತಿಪರ ಸಂಘಟನೆಗಳ ಒಕ್ಕೂಟ :** ಬೆಳಗ್ಗೆ 10.30ಕ್ಕೆ ಪ. ಮಲ್ಲೇಶ್–90, ಭಾರತ ಜನತಂತ್ರದ ಸಮಕಾಲೀನ ತಲ್ಲಣಗಳು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಬೆಳಗ್ಗೆ 10.30ಕ್ಕೆ ಗೋಷ್ಠಿ–5, ಕೋಮುವಾದದ ಸ್ವರೂಪಗಳು, ಉಪಸ್ಥಿತರು : ವಿಮರ್ಶಕ ಪ್ರೊ. ರಾಜೇಂದ್ರ ಚೆನ್ನಿ, ಬೆಳಗ್ಗೆ 11.30 ರಿಂದ ಗೋಷ್ಠಿ–6, ಕಾರ್ಪೊರೇಟ್ ಜಗತ್ತಿನ ಸುಳಿಯಲ್ಲಿ ಭಾರತ, ಉಪಸ್ಥಿತರು : ಹಿರಿಯ ಚಿಂತಕ ಶಿವಸುಂದರ್, ಆರ್ಥಿಕ ತಜ್ಞ ಪ್ರೊ. ಟಿ.ಆರ್. ಚಂದ್ರಶೇಖರ್, ಮ. 12.45ಕ್ಕೆ ಗೋಷ್ಠಿ–7, ಭಾರತದಲ್ಲಿ ಕಾರ್ಮಿಕ ಚಳುವಳಿಯ ಭವಿಷ್ಯ, ಉಪಸ್ಥಿತರು : ಹಿರಿಯ ಕಾರ್ಮಿಕ ಕಾನೂನು ತಜ್ಞ ಬಾಬು ಮ್ಯಾಥ್ಯು, ಹಿರಿಯ ಹೋರಾಟಗಾರ ಸಿದ್ದನಗೌಡ ಪಾಟೀಲ, ಕೆ. ಸೋಮಶೇಖರ್, ಮ. 2.30 ರಿಂದ ಗೋಷ್ಠಿ–8, ಭಾರತದಲ್ಲಿ ಸಮಕಾಲೀನ ಮಹಿಳಾ ಚಳುವಳಿಯ ಸವಾಲುಗಳು ಮತ್ತು ಸಾಧ್ಯತೆಗಳು, ಉಪಸ್ಥಿತರು : ಹಿರಿಯ ಹೋರಾಟಗಾರ್ತಿ ಬೃಂದಾ ಕಾರಟ್, ಪ್ರಾಧ್ಯಾಪಕರಾದ ಸಬಿತಾ ಬನ್ನಾಡಿ, ನಿವೃತ್ತ ಪ್ರಾಧ್ಯಾಪಕ ಡಾ. ಆರ್. ಸುನಂದಮ್ಮ, ಮ. 3.30ಕ್ಕೆ ಗೋಷ್ಠಿ–9, ಭಾರತೀಯ ಸಮಾಜದಲ್ಲಿ ಗಾಂಧಿ ಮತ್ತು ಅಂಬೇಡ್ಕರ್, ಉಪಸ್ಥಿತರು : ನಿವೃತ್ತ ಪ್ರಾಧ್ಯಾಪಕ ಡಾ. ಎಸ್. ಚಂದ್ರಶೇಖರ್, ಡಾ. ಎಚ್.ಎಸ್. ಅನುಪಮಾ, ಸಂಜೆ 4.30ಕ್ಕೆ ಸಮಾರೋಪ ಭಾಷಣ–ಡಿಫರೆಂಟ್ ಟೇಲ್ಸ್‌ನ ಪುಸ್ತಕಗಳ ಬಿಡುಗಡೆ ಹಾಗೂ ‘ಮೈಸೂರು ಘೋಷಣೆ’ ಅಧ್ಯಕ್ಷತೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸಮಾರೋಪ ನುಡಿ : ಬರಹಗಾರ ಕಾಂಚ ಐಲಯ್ಯ, ಪುಸ್ತಕ ಬಿಡುಗಡೆ : ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಪ್ರೊ. ಸಬೀಹಾ ಭೂಮಿಗೌಡ, ಪುಸ್ತಕ ಪರಿಚಯ : ಸಂಪಾದಕಿ ಸುಕನ್ಯಾ ಕನಾರಳ್ಳಿ, ಸ್ಥಳ: ಕಲಾಮಂದಿರ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಕಲಾಸುರುಚಿ :** ಹಿಂದೂಸ್ಥಾನಿ ಸಂಗೀತ ಕಛೇರಿ, ಮನೋಹರ ಪಟವರ್ಧನ್ ಅವರಿಂದ ಹಾಡುಗಾರಿಕೆ, ಪಂಡಿತ್ ವೀರಭದ್ರಯ್ಯ–ಹಾರ್ಮೋನಿಯಂ, ಪಂಡಿತ್ ಭೀಮಾಶಂಕರ್ ಬಿದನೂರು–ತಬಲ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 6.30 ರಿಂದ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 2 ಶನಿವಾರ 2024

ಸಂಪುಟ: 44 | ಸಂಚಿಕೆ: 314 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬೆಂಗಳೂರು ವೈಟ್ ಫೀಲ್ಡ್‌ನ ಪ್ರತಿಷ್ಠಿತ ರಾಮೇಶ್ವರಂ ಕೆಫೆಯಲ್ಲಿ

ಬಾಂಬ್ ಸ್ಫೋಟ

● ಹೋಟೆಲ್ ಸಿಬ್ಬಂದಿ ಸೇರಿ 9 ಮಂದಿಗೆ ಗಾಯ ● ಐಇಡಿ ಬಳಸಿ ಸ್ಫೋಟ; ಕಡಿಮೆ ಸ್ಫೋಟಕ ಸಾಮರ್ಥ್ಯದಿಂದ ತಪ್ಪಿದ ಜೀವಹಾನಿ ● ಮತ್ತೊಮ್ಮೆ ಬೆಚ್ಚಿಬಿದ್ದ ರಾಜಧಾನಿ ಬೆಂಗಳೂರು





ಬೆಂಗಳೂರು, ಮಾ.1–ರಾಜ್ಯ ರಾಜಧಾನಿ ಬೆಂಗಳೂರಿನ ವೈಟ್ ಫೀಲ್ಡ್ ಬಳಿ ಕುಂದನ ಹಳ್ಳಿ ಮುಖ್ಯ ರಸ್ತೆಯಲ್ಲಿರುವ ಬ್ರೂಕ್ ಫೀಲ್ಡ್‌ನ ಪ್ರತಿಷ್ಠಿತ ರಾಮೇಶ್ವರಂ ಕೆಫೆಯಲ್ಲಿ ಶುಕ್ರವಾರ ಮಧ್ಯಾಹ್ನ ಬಾಂಬ್ ಸ್ಫೋಟಗೊಂಡಿದ್ದು, ಹೋಟೆಲ್ ಸಿಬ್ಬಂದಿ ಸೇರಿದಂತೆ 9 ಮಂದಿ ಗಾಯಗೊಂಡಿದ್ದಾರೆ. ಈ ಘಟನೆಯಿಂದಾಗಿ ಸಿಲಿಕಾನ್ ಸಿಟಿ ಬೆಂಗಳೂರು ಮತ್ತೊಮ್ಮೆ ಬೆಚ್ಚಿ ಬಿದ್ದಿದೆ.

ರಾಮೇಶ್ವರಂ ಕೆಫೆಯಲ್ಲಿ ಸ್ಫೋಟಿಸಿರುವುದು ಸುಧಾರಿತ ಬಾಂಬ್ ಆಗಿದ್ದು, ಅದರ ತೀವ್ರತೆ ಕಡಿಮೆ ಪ್ರಮಾಣದಲ್ಲಿತ್ತು. ಹೀಗಾಗಿ ಭಾರೀ ಅನಾಹುತ ಸಂಭವಿಸಿಲ್ಲ. ಸ್ಫೋಟಕ್ಕೆ ಐಇಡಿ ಬಳಸಲಾಗಿದ್ದು, ಟೈಮರ್ ಅಳವಡಿಸಿ ಬಾಂಬ್ ಅನ್ನು ಸ್ಫೋಟಿಸಲಾಗಿದೆ. ಬಾಂಬ್ ಸ್ಫೋಟದಿಂದ ಹೋಟೆಲ್‌ನ ಪೀಠೋಪಕರಣಗಳು ಧ್ವಂಸಗೊಂಡಿದ್ದು, ಹೋಟೆಲ್ ದಟ್ಟ ಹೊಗೆಯಿಂದ ಆವರಿಸಿತ್ತು. ಗ್ರಾಹಕರು ಮತ್ತು ಸಿಬ್ಬಂದಿ ಭಯಭೀತರಾಗಿ ದಿಕ್ಕೆಟ್ಟು ಓಡಿದರು.

ವಾಶ್ ಬೇಸಿನ್ ಬಳಿಯ ಟೇಬಲ್‌ನಲ್ಲಿ ಕುಳಿತು ಊಟ ಮಾಡುತ್ತಿದ್ದ ಗ್ರಾಹಕರು ಗಾಯಗೊಂಡಿದ್ದಾರೆ. ಸ್ಫೋಟದಲ್ಲಿ ತೀವ್ರವಾಗಿ ಗಾಯಗೊಂಡ ಮಹಿಳೆಯೋರ್ವರು ನರಳುತ್ತಾ ಬಿದ್ದಿದ್ದರೆ, ಮತ್ತೆ ಕೆಲವು ಗಾಯಾಳುಗಳು ದೇಹದಲ್ಲಿ ರಕ್ತ ಸುರಿಯುತ್ತಿರುವಂತೆಯೇ ಕೆಫೆಯಿಂದ ಓಡಿ ● 7ನೇ ಪುಟಕ್ಕೆ





ಸ್ಫೋಟದ ದೃಶ್ಯಾವಳಿಗಳು ಸಿಸಿ ಕ್ಯಾಮರಾದಲ್ಲಿ ಸೆರೆ

ಯಾವುದೇ ಕ್ಷಣದಲ್ಲಿ ಆರೋಪಿ ಬಂಧಿಸುವ ವಿಶ್ವಾಸ

ಬೆಂಗಳೂರು, ಮಾ.1–ರಾಮೇಶ್ವರಂ ಕೆಫೆಯಲ್ಲಿ ಇಂದು ನಡೆದಿರುವ ಬಾಂಬ್ ಸ್ಫೋಟದ ದೃಶ್ಯಾವಳಿಗಳು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿವೆ. ಬೆಳಗ್ಗೆ 11.35ಕ್ಕೆ ಕೆಫೆ ಪ್ರವೇಶಿಸಿದ ಸುಮಾರು 30 ವರ್ಷ ವಯಸ್ಸಿನ ವ್ಯಕ್ತಿ ಕ್ಯಾಶ್ ಕೌಂಟರ್‌ನಲ್ಲಿ ರವೆ ಇಡ್ಲಿಗೆ ಟೋಕನ್ ಖರೀದಿಸಿ, ಅದನ್ನು ತಿಂದ ನಂತರ 11.42ಕ್ಕೆ ವಾಶ್ ಬೇಸಿನ್ ಬಳಿ ಬಂದು ಕೈತೊಳೆದ ನಂತರ 11.44ಕ್ಕೆ ತಾನು ತಂದಿದ್ದ ಬ್ಯಾಗ್ ಅನ್ನು ಅಲ್ಲೇ ಇಟ್ಟು ನಿರ್ಗಮಿಸಿರುವುದು ಹೋಟೆಲ್‌ನ ಸಿಸಿ ಕ್ಯಾಮರಾ ದೃಶ್ಯಾವಳಿಗಳಿಂದ ಬೆಳಕಿಗೆ ಬಂದಿದೆ. ಈ ವ್ಯಕ್ತಿ ಇಟ್ಟಿದ್ದ ಬ್ಯಾಗ್ 12.55ಕ್ಕೆ ಸ್ಫೋಟಗೊಂಡಿದೆ. ಸಣ್ಣ ಪ್ರಮಾಣದ ಸುಧಾರಿತ ಬಾಂಬ್ ಅನ್ನು ಟೈಮರ್ ಮೂಲಕ ಸ್ಫೋಟಿಸಲಾಗಿದೆ ● 7ನೇ ಪುಟಕ್ಕೆ

ರಾಮೇಶ್ವರಂ ಕೆಫೆಯೇ ಸ್ಫೋಟದ ಟಾರ್ಗೆಟ್ಟಾ...!?

ವ್ಯವಸ್ಥಾಪಕ ನಿರ್ದೇಶಕಿ ದಿವ್ಯಾ ಹೇಳಿಕೆಯಿಂದ ಹತ್ತು–ಹಲವು ಅನುಮಾನ!

ಬೆಂಗಳೂರು, ಮಾ. 1–ರಾಜಧಾನಿ ಬೆಂಗಳೂರಿನಲ್ಲಿ ಶುಕ್ರವಾರ ಬಾಂಬ್ ಸ್ಫೋಟಿಸಿದ ದುಷ್ಕರ್ಮಿಗಳು ಪ್ರತಿಷ್ಠಿತ ರಾಮೇಶ್ವರಂ ಕೆಫೆಯಲ್ಲಿ ಟಾರ್ಗೆಟ್ ಮಾಡಿಕೊಂಡಿದ್ದರೇ? ಎಂಬ ಅನುಮಾನ ವ್ಯಕ್ತವಾಗಿದೆ. ದುಷ್ಕರ್ಮಿಗಳು ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟಿಸಲು ಈ ಹಿಂದೆಯೂ ಪ್ರಯತ್ನಿಸಿ ವಿಫಲವಾಗಿರಬಹುದು ಅಥವಾ ಬ್ಯಾಗ್‌ಗಳನ್ನಿಟ್ಟು ಟ್ರಯಲ್ ನೋಡಿರಬಹುದು ಎಂದು ವಿಶ್ಲೇಷಿಸಲಾಗುತ್ತಿದೆ. ಟೈಮರ್ ಸೆಟ್ ಮಾಡಿ ಸುಧಾರಿತ ಬಾಂಬ್ ಅನ್ನು ಸ್ಫೋಟಿಸಿರುವ ದುಷ್ಕರ್ಮಿಗಳು, ಹೆಚ್ಚಿನ ಪ್ರಮಾಣದಲ್ಲಿ ● 7ನೇ ಪುಟಕ್ಕೆ

ಆರ್ಥಿಕ, ಸಾಮಾಜಿಕ ಸಮಾನತೆ ಹೊರತು ಸ್ವಾತಂತ್ರ್ಯಕ್ಕೆ ಬೆಲೆಯೇ ಇಲ್ಲ

● ಮುಖ್ಯಮಂತ್ರಿ ಸಿದ್ದರಾಮಯ್ಯ ಬಲವಾದ ಪ್ರತಿಪಾದನೆ ● ಪ.ಮಲ್ಲೇಶ್–90 ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಆಶಯ ನುಡಿ ● ಸರ್ವರಿಗೂ ಸಮಬಾಳು; ಸರ್ವರಿಗೂ ಸಮಪಾಲು ಮೂಲಕ ಬಹಳ ಹಿಂದೆಯೇ ಶರಣರು ಸಮಾನತೆ ಸಂದೇಶ ಸಾರಿದ್ದರು



ಮೈಸೂರಿನ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಕಲಾಮಂದಿರದಲ್ಲಿ ಏರ್ಪಡಿಸಿರುವ ಪ.ಮಲ್ಲೇಶ್–90 'ರಾಷ್ಟ್ರೀಯ ವಿಚಾರ ಸಂಕಿರಣ'ದಲ್ಲಿ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಂಡಿದ್ದರು.

ಮೈಸೂರು, ಮಾ.1(ಎಸ್‌ಬಿಡಿ)–ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಸಾಧ್ಯವಾಗದ ಹೊರತು ಸ್ವಾತಂತ್ರ್ಯ ಸಾರ್ಥಕವಾಗುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರಿನ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಕಲಾಮಂದಿರದಲ್ಲಿ ಏರ್ಪಡಿಸಿರುವ ಪ.ಮಲ್ಲೇಶ್–90 'ಭಾರತದ ಜನತಂತ್ರದ ಸಮಕಾಲೀನ ತಲ್ಲಣಗಳು ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ'ದಲ್ಲಿ ಶುಕ್ರವಾರ ಪಾಲ್ಗೊಂಡು ಆಶಯದ ನುಡಿಗಳನ್ನಾಡಿದ ಅವರು, ಪ್ರಜಾಪ್ರಭುತ್ವದ ಮೂಲಕ ಎಲ್ಲರಿಗೂ ಒಂದೇ ಮತದ ಹಕ್ಕು. ಎಲ್ಲರ ಮತಕ್ಕೂ ಒಂದೇ ಮೌಲ್ಯ. ಈ ಮೂಲಕ ರಾಜಕೀಯ ಸಮಾನತೆ ಸಿಕ್ಕಿದೆ. ಆದರೆ ರಾಜಕೀಯ ಪ್ರಜಾಪ್ರಭುತ್ವವು ಸಾಮಾಜಿಕ ಹಾಗೂ ಆರ್ಥಿಕ ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಿಲ್ಲಬೇಕು. ಸಾಮಾಜಿಕ ಹಾಗೂ ಆರ್ಥಿಕ ಸಮಾನತೆ ಸಾಕಾರವಾಗದ ಹೊರತು ಸ್ವಾತಂತ್ರ್ಯ ಸಾರ್ಥಕವೆನಿಸುವುದಿಲ್ಲ ಎಂದರು. ಸಾಮಾಜಿಕ, ಆರ್ಥಿಕ ಸಮಾನತೆ ತುಂಬಾ ಅಗತ್ಯ. ಎಲ್ಲರಿಗೂ ಸಮಪಾಲು, ಸಮಬಾಳು ಇರಬೇಕು. ಆದರೆ ಜಾತಿ ವ್ಯವಸ್ಥೆ ಕಾರಣಕ್ಕೆ ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆ ನಿರ್ಮಾಣವಾಗಿದೆ. ಮನುಸ್ಮೃತಿ ಪರಿಣಾಮ ಚಾತುರ್ವರ್ಣ ನಿರ್ಮಾಣವಾಗಿ ಶೂದ್ರ ಜನಾಂಗ ಹಾಗೂ ಮಹಿಳೆಯರು ಅಕ್ಷರ ಸಂಸ್ಕೃತಿಯಿಂದ ● 4ನೇ ಪುಟಕ್ಕೆ

ಮುಡಾ ನೂತನ ಅಧ್ಯಕ್ಷರಾಗಿ ಕೆ.ಮರಿಗೌಡ ಅಧಿಕಾರ ಸ್ವೀಕಾರ

ಬಡ, ಮಧ್ಯಮ ವರ್ಗದವರಿಗೆ 25 ಸಾವಿರ ಮನೆ ನಿರ್ಮಿಸುವ ಗುರಿ

● ಸೋಮವಾರ ಮುಡಾ ಪ್ರಗತಿ ಪರಿಶೀಲನೆ ● ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ● ಬಲ್ಲಹಳ್ಳಿಯಲ್ಲಿ ಬಡಾವಣೆ ನಿರ್ಮಾಣಕ್ಕೆ ಕ್ರಮ ● ಬಡಾವಣೆಗಳಿಗೆ ಮೂಲ ಸೌಕರ್ಯ ಕಲ್ಪಿಸುವ ಭರವಸೆ ● ಮುಡಾ ಆಸ್ತಿ ಸಂರಕ್ಷಣೆಗೆ ಮೊದಲ ಆದ್ಯತೆ

ಮೈಸೂರು, ಮಾ.1(ಬಿಎಲ್‌ಯು)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನೂತನ ಅಧ್ಯಕ್ಷರಾಗಿ ಕೆ. ಮರಿಗೌಡ ಅಧಿಕಾರ ಸ್ವೀಕರಿಸಿದರು. ಮುಡಾ ಅಧ್ಯಕ್ಷನಾಗಿ ನನ್ನ ಅಧಿಕಾರಾವಧಿಯಲ್ಲಿ ಬಡ ಹಾಗೂ ಮಧ್ಯಮ ವರ್ಗದವರಿಗೆ 25 ಸಾವಿರ ಮನೆ ನಿರ್ಮಾಣ ಮಾಡುವ ಯೋಜನೆ ರೂಪಿಸುವೆ ಎಂದು ಇದೇ ವೇಳೆ ಮರಿಗೌಡರು ಭರವಸೆ ನೀಡಿದರು.

ಮುಡಾ ಅಧ್ಯಕ್ಷರಾಗಿ ತಮ್ಮ ಆಪ್ತ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರೂ ಆದ ಕಾಂಗ್ರೆಸ್ ಮುಖಂಡ ಮರಿಗೌಡ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇಮಕ ಮಾಡಿದ್ದಾರೆ. ಸರ್ಕಾರದಿಂದ ನೇಮಕಾತಿ ಆದೇಶ ಕೈ ಸೇರುತ್ತಿದ್ದಂತೆ ಇಂದು ಮಧ್ಯಾಹ್ನ ಶುಭ ಸಮಯದಲ್ಲಿ ಮರಿಗೌಡ ಮುಡಾ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ಇದಕ್ಕೂ ಮುನ್ನ ತಮ್ಮ ಕಚೇರಿಯಲ್ಲಿ ವೆಂಕಟೇಶ್ವರ, ಪದ್ಮಾವತಿ ಹಾಗೂ ಗಣಪತಿ ಫೋಟೋಗಳನ್ನಿಟ್ಟು ಪೂಜೆ ಸಲ್ಲಿಸಿದರು. ಈ ವೇಳೆ ತಮ್ಮನ್ನು ಮುಡಾ ಅಧ್ಯಕ್ಷರಾಗಿ ನೇಮಕ ಮಾಡಿರುವ ಸಿದ್ದರಾಮಯ್ಯ ಭಾವಚಿತ್ರವನ್ನು ತಮ್ಮ ಕಚೇರಿಯಲ್ಲಿ ● 4ನೇ ಪುಟಕ್ಕೆ



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಮರಿಗೌಡ ಶುಕ್ರವಾರ ಅಧಿಕಾರ ಸ್ವೀಕರಿಸಿದರು.

ಮುಡಾ ಇರುವುದು ಖಾಸಗಿ ಬಡಾವಣೆಗಳ ಅನುಕೂಲಕಲ್ಲ; ಸಾರ್ವಜನಿಕರಿಗೆ ಸೂರು ಕಲ್ಪಿಸಲು

ಖಾಸಗಿ ಬಡಾವಣೆ ನಿರ್ಮಾಣಕ್ಕೆ ಭೂ ಪರಿವರ್ತನೆ ಹಾಗೂ ಎನ್ ಒಸಿ ನೀಡಲು ಮಾತ್ರ ಮುಡಾ ಸೀಮಿತ ವಾಗಿದೆ. ಈ ಅಪವಾದವನ್ನು ಮೊದಲು ತಪ್ಪಿಸಿ ಸಾರ್ವಜನಿಕರಿಗೆ ನಿವೇಶನ ಹಾಗೂ ಮನೆ ನೀಡಿ ಸೂರು ಕಲ್ಪಿಸುವ ಜವಾಬ್ದಾರಿಯನ್ನು ಮುಡಾ ನಿರ್ವಹಣೆ ಮಾಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತೇನೆ ಎಂದು ಮುಡಾ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಕೆ. ಮರಿಗೌಡರು ಭರವಸೆ ನೀಡಿದರು. ಇಡಬ್ಲ್ಯೂಎಸ್, ಎಲ್‌ಐಜಿ ಹಾಗೂ ಎಂಐಜಿ ವರ್ಗದಲ್ಲಿ ಒಟ್ಟು 25 ಸಾವಿರ ಮನೆಗಳನ್ನು ನಿರ್ಮಾಣ ಮಾಡುವ ● 4ನೇ ಪುಟಕ್ಕೆ

ಪ್ರಭಾವಿಗಳಿಂದ ಕೆಆರ್‌ಎಸ್ ನೀರಿಗೆ ಕನ್ನ...!


● ಬರದಿಂದ ಕುಡಿಯುವ ನೀರಿಗೆ ಹಾಹಾಕಾರವಿದ್ದರೂ ಅಕ್ರಮವಾಗಿ ಪೈಪ್ ಮೂಲಕ ನೀರು ಹರಿಸಿಕೊಳ್ಳುತ್ತಿರುವುದು ಬೆಳಕಿಗೆ ● ಫಾರ್ಮ್‌ಹೌಸ್, ರೆಸಾರ್ಟ್‌ಗಳಿಂದ ಅಕ್ರಮ ನೀರಿನ ಸಂಪರ್ಕ ● ಅಧಿಕಾರಿಗಳ ದಾಳಿ; ನೀರು ಪೂರೈಕೆಗೆ ಬಳಸುತ್ತಿದ್ದ ಪರಿಕರಗಳು ವಶಕ್ಕೆ; ವಿದ್ಯುತ್ ಸಂಪರ್ಕ ಕಡಿತ



ಕೃಷ್ಣರಾಜ ಸಾಗರ ಅಣೆಕಟ್ಟೆಯ ಹಿನ್ನೀರಿನಲ್ಲಿ ಅಕ್ರಮವಾಗಿ ಪೈಪ್‌ಲೈನ್ ಅಳವಡಿಸಿ ತಮ್ಮ ಫಾರ್ಮ್‌ಹೌಸ್ ಹಾಗೂ ರೆಸಾರ್ಟ್‌ಗಳಿಗೆ ನೀರು ಪೂರೈಸಿಕೊಳ್ಳುತ್ತಿರುವುದು.



ಹಿನ್ನೀರು ಪ್ರದೇಶದಲ್ಲಿ ಅಕ್ರಮವಾಗಿ ಪಂಪ್‌ಸೆಟ್ ಇಟ್ಟಿರುವುದು.



ಫಾರ್ಮ್‌ಹೌಸ್‌ಗೆ ಅಕ್ರಮವಾಗಿ ಪೈಪ್ ಅಳವಡಿಸಿರುವುದು.

ಮಂಡ್ಯ,ಮಾ.1(ಮೋಹನ್‌ರಾಜ್)–ಬರದ ಹಿನ್ನೆಲೆಯಲ್ಲಿ ಕೆಆರ್‌ಎಸ್ ಒಡಲು ಬರಿದಾಗಿ ಬೆಂಗಳೂರು, ಮೈಸೂರು, ಮಂಡ್ಯ, ರಾಮನಗರ ಜಿಲ್ಲೆಗಳಿಗೆ ಕುಡಿಯುವ ನೀರಿಗೂ ಹಾಹಾಕಾರ ಉಂಟಾಗಿದ್ದರೆ, ಇತ್ತ ಕೃಷ್ಣರಾಜ ಸಾಗರ ಅಣೆಕಟ್ಟೆಯ ಹಿನ್ನೀರಿನಲ್ಲಿ ಪ್ರಭಾವಿಗಳು ಅಕ್ರಮವಾಗಿ ಪೈಪ್‌ಲೈನ್ ಅಳವಡಿಸಿ ತಮ್ಮ ಫಾರ್ಮ್‌ಹೌಸ್ ಹಾಗೂ ರೆಸಾರ್ಟ್‌ಗಳಿಗೆ ನೀರು ಪೂರೈಸಿಕೊಳ್ಳುತ್ತಿರುವ ಪ್ರಕರಣ ಬೆಳಕಿಗೆ ಬಂದಿದ್ದು, ಶುಕ್ರವಾರ ದಾಳಿ ನಡೆಸಿದ ಅಧಿಕಾರಿಗಳು ಈ ಅಕ್ರಮವನ್ನು ಬಯಲಿಗೆಳೆದು ಪರಿಕರಗಳನ್ನು ವಶಪಡಿಸಿಕೊಂಡಿದ್ದಾರೆ. ಕೃಷ್ಣರಾಜ ಸಾಗರದ ಹಿನ್ನೀರಿನ ಮುಖ್ಯದ್ವಾರದ ಬಳಿಯೇ ಪ್ರಭಾವಿ ಅಧಿಕಾರಿಯೊಬ್ಬರು ಫಾರ್ಮ್‌ಹೌಸ್ ನಿರ್ಮಿಸಿದ್ದು, ಕೆಆರ್‌ಎಸ್ ಹಿನ್ನೀರಿಗೆ ವಿದ್ಯುತ್ ಚಾಲಿತ ಮೋಟಾರ್ ಅಳವಡಿಸಿ, ಸುಮಾರು 300 ಮೀಟರ್ ಪೈಪ್ ಅಳವಡಿಸಿ ಅಕ್ರಮವಾಗಿ ಫಾರ್ಮ್‌ಹೌಸ್‌ಗೆ ಕಳೆದ ಹಲವು ತಿಂಗಳಿನಿಂದ ನೀರು ಸರಬರಾಜು ಮಾಡಿಕೊಳ್ಳುತ್ತಿದ್ದಾರೆ ಎನ್ನಲಾಗಿದೆ.

ಕೆಆರ್‌ಎಸ್‌ನಿಂದ ನೀರು ಸಂಪರ್ಕ ಹೊಂದಿರುವ ಕೆಲವರು ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಕಾವೇರಿ ಜಲಾನಯನ ಪ್ರದೇಶದಲ್ಲಿ ಬರ ಇದ್ದರೂ ಅದನ್ನು ಲೆಕ್ಕಿಸದೇ ಈ ರೀತಿ ● 4ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗುಂಡ : ಹೇರ್ ಕಟ್ಟಿಂಗ್ ಮಾಡಪ್ಪಾ

ಅಂಗಡಿಯುವ : ಯಾವ ಸ್ಟೈಲ್ ಮಾಡಲಿ ಸಾರ್?

ಗುಂಡ : ಸ್ಟೈಲು–ಗೀಲು ಬೇಡಪ್ಪ. ಹೆಂಡತಿ ಕೈಗೆ ಕೂದಲು ಸಿಗಬಾರದಷ್ಟೇ!

ಮೈಸೂರು ಮಿತ್ರ

ಶನಿವಾರ, 2 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಮನುಷ್ಯನು ಕಲಿಯಲು ಬಯಸುವುದಾದರೆ ಅವನ ಪ್ರತಿಯೊಂದು ತಪ್ಪು ಅವನಿಗೆ ಶಿಕ್ಷಣ ಕೊಡುತ್ತದೆ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾವಿಯ ಬಾಯನ್ನು ಮುಚ್ಚಬಹುದು, ಜನಗಳ ಬಾಯನ್ನಲ್ಲ

ನಿಮ್ಮ ಪತ್ರಗಳು

ಕನ್ನಡಿಗರ ಕಣ್ಮಣಿ ನಿವೃತ್ತ ಐಎಎಸ್ ಅಧಿಕಾರಿ ಕೆ. ಶಿವರಾಂ ಎಂದಿಗೂ ಅಮರ.!



ಮಾನ್ಯರೆ,

ನಿವೃತ್ತ ಹಿರಿಯ ಐಎಎಸ್ ಅಧಿಕಾರಿ, ಜನಪ್ರಿಯ ಚಿತ್ರನಟ ಹಾಗೂ ರಾಜಕಾರಣಿ ಕೆ.ಶಿವರಾಂ ಅಗಲಿಕೆ ದಲಿತ ಹಾಗೂ ಹಿಂದುಳಿದ ವರ್ಗಗಳ ಸಮುದಾಯಕ್ಕೆ ದೊಡ್ಡ ನಷ್ಟ ಉಂಟುಮಾಡಿದೆ. ಓದಿನ ಹಸಿವಿಗೆ ಇವರು ಉದಾಹರಣೆ. ಕರ್ನಾಟಕದ ಅಂಬೇಡ್ಕರ್ ಎಂದು ಹೆಸರಾಗಿದ್ದರು.

ಅತ್ಯಂತ ಕಡು ಬಡತನವಿದ್ದರೂ ಕೆಎಎಸ್ ಎರಡು ಸಲ ಉತ್ತೀರ್ಣ. ಸರ್ಕಾರಿ ಕೆಲಸದಲ್ಲಿ ಇದ್ದಾಗಲೇ ಛಲ ಬಿಡದೆ ಓದಿ 1986ರಲ್ಲಿ ಐಎಎಸ್ ಕನ್ನಡದಲ್ಲಿ ತೇರ್ಗಡೆ ಹೊಂದಿ ಇಡೀ ದೇಶದಲ್ಲೇ ಚರಿತ್ರೆ ಸೃಷ್ಟಿಸಿ ಸಾಧಿಸಿದ ಏಕೈಕ ಮೊದಲ ಕನ್ನಡಿಗ. ಇಂದಿಗೂ ಕನ್ನಡ ಮಾಧ್ಯಮದಲ್ಲಿ ಐಎಎಸ್ ಮಾಡಬೇಕು ಎನ್ನುವ ಪ್ರತಿಯೊಬ್ಬ ವಿದ್ಯಾರ್ಥಿಗೂ ಕೆ.ಶಿವರಾಂ ಪ್ರೇರಣೆ. ತಮ್ಮ ಅಧಿಕಾರಾ ವಧಿಯಲ್ಲಿ ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಸಾಕಷ್ಟು ಜನಪರ ಕೆಲಸಗಳ ಮೂಲಕ ರಾಜ್ಯದ ವಿವಿಧ ಇಲಾಖೆಗಳು ಹಾಗೂ ಜಿಲ್ಲೆಗಳಲ್ಲಿ ಪಾರದರ್ಶಕತೆ ಆಡಳಿತ ನೀಡುವ ಮುಖೇನ ವಿಶಿಷ್ಟತೆಗೆ ಹೆಸರಾಗಿ ಜನ ಮನ್ನಣೆ ಗಳಿಸಿದ್ದರು.

"ಬಾ ನಲ್ಲೆ ಮಧು ಚಂದ್ರಕೆ" ಎಂಬ ಸುಂದರ ಕಥನದಲ್ಲಿ ನಟಿಸಿ ಜನಪ್ರಿಯ ನಟನಾಗಿ ಕನ್ನಡಿಗರ ಮನೆ ಮಾತಾಗಿದ್ದು, ಈಗ ಇತಿಹಾಸ. ಸುಮಾರು 10–12 ಸಿನಿಮಾಗಳಲ್ಲಿ ನಾಯಕನಾಗಿ ನಟಿಸುವ ಮೂಲಕ ಚಿತ್ರರಂಗದಲ್ಲೂ ಛಾಪು ಮೂಡಿಸಿದ್ದ ಪ್ರತಿಭಾನ್ವಿತ ಕಲಾವಿದ.

2014 ರಿಂದ ಇತ್ತ ರಾಜಕೀಯ ರಂಗದಲ್ಲೂ ತಮ್ಮ ಸೇವೆ ಸಲ್ಲಿಸುವ ಇರಾದೆಯಿಂದಾಗಿ ಐಎಎಸ್‌ಗೆ ಸ್ವಯಂ ನಿವೃತ್ತಿ ಘೋಷಿಸುವ ಮೂಲಕ ರಾಜ್ಯದ ಪ್ರಮುಖ ಜನಾಂಗಗಳಲ್ಲಿ ಒಂದಾಗಿದ್ದ ಪರಿಶಿಷ್ಟ ಜಾತಿ (ಬಲಗೈ) ಸಮುದಾಯವನ್ನು ಒಗ್ಗೂಡಿಸುವ ನಿಟ್ಟಿನಲ್ಲಿ "ಛಲವಾದಿ ಮಹಾಸಭಾ" ಎಂಬ ಸಂಘಟನೆಯನ್ನು ಹುಟ್ಟು ಹಾಕುವ ಮುಖಾಂತರ ಸಮಾಜ ಸೇವಾ ಕಾರ್ಯಗಳಲ್ಲಿ ಸಕ್ರಿಯರಾಗಿದ್ದರು. ತದನಂತರ, ರಾಜಕೀಯ ಅಗ್ನಿಪರೀಕ್ಷೆಗೆ ಸಜ್ಜಾಗುವ ಮುಖೇನ ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಪ್ರಮುಖ ಮೂರು ಪಕ್ಷಗಳಲ್ಲಿ ಕೂಡ ಅದೃಷ್ಟ ಪರೀಕ್ಷೆಗೆ ಇಳಿದಿದ್ದರು. ಅಂತಿಮವಾಗಿ ಬಿಜೆಪಿಯಲ್ಲಿ ಉಳಿಯುವ ಮೂಲಕ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಗಡಿನಾಡು ಚಾಮರಾಜನಗರ ಲೋಕಸಭಾ ಮೀಸಲು ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಆಶಯ ಹೊಂದಿದ್ದರು. ಆದರೆ, ವಿಧಿಯ ಆಟವೇ ಬೇರೆಯದ್ದಾಗಿತ್ತು. ಬಹುಶಃ ರಾಜಕೀಯ ರಂಗದಲ್ಲೂ ಸರಿಯಾಗಿ ಅವಕಾಶ ಸಿಕ್ಕಿ ಚುನಾಯಿತರಾಗಿದ್ದರೆ ತಮ್ಮ ಜ್ಞಾನ ಬಲದಿಂದ ಇನ್ನಷ್ಟು ಜನರ ನಡುವಿನ ಕೊಂಡಿಯಾಗಿ ಕೆ.ಶಿವರಾಂ ವಿಸ್ತಾರವಾಗುತ್ತಿದ್ದರು. ಒಬ್ಬ ವ್ಯಕ್ತಿ ನಿಷ್ಠೆ ಬದ್ಧತೆ ಆಸಕ್ತಿ ಇದ್ದರೆ ಜೀವಮಾನದಲ್ಲಿ ಎಷ್ಟೆಲ್ಲಾ ರಂಗದಲ್ಲೂ ಸಾಧನೆ ಮಾಡಬಹುದು ಹಾಗೂ ತಾನು ಬಂದ ಬೇರು ಮಟ್ಟವನ್ನು ಎಷ್ಟೇ ಉನ್ನತ ಸ್ಥಾನ ಅಲಂಕರಿಸಿದರು ಮರೆಯಬಾರದು ಎಂಬುದಕ್ಕೆ ಇವರು ಸಾಕ್ಷಿ. "ನಾನು ಗುಡಿಸಲಿನಿಂದ ಬಂದವನು ಗುಡಿಸಲಿನಲ್ಲಿರುವವರ ಪರ ಕೆಲಸ ಮಾಡಿದ್ದೇನೆ.." ಎನ್ನುವ ಅವರ ಮಾತುಗಳು ನಿಜಕ್ಕೂ ಅರ್ಥಪೂರ್ಣ. ಒಬ್ಬ ಉನ್ನತ ಮಟ್ಟದ ಅಧಿಕಾರಿಗೆ ಇಂತಹ ಮಾನವೀಯ ಮೌಲ್ಯಗಳು ಜನರ ಹಿತ ಕಾಯುವ ಕಾಳಜಿ ಇದ್ದದ್ದು ಎಂದಿಗೂ ಅನುಕರಣೀಯ.!

– ಅನಿಲ್ ಕುಮಾರ್, ನಂಜನಗೂಡು

ಹೃದಯವಂತ ಧನ್ವಂತರಿಗೆ ಹೃದಯಸ್ಪರ್ಶಿ ಅಭಿನಂದನೆ

ಮಾನ್ಯರೆ,

ಹೃದಯವಂತ ಪದ್ಮಶ್ರೀ ಡಾ. ಸಿ.ಎನ್. ಮಂಜುನಾಥ್ ಅವರಿಗೆ 'ಧನ್ಯವಾದ ಧನ್ವಂತರಿ' ಅಭಿನಂದನೆ ನೀಡಿ ಗೌರವಿಸಿರುವ ಮಲ್ಲಿಗೆಯಂತಹ ಮನಸ್ಸುಳ್ಳ ಮೈಸೂರಿನ ನಾಗರಿಕರ ನಡೆ ಅಭಿನಂದನಾರ್ಹ. ಆ ದಿನ ಮೈಸೂರಿನ ಕಲಾಮಂದಿರಕ್ಕೆ ಮೇರಗೋ ಮೆರಗು. ಎಲ್ಲಿ ನೋಡಿದರೂ ಹೃದಯವಂತ ಡಾ.ಮಂಜುನಾಥ್ ಅವರ ಕುರಿತು ಮಾತೋ ಮಾತು. ಮೈಸೂರಿನ ಕಲಾಮಂದಿರದಲ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರು ತಮ್ಮ ಮನೆಯಲ್ಲಿ ನಡೆಯುವ ಸಮಾರಂಭದಂತೆ ಸಂಭ್ರಮಿಸಿದ್ದು ಕಂಡು ಬರುತ್ತಿತ್ತು. ಪಬ್ಲಿಕ್ ಟಿವಿಯ ರಂಗನಾಥ್ ಅವರು ತಮ್ಮ ಮನದಾಳದ ಮಾತಿನಲ್ಲಿ ಡಾ ಮಂಜುನಾಥ್ ಅವರನ್ನು ಕುರಿತು, ನಿಮ್ಮ ಓಲೈಸುವ ಜನ ನಿಮ್ಮ ಬೆನ್ನ ಹಿಂದೆಯೇ ಇರುತ್ತಾರೆ ಎಂಬ ಭ್ರಮೆಯಲ್ಲಿರಬೇಡಿ. ಜನಾಭಿಪ್ರಾಯ ರೂಪಿಸಿಕೊಳ್ಳುವುದು ಸುಲಭವಲ್ಲ. ನಿಮ್ಮ ಮೇಲಿನ ಕೃತಜ್ಞತೆ ಇರುವ ಈ ಸಮಾಜ ನಿಮ್ಮನ್ನು ಉಳಿಸಿಕೊಳ್ಳದಿದ್ದರೆ ಸಮಾಜ ನಾಚಿಕೆಪಡಬೇಕೆ ಹೊರತು ನೀವು ನಾಚಿಕೆ ಪಡುವ ಅಗತ್ಯವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿರುವುದು ತುಂಬಾ ಶ್ಲಾಘನೀಯ. ತಂದೆಯ ಹೆಗಲು ಹಾಗೂ ತಾಯಿಯ ಮಡಿಲು ಪ್ರಪಂಚದಲ್ಲಿ ಬಹಳ ಪವಿತ್ರವಾದ ಸ್ಥಳಗಳು ಎಂದು ಡಾ ಮಂಜುನಾಥ್ ಅವರು ಹೇಳಿರುವ ಮಾತುಗಳು ಎಂತವರ ಮನವನ್ನು ಕಲಕದೆ ಇರುವುದಿಲ್ಲ. ಸಮಾರಂಭದಲ್ಲಿ ಮಾತನಾಡಿದ ಮುಖ್ಯ ಅತಿಥಿಗಳು ಡಾ ಮಂಜುನಾಥ್ ಅವರನ್ನು ಕುರಿತು ಹೇಳಿರುವ ಅಭಿಮಾನದ ಮಾತುಗಳನ್ನು ಮೈಸೂರಿಗರು ಎಂದಿಗೂ ಮರೆಯುವಂತಿಲ್ಲ. ಸರ್ ನಿಮ್ಮಂತಹ ಹೃದಯವಂತ ಪ್ರಾಮಾಣಿಕ ವ್ಯಕ್ತಿಗಳು ಇನ್ನೂ ಮುಂದೆಯೂ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡು ಸಮಾಜದ ಏಳ್ಗೆಗೆ ಪೂರಕವಾಗಿ ಕೆಲಸ ಮಾಡುವ ಅವಕಾಶವನ್ನು ನಿಮಗೆ ಆ ಭಗವಂತನು ಕರುಣಿಸಲಿ ಎಂಬುದು ಧನ್ಯವಾದ ಧನ್ವಂತರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬರ ಮನಸ್ಸಿನ ಮಾತು ಎಂದರೆ ತಪ್ಪಾಗಲಾರದು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಮೆಟ್ರೋ ಮೇಲಾಧಿಕಾರಿಗಳು ಕ್ಷಮೆ ಕೇಳಲಿ

ಮಾನ್ಯರೆ,

ಕೆಲ ದಿನಗಳ ಹಿಂದೆ, ಬೆಂಗಳೂರಿನ ರಾಜಾಜಿನಗರದ ಮೆಟ್ರೋ ರೈಲು ನಿಲ್ದಾಣಕ್ಕೆ ಬಂದ ರೈತ 'ಮಾಸಲು' ಬಟ್ಟೆ ಧರಿಸಿದ್ದ ಎಂಬ ಕಾರಣಕ್ಕೆ ಅಲ್ಲಿನ ಮೆಟ್ರೋ ರೈಲು ನಿಲ್ದಾಣದ ಭದ್ರತಾ ಸಿಬ್ಬಂದಿ ಮೆಟ್ರೋ ರೈಲಿನಲ್ಲಿ ಪ್ರಯಾಣ ಮಾಡಲು ಅವಕಾಶ ನೀಡದೇ ಅವಮಾನಿಸಿರುವುದು ಇಡೀ ದೇಶದ ರೈತ ಸಮುದಾಯವನ್ನೇ ಅವಮಾನಿಸಿದಂತೆ.

ಈ ಪ್ರಕರಣದಲ್ಲಿ ಈಗಾಗಲೇ ಭದ್ರತಾ ಸಿಬ್ಬಂದಿಯನ್ನು ವಜಾ ಮಾಡಿರುವುದಾಗಿ ರೈಲ್ವೇ ಅಧಿಕಾರಿಗಳು ಹೇಳಿದ್ದಾರೆ. ಆದರೆ ಇಲ್ಲಿ ವಜಾ ಮಾಡಬೇಕಾಗಿರುವುದು ಭದ್ರತಾ ಸಿಬ್ಬಂದಿಯನ್ನಲ್ಲ. ಮುಖ್ಯವಾಗಿ ವಜಾ ಮಾಡಬೇಕಾಗಿರುವುದು ಮೇಲಾಧಿಕಾರಿಗಳನ್ನು. ಕಾರಣ ಇವರ ಆದೇಶವನ್ನೇ ಕೆಳಗಿನವರು ಪಾಲಿಸುತ್ತಾರೆ. ರೈತ ಈ ದೇಶದ ಬೆನ್ನೆಲುಬು, ಅನ್ನದಾತ, ರೈತರೇನು, ಬೆಂಗಳೂರಿಗೆ ಬರುವಾಗ ಸೂಟು– ಬೂಟು ಹಾಕಿಕೊಂಡು ಬರಲು ಸಾಧ್ಯವೇ? ಮೇಲಾಧಿಕಾರಿಗಳಿಗೆ ಸ್ವಲ್ಪವಾದರೂ ತಿಳುವಳಿಕೆ ಬೇಡವೇ? ನಾನು ಗಮನಿಸಿದ್ದೇನೆ, ಮೆಟ್ರೋ ರೈಲಿನಲ್ಲಿ ಪ್ರಯಾಣ ಮಾಡುವ ಕೆಲವು ಹೆಣ್ಣು ಮಕ್ಕಳು ಮೈ– ತುಂಬಾ ಬಟ್ಟೆಯನ್ನೇ ಧರಿಸಿರುವುದಿಲ್ಲ. ಇಂತಹವರಿಗೆ ಮೆಟ್ರೋ ರೈಲಿನಲ್ಲಿ ಪ್ರಯಾಣ ಮಾಡಲು ಅವಕಾಶ ನೀಡಬೇಡಿ. ರೈತನನ್ನು ಅವಮಾನಿಸಿದ ಮೆಟ್ರೋ ಮೇಲಾಧಿಕಾರಿಗಳು ರೈತ ಸಮುದಾಯವನ್ನು ಕ್ಷಮೆ ಕೇಳಬೇಕು.


–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಎಸ್.ಎಂ.ಕೃಷ್ಣ, ಭಾಷ್ಯಂ ಸ್ವಾಮೀಜಿ, ಎಂ.ಆರ್.ಸೀತಾರಾಮ್‌ರಿಗೆ

ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್



ಎಸ್.ಎಂ.ಕೃಷ್ಣ



ಡಾ.ಭಾಷ್ಯಂ ಸ್ವಾಮೀಜಿ



ಎಂ.ಆರ್. ಸೀತಾರಾಮ್

ಮೈಸೂರು, ಮಾ.1(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ 104ನೇ ಘಟಿಕೋತ್ಸವದಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಶಿಕ್ಷಣ ತಜ್ಞ ಎಂ.ಆರ್.ಸೀತಾರಾಮ್ ಹಾಗೂ ಮೈಸೂರಿನ ವಿಜಯನಗರದ ಯೋಗ ನರಸಿಂಹಸ್ವಾಮಿ ದೇವಾಲಯದ ಸಂಸ್ಥಾಪಕ ಡಾ.ಭಾಷ್ಯಂ ಸ್ವಾಮೀಜಿ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುತ್ತಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಕುಲಾಧಿಪತಿಗಳೂ ಆದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರ ಅನುಮೋದನೆ ಮೇರೆಗೆ ಪ್ರತಿವರ್ಷ ದಂತೆ ಈ ಬಾರಿಯೂ ಮೂವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುತ್ತಿದ್ದು, ಮಾ.3ರಂದು ನಡೆಯುವ ಘಟಿಕೋತ್ಸವ ದಲ್ಲಿ ಮೂವರು ಗೌರವ ಡಾಕ್ಟರೇಟ್ ಸ್ವೀಕರಿಸಲಿದ್ದಾರೆ ಎಂದರು.

ಮಾಜಿ ಸಿಎಂ ಎಸ್.ಎಂ.ಕೃಷ್ಣ

ಎಸ್.ಎಂ.ಕೃಷ್ಣ ಅವರು ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದು, ಸರ್ಕಾರಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದದ್ದಲ್ಲದೇ, ಅಮೇರಿಕಾದಲ್ಲಿ ಉನ್ನತ ಶಿಕ್ಷಣದಲ್ಲಿ ಕಾನೂನು ಪದವಿಯನ್ನೂ ಪಡೆದಿದ್ದಾರೆ. ಮದ್ದೂರು ವಿಧಾನಸಭಾ ಕ್ಷೇತ್ರ ದಿಂದ ಶಾಸಕರಾಗಿ ಆಯ್ಕೆಯಾಗಿ ತಮ್ಮ ರಾಜಕೀಯ ಜೀವನವನ್ನು ಆರಂಭಿಸಿದ ಅವರು, ವಿಧಾನ ಪರಿಷತ್ ಸದಸ್ಯರಾಗಿ, ಲೋಕಸಭಾ ಸದಸ್ಯರಾಗಿ, ಕರ್ನಾಟಕ ರಾಜ್ಯದ ಪ್ರಥಮ ಉಪಮುಖ್ಯಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ, ಕೇಂದ್ರ ಸಚಿವರಾಗಿ ಮತ್ತು ಮಹಾರಾಷ್ಟ್ರ ರಾಜ್ಯಪಾಲರಾಗಿ ರಾಜಕೀಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದ ವೇಳೆ ರಾಜ್ಯ ರಾಜಧಾನಿ ಬೆಂಗಳೂರಿಗೆ ಮಾಹಿತಿ ತಂತ್ರಜ್ಞಾನ ಕಂಪನಿಗಳನ್ನು ತರುವ ಮೂಲಕ ಬೆಂಗಳೂರಿನ ಖ್ಯಾತಿಯನ್ನು ವಿಶ್ವ ಮಟ್ಟಕ್ಕೆ ಕೊಂಡೊಯ್ದರು. ಮೈಸೂರು ಮತ್ತು ಬೆಂಗಳೂರು ನಡುವೆ ಚತುಷ್ಪಥ ರಸ್ತೆ ನಿರ್ಮಿಸುವ ಮೂಲಕ ಈ ಎರಡು ನಗರಗಳ ನಡುವೆ ಸಾರಿಗೆ ವ್ಯವಸ್ಥೆ ಉತ್ತಮಗೊಳಿಸಿದರು. ಮೈಸೂರಿನಲ್ಲಿ ಇನ್ಫೋಸಿಸ್ ಸಂಸ್ಥೆ ಸ್ಥಾಪನೆಗೆ ಇವರೇ ಕಾರಣಕರ್ತರು. ಅಲ್ಲದೇ ಬೆಂಗಳೂರಿನ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ರೂಪಿಸುವ ಮೂಲಕ ಉತ್ತಮ ಆಡಳಿತ ನಡೆಸಿದ್ದರು.

ಡಾ.ಭಾಷ್ಯಂ ಸ್ವಾಮೀಜಿ

ಪ್ರೊ. ಭಾಷ್ಯಂ ಸ್ವಾಮಿಯವರು ಮೇಲುಕೋಟೆಯಲ್ಲಿ ಘನಪಾಠಿ ವಾಧ್ಯಾರ್ ಎಸ್. ನರಸಿಂಹಾಚಾರ್ ಮತ್ತು ಶ್ರೀಮತಿ ರಂಗನಾಯಕಮ್ಮ ಪುತ್ರರಾಗಿ ದಿನಾಂಕ: 08.01.1955 ರಂದು ಜನಿಸಿದರು.

ಇವರು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿ ನಡೆಸುವ ಕೃಷ್ಣ ಯಜುರ್ವೇದ ಸಲಕ್ಷಣ ಘನಾಂತದಲ್ಲಿ ವಿದ್ವತ್ ಉತ್ತಮ, ಕೃಷ್ಣ ಯಜುರ್ವೇದ ಸ್ಮಾರ್ತ ಪ್ರಯೋಗ, ಕೃಷ್ಣ ಯಜುರ್ವೇದ ಶ್ರೌತ ಪ್ರಯೋಗಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ಪಡೆದಿರುತ್ತಾರೆ, ಮೇಲುಕೋಟೆ ಸಂಸ್ಕೃತ ಸಂಶೋಧನಾ ಸಂಸತ್ತಿನಲ್ಲಿ ಹಿರಿಯ ಸಂಶೋಧಕರಾಗಿ ಸ್ವತಂತ್ರ ಗ್ರಂಥಗಳನ್ನು ಸಂಶೋಧನೆ ನಡೆಸಿ, ನಂತರ ಮೈಸೂರು ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ನೇಮಕ ಹೊಂದಿ ಅದೇ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಹಾಗೂ ಪ್ರಾಂಶುಪಾಲರಾಗಿ 33 ವರ್ಷ ಕಾರ್ಯ ನಿರ್ವಹಿಸಿ ನಿವೃತ್ತರಾಗಿರುತ್ತಾರೆ. ಮೈಸೂರಿನ ಸುಪ್ರಸಿದ್ಧ ವಿಜಯನಗರ ಬಡಾವಣೆಯಲ್ಲಿ ಲಕ್ಷಾಂತರ ಭಕ್ತರನ್ನು ಅಕರ್ಷಿಸುವ ಶ್ರೀಯೋಗಾ ನರಸಿಂಹಸ್ವಾಮಿ ದೇವಾಲಯವನ್ನು ಸ್ಥಾಪಿಸಿ ಅನ್ನದಾಸೋಹ, ಜ್ಞಾನ ದಾಸೋಹವನ್ನು ಮುನ್ನಡೆಸಿ ಕೊಂಡು ಬರುತ್ತಿದ್ದಾರೆ.

ಮೈಸೂರು ತಾಲೂಕು ಇಲವಾಲ ಹೋಬಳಿಯ ಸುತ್ತಮುತ್ತಲಿನ ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಒತ್ತು ನೀಡುವ ಹಿನ್ನೆಲೆಯಲ್ಲಿ ಮೈಸೂರಿನ ಹೂಟಗಳ್ಳಿ ಬಡಾವಣೆಯಲ್ಲಿ "ಸುದರ್ಶನ್ ವಿದ್ಯಾ ಸಂಸ್ಥೆಯನ್ನು" ಸ್ಥಾಪಿಸಿರುತ್ತಾರೆ. ಶ್ರೀ ಭಾಷ್ಯಂ ಸ್ವಾಮಿಯವರು ಸಂಸ್ಕೃತ, ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಪ್ರಭುತ್ವವನ್ನು ಹೊಂದಿದ್ದು 60ಕ್ಕೂ ಹೆಚ್ಚು ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವ ಕಾರ್ಯದಲ್ಲಿ ಮಹತ್ತರವಾದ ಹೊಣೆಗಾರಿಕೆಯನ್ನು ನಿರ್ವಹಿಸಿರುತ್ತಾರೆ.

ರಾಷ್ಟ್ರಾದ್ಯಂತ ಸಂಚರಿಸಿ ಸಂಸ್ಕೃತ ಸಾಹಿತ್ಯ ಸಂಪತ್ತಿನ ತಾಳೆಗರಿ ಪ್ರತಿಗಳನ್ನು ಸಂಗ್ರಹಿಸಿ ಅವುಗಳನ್ನು ಕ್ರೋಢಿಕರಿಸಿ ಸಂಶೋಧನಾ ಕಾರ್ಯದಲ್ಲಿ ತೊಡಗಿಸಿ ಪ್ರಕಟಿಸಿರುತ್ತಾರೆ. ಇವರಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯವು ಪ್ರತಿಷ್ಠಿತ "ನಾಡೋಜ" ಗೌರವ ನೀಡಿದೆ.

ಎಂ.ಆರ್.ಸೀತಾರಾಮ್

ಬೆಂಗಳೂರಿನ ಎಂ.ಆರ್.ಸೀತಾರಾಮ್ ಅವರು, ಬೆಂಗಳೂರಿನಲ್ಲಿ ಗೋಕುಲ ಎಜುಕೇಶನ್ ಫೌಂಡೇಶನ್ ಸ್ಥಾಪಿಸಿದ ದಿ. ಡಾ. ಎಂ.ಎಸ್. ರಾಮಯ್ಯ ಅವರ ಪುತ್ರರಾಗಿದ್ದು, ಪ್ರಾಥಮಿಕ ಶಿಕ್ಷಣವನ್ನು ಬೆಂಗಳೂರಿನ ಸೇಂಟ್ ಜೋಸೆಫ್ ಶಾಲೆಯಲ್ಲಿ ಪೂರೈಸಿ ಸೇಂಟ್ ಜೋಸೆಫ್ ಕಾಲೇಜಿನಿಂದ ವಿಜ್ಞಾನದಲ್ಲಿ ಪದವಿ ಪಡೆದು. ರಾಜಕಾರಣಿಯಾಗಿ, ಉದ್ಯಮಿಯಾಗಿ, ಶಿಕ್ಷಣ ತಜ್ಞರಾಗಿದ್ದಾರೆ. 2012 ರಲ್ಲಿ ವಿಧಾನಪರಿಷತ್ ಸದಸ್ಯರಾಗಿ ನಾಮ ನಿರ್ದೇಶನಗೊಂಡು ಕಾಂಗ್ರೆಸ್ ರಾಜ್ಯ ಸರ್ಕಾರದಲ್ಲಿ ಯೋಜನೆ, ಅಂಕಿ ಅಂಶಗಳು, ವಿಜ್ಞಾನ ಮತ್ತು ತಂತ್ರಜ್ಞಾನದ ಸಚಿವರಾಗಿ, ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಅಂತ್ಯೋದಯ, ಅಕ್ಷರ ದಾಸೋಹ ಮತ್ತು ಯಶಸ್ವಿನಿ ಸಹಕಾರ ಆರೋಗ್ಯ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ.

ಗೋಕುಲ ಶಿಕ್ಷಣ ಪ್ರತಿಷ್ಠಾನದ ಉಪಾಧ್ಯಕ್ಷರು ಮತ್ತು ಎಂಎಸ್ ರಾಮಯ್ಯ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯ ಪಾಲಿಟೆಕ್ನಿಕ್ ಮತ್ತು ಎಂ.ಎಸ್.ರಾಮಯ್ಯ ಹಾಸ್ಟೆಲ್‌ಗಳ ನಿರ್ದೇಶಕರೂ ಆಗಿ ಕಾರ್ಯನಿರ್ವಹಿಸುತ್ತಿರುವುದರ ಜೊತೆಗೆ ಹಲವಾರು ಸಾಮಾಜಿಕ ಸೇವೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ತಿದ್ದುಪಡಿ ಹಾಗೂ ಸ್ಪಷ್ಟೀಕರಣ

ಎಂ.ಆರ್.ಸೀತಾರಾಮ್ ಅವರಿಗೆ ಮೈಸೂರು ವಿವಿ ಗೌರವ ಡಾಕ್ಟರೇಟ್

ಮೈಸೂರು ವಿಶ್ವವಿದ್ಯಾನಿಲಯದ 104ನೇ ಘಟಿಕೋತ್ಸವದಲ್ಲಿ ಧಾರಾವಾಹಿ ನಿರ್ದೇಶಕ ಹಾಗೂ ನಟ ಟಿ.ಎನ್.ಸೀತಾರಾಮ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ಲಭಿಸಿದೆ ಎಂದು ಫೆ.29ರ 'ಮೈಸೂರು ಮಿತ್ರ' ಸಂಚಿಕೆಯಲ್ಲಿ ಸುದ್ದಿ ಪ್ರಕಟವಾಗಿತ್ತು. ಆದರೆ ಗೌರವ ಡಾಕ್ಟರೇಟ್ ಪದವಿ ಲಭಿಸಿರುವುದು ಮಾಜಿ ಸಚಿವ ಹಾಗೂ ಶಿಕ್ಷಣ ತಜ್ಞ ಎಂ.ಆರ್. ಸೀತಾರಾಮ್ ಅವರಿಗೆ. ಶುಕ್ರವಾರ ಪತ್ರಿಕಾ ಗೋಷ್ಠಿಯಲ್ಲಿ ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅವರು ಈ ಸಾಲಿನ ಘಟಿಕೋತ್ಸವದಲ್ಲಿ ಮಾಜಿ ಸಚಿವರೂ ಹಾಗೂ ಶಿಕ್ಷಣ ತಜ್ಞ ಎಂ.ಆರ್. ಸೀತಾರಾಮ್ ಅವರಿಗೆ ಗೌರವ ಡಾಕ್ಟರೇಟ್ ನೀಡಲಾಗುತ್ತಿದೆ. ಟಿ.ಎನ್. ಸೀತಾರಾಮ್ ಅವರಿಗಲ್ಲಾ ಎಂದು ಸ್ಪಷ್ಟಪಡಿಸಿದರು.



ಮೂರನೇ ಪುಟದಿಂದ

ಸ್ವಾತಂತ್ರ್ಯಕ್ಕೆ ಬೆಲೆಯೇ ಇಲ್ಲ

ವಂಚಿತರಾದರು. ಕಾಯಕ ಜೀವಿಗಳಲ್ಲದ ಮೇಲಿನ ಮೂರು ಜಾತಿಯವರು ವಿದ್ಯೆ ಹಾಗೂ ಸಂಪತ್ತು ಗಳಿಸಬಹುದಿತ್ತು. ಆದರೆ ಕಾಯಕ ಜೀವಿಗಳಾದ ತಳಸಮುದಾಯ ದವರು ಎಲ್ಲದರಿಂದ ವಂಚಿತರಾಗಿ ದ್ದರು. ಚಲನೆ ಇಲ್ಲದ ಜಾತಿ ವ್ಯವಸ್ಥೆಗೆ ಆರ್ಥಿಕ ಹಾಗೂ ಸಾಮಾ ಜಿಕ ಶಕ್ತಿಯಿಂದ ಚಲನೆ ಸಿಗಬೇಕಿದೆ ಎಂದು ಅಭಿಪ್ರಾಯಿಸಿದರು.

ಶರಣರ ಸ್ಮರಣೆ: ಬಸವಾದಿ ಶರಣರು ಕಾಯಕ ಮತ್ತು ದಾಸೋಹದ ಮಹತ್ವ ಸಾರಿದರು. ಕಾಯಕ ಎಂದರೆ ಉತ್ಪಾದನೆ, ದಾಸೋಹ ಎಂದರೆ ವಿತರಣೆ ಎಂದರ್ಥ. ಎಲ್ಲರೂ ಕಾಯಕ ಮಾಡಿ ಉತ್ಪಾದನೆ ಮಾಡಿದ್ದನ್ನು ಎಲ್ಲರೂ ಸಮಾನವಾಗಿ ಹಂಚಿಕೊಳ್ಳಬೇಕೆಂಬ ತತ್ವ ಇದರಲ್ಲಿದೆ. ಇಂದಿನ ಪ್ರಜಾಪ್ರಭುತ್ವ ಬಸವಾದಿ ಶರಣರು ಹಾಗೂ ಬುದ್ಧನ ಕಾಲದಲ್ಲೇ ಇತ್ತು. ಈಗಿನ ವಿಧಾನಸಭೆ ಹಾಗೂ ಲೋಕಸಭೆಯಂತೆ ಅನುಭವ ಮಂಟಪ ಕಾರ್ಯ ನಿರ್ವಹಿಸುತ್ತಿತ್ತು. ಶ್ರೇಷ್ಠ–ಕನಿಷ್ಠ ಎಂದು ಲಂಬವಾಗಿದ್ದ ಜಾತಿ ವ್ಯವಸ್ಥೆ ಯನ್ನು ವಿರೋಧಿಸಿದ ಶರಣರು ಸಮತಲ ವ್ಯವಸ್ಥೆ ಮೂಲಕ ಸಮಾನತೆ ಸಾರಿದರು. ಮೊದಲ ಬಾರಿಗೆ ತಳ ಸಮುದಾಯದ ಜನರಿಗೆ ಅನುಭವ ಮಂಟಪದಲ್ಲಿ ಸಮಾನ ಗೌರವ ಸಿಕ್ಕಿತು. ಅಭಿಪ್ರಾಯ ಮಂಡನೆ, ಚರ್ಚೆ, ವಿದ್ಯಾರ್ಜನೆಗೆ ಸಮಾನ ಅವಕಾಶ ದಕ್ಕಿತು ಎಂದು ಭಾಷಣದುದ್ದಕ್ಕೂ ಸಿಎಂ ಸಿದ್ದರಾಮಯ್ಯ ನವರು ಬಸವಾದಿ ಶರಣರನ್ನು ನೆನೆದರು.

ನಾವೆಲ್ಲಾ ಮನುಷ್ಯರೆಂದೆನಿಸಿಲ್ಲ: ಬಸವಾದಿ ಶರಣರು ತೋರಿದ ಸಮಾನತೆಯ ಸಮಾಜ ನಿರ್ಮಾಣವಾಗಬೇಕು. ಆದರೆ ಬಸವಣ್ಣನವರು 'ಇವ ನಮ್ಮವ ಎಂದೆಣಿಸಯ್ಯಾ...' ಎಂದು ಹೇಳಿ 850 ವರ್ಷವಾದರೂ ಅದು ಸಾಕಾರವಾಗಿಲ್ಲ. ಈ ವಚನ ಹೇಳುತ್ತಲೇ ಇವನು ಯಾವ ಜಾತಿಯವನು ಎಂದು ಕೇಳುತ್ತಾರೆ. ನಾವೆಲ್ಲಾ ಮನುಷ್ಯರು ಎಂಬ ಭಾವನೆ ಇನ್ನೂ ಬಂದಿಲ್ಲ. ಹಿಂದಿನ ಜನ್ಮದ ಪಾಪ–ಪುಣ್ಯ ಎನ್ನುವ ಕರ್ಮ ಸಿದ್ಧಾಂತವನ್ನು ಶರಣರು ತಿರಸ್ಕಾರ ಮಾಡಿದರು. ಆದರೆ ಕರ್ಮ ಸಿದ್ಧಾಂತವನ್ನು ಹುಟ್ಟುಹಾಕಿ ಜನರನ್ನು ತಳಮಟ್ಟದಲ್ಲೇ ಉಳಿಯು ವಂತೆ ಮಾಡಿದ್ದನ್ನು ಅರಿಯದೆ ವಿದ್ಯಾವಂತರೂ ಕೂಡ ಹಣೇ ಬರಹ ಎನ್ನುತ್ತಾರೆ. ಹೀಗೆನ್ನುವವರು ಬಸವಾದಿ ಶರಣರ ಅನು ಯಾಯಿಗಳೇ ಅಲ್ಲ. ಬಸವಾದಿ ಶರಣರು, ಬುದ್ಧ, ಗಾಂಧಿ, ಅಂಬೇಡ್ಕರ್ ಬದಲಾವಣೆಗೆ ಪ್ರಯತ್ನ ಮಾಡಿದರೂ ಇನ್ನೂ ಬದಲಾಗಿಲ್ಲ. ಶಿಕ್ಷಣದಲ್ಲಿ ವೈಜ್ಞಾನಿಕತೆ, ವೈಚಾರಿಕತೆ ಇರಬೇಕು ಎಂದು ಹೇಳಿದರು.

ಸಂವಿಧಾನ ಉಳಿಯಬೇಕು: ಕಾರ್ಯಾಂಗ, ಶಾಸಕಾಂಗವನ್ನು ಭ್ರಷ್ಟಗೊಳಿಸಿ, ನ್ಯಾಯಾಂಗವನ್ನು ದುರ್ಬಲಗೊಳಿಸಿದರೆ ಸಂವಿಧಾನ ಹೇಗೆ ಉಳಿಯುತ್ತದೆ. ಸಂವಿಧಾನದ ಧ್ಯೇಯೋದ್ದೇಶ ಈಡೇರಲು ಹೇಗೆ ಸಾಧ್ಯವಾಗುತ್ತದೆ. ಪ್ರಜಾಪ್ರಭುತ್ವ ಹಾಗೂ ಸಂವಿಧಾನಕ್ಕೆ ಬೆದರಿಕೆ ಇದೆ. ಮನುಷ್ಯ ಮತ್ತೊಬ್ಬ ಮನುಷ್ಯನನ್ನು ದ್ವೇಷಿಸುತ್ತಿದ್ದಾನೆ. ಇದು ಈ ಕಾಲ ಘಟ್ಟದ ದೊಡ್ಡ ಸವಾಲುಗಳು. ಮೋದಿ ಅವರ ಸಂಪುಟದಲ್ಲಿ ಮಂತ್ರಿಯಾಗಿದ್ದ ಅನಂತ ಕುಮಾರ್ ಹೆಗ್ಡೆ ಸಂವಿಧಾನ ಬದಲಾವಣೆ ಬಗ್ಗೆ ಮಾತನಾಡಿದರು. ಅವರ ವಿರುದ್ಧ ಕ್ರಮ ತೆಗೆದುಕೊಳ್ಳದ ಆರ್‌ಎಸ್‌ಎಸ್, ಬಿಜೆಪಿ ಹಾಗೂ ಮೋದಿ ಧೋರಣೆಯೂ ಅದೇ ಎನ್ನುವುದು ಸ್ಪಷ್ಟ. ಸಂವಿಧಾನ ತಿಳಿದವರು, ಆ ಬಗ್ಗೆ ಬದ್ಧತೆ ಉಳ್ಳವರ ಕೈಯ್ಯಲ್ಲಿ ಅಧಿಕಾರ ಇದ್ದರೆ ಮಾತ್ರ ಸಂವಿಧಾನ ಶ್ರೇಷ್ಠವಾಗುತ್ತದೆ. ಆರ್‌ಎಸ್‌ಎಸ್‌ನವರು ಹಿಟ್ಲರ್ ಹಾಗೂ ಮುಸಲೋನಿ ಅನುಯಾಯಿಗಳು. ಅನುದಾನ ಹಂಚಿಕೆಯಲ್ಲಿ ಅನ್ಯಾಯವಾಗಿದೆ ಎಂದು ಹೇಳುವುದಕ್ಕೂ ಧ್ವನಿ ಇಲ್ಲವಾದರೆ ಅದನ್ನು ಪ್ರಜಾಪ್ರಭುತ್ವ ಎನ್ನಲು ಸಾಧ್ಯವೇ? ಎಂದು ಪ್ರಶ್ನಿಸಿದರು. ಪ.ಮಲ್ಲೇಶ್ ಅವರು ಇಲ್ಲದ ಚಳವಳಿಗಳೇ ಇರಲಿಲ್ಲ. ಅವರು ಹುಟ್ಟಿದ್ದೇ ಚಳವಳಿಗಾಗಿ ಎಂದು ಇದೇ ವೇಳೆ ಸ್ಮರಿಸಿ ಕೊಂಡರು. ಕಾರ್ಯಕ್ರಮದಲ್ಲಿ ಸಾಮಾಜಿಕ ಹೋರಾಟಗಾರ್ತಿ ಗುಜರಾತ್‌ನ ತೀಸ್ತಾ ಸೆಟಲ್ವಾಡ್, ಪರ್ತಕರ್ತ ಪರಂಜೋಯ್ ಗುಹಾ ಠಾಕೂರ್ತಾ, ಕಾರ್ಯಕ್ರಮ ಆಯೋಜಕರಾದ ಸವಿತಾ ಮಲ್ಲೇಶ್, ಉಗ್ರನರಸಿಂಹೇಗೌಡ, ಪ್ರೊ.ಕಾಳಚನ್ನೇಗೌಡ, ಉಮಾದೇವಿ, ಅಭಿರುಚಿ ಗಣೇಶ್, ಟಿ.ಗುರುರಾಜ್ ಉಪಸ್ಥಿತರಿದ್ದರು.

ಕೆ.ಮರಿಗೌಡ ಅಧಿಕಾರ ಸ್ವೀಕಾರ

ಮೊದಲ ದಿನವೇ ಮರಿಗೌಡ ಅಳವಡಿಸಿದರು. ನಂತರ ಮುಡಾ ಆಯುಕ್ತ ಜಿ.ಟಿ.ದಿನೇಶ್ ಸರ್ಕಾರದ ನಿಯಮಾವಳಿಯಂತೆ ದಾಖಲಾತಿಗಳಿಗೆ ಸಹಿ ಪಡೆದರು. ತರುವಾಯ ಮರಿಗೌಡರು ವಿಧ್ಯುಕ್ತವಾಗಿ ಮುಡಾ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು.

ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅವರ ಅಭಿಮಾನಿಗಳು ಪುಷ್ಪಗುಚ್ಛ ನೀಡಿ, ಹಾರ ಹಾಕಿ ಮರಿಗೌಡರಿಗೆ ಅಭಿನಂದಿಸಿದರು. ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಹಾಗೂ ಮರಿಗೌಡರಿಗೆ ಜೈಕಾರದ ಘೋಷಣೆಗಳನ್ನು ಕೂಗಿದರು.

ಪ್ರಭಾವಿಗಳಿಂದ ಕೆಆರ್‌ಎಸ್ ನೀರಿಗೆ ಕನ್ನ...!

ನೀರು ಕಳ್ಳತನ ಮಾಡುತ್ತಿರುವುದು ಸಾರ್ವಜನಿಕರು ಹಾಗೂ ರೈತ ಹೋರಾಟಗಾರರ ಆಕ್ರೋಶಕ್ಕೆ ಕಾರಣವಾಗಿದೆ.

ಕೆಆರ್‌ಎಸ್‌ನಲ್ಲಿ ಹಗಲು ದರೋಡೆ ನಡೆಯುತ್ತಿದ್ದರೂ ಡ್ಯಾಂ ಅಧಿಕಾರಿಗಳು ಈ ಬಗ್ಗೆ ಪರಿಶೀಲನೆ ನಡೆಸದೇ ಇರುವುದು ವ್ಯಾಪಕ ಟೀಕೆಗೆ ಕಾರಣವಾಗಿದ್ದು, ಈ ಬಗ್ಗೆ ಸ್ಥಳೀಯರು ಮಾಹಿತಿ ಕೊಟ್ಟ ಮೇಲೆ, ಮಾಧ್ಯಮದವರು ಸ್ಥಳಕ್ಕೆ ಭೇಟಿ ನೀಡಿದ ಹಿನ್ನೆಲೆಯಲ್ಲಿ ಇಂದು ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಅಲ್ಲಿದ್ದ ಮೋಟಾರ್ ಮತ್ತು ಪೈಪುಗಳನ್ನು ವಶಪಡಿಸಿಕೊಂಡರಲ್ಲದೆ, ನೀರು ಸರಬರಾಜಿಗೆ ಅಕ್ರಮವಾಗಿ ಪಡೆದಿದ್ದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದ್ದಾರೆ.

ಪೊಲೀಸ್ ಅಧಿಕಾರಿಗೆ ಸೇರಿರುವ ಫಾರ್ಮ್ ಹೌಸ್: ಐಷಾರಾಮಿ ತೋಟದ ಕೂಲಿ ಕಾರ್ಮಿಕ ಕುಮಾರ್ ಎಂಬಾತ ದಾಳಿ ನಡೆದಾಗ ಮಾಹಿತಿ ನೀಡಿದ್ದು, ಇದು ಪ್ರಭಾವಿ ಪೊಲೀಸ್ ಅಧಿಕಾರಿಗೆ ಸೇರಿರುವ ಫಾರ್ಮ್ ಹೌಸ್ ಆಗಿದೆ. ನಾವು ಫಾರ್ಮ್ ಹೌಸ್‌ನಲ್ಲಿ ಕೆಲಸಕ್ಕಿದ್ದು, 6 ಸಾವಿರ ಸಂಬಳಕ್ಕೆ ಮಗ, ನಾನು ಕೆಲಸ ಮಾಡುತ್ತಿದ್ದೇವೆ. ಒಂದು ತಿಂಗಳಿಂದ ನೀರು ಪೂರೈಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾನೆ.

ಜಿಲ್ಲಾಡಳಿತದ ವಿರುದ್ಧ ಆಕ್ರೋಶ: ಕಾವೇರಿ ವಿಚಾರದಲ್ಲಿ ಸಾಮಾನ್ಯ ರೈತನಿಗೊಂದು ಕಾನೂನು, ಪ್ರಭಾವಿಗಳಿಗೆ ಒಂದು ಕಾನೂನಾ? ರೈತರಿಗೆ ಮಾತ್ರ ಬೇಸಿಗೆ ಬೆಳೆಗೆ ನೀರು ಕೊಡದ ಜಿಲ್ಲಾಡಳಿತ, ಪ್ರಭಾವಿಗಳ ಫಾರ್ಮ್ ಹೌಸ್‌ಗೆ ರಾಜಾರೋಷವಾಗಿ ನೀರು ಹರಿಯುತ್ತಿದ್ದರು ಏಕೆ ಕ್ರಮ ಕೈಗೊಂಡಿಲ್ಲ ಎಂದು ರೈತ ಮುಖಂಡರು ಪ್ರಶ್ನಿಸಿದ್ದಾರೆ. ನಾಲೆಗೆ ನೀರು ಬಿಡಲ್ಲ ಎಂದಿರುವ ಮಂಡ್ಯ ಜಿಲ್ಲಾಡಳಿತ, ಈ ಅಕ್ರಮವನ್ನು ಬೇಧಿಸಲು ಒಂದು ತಿಂಗಳು ಏಕೆ ತೆಗೆದುಕೊಂಡಿತು ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸ್ಥಳಕ್ಕೆ ಅಧಿಕಾರಿಗಳ ಭೇಟಿ: ಈ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾದ ಹಿನ್ನಲೆಯಲ್ಲಿ ಅಕ್ರಮ ಮೋಟಾರ್ ಅಳವಡಿಕೆ ಸ್ಥಳಕ್ಕೆ ಬಂದ ಕಾವೇರಿ ನೀರಾವರಿ ನಿಗಮದ ಎಇಇ ಕಿಶೋರ್ ಪರಿಶೀಲನೆ ನಡೆಸಿದರು. ಮೋಟಾರ್‌ಗೆ ಹಾಕಲಾಗಿದ್ದ ವಿದ್ಯುತ್ ಕಡಿತ ಮಾಡಿದ ಅಧಿಕಾರಿಗಳು, ಅಕ್ರಮವಾಗಿ ನೀರು ಪೂರೈಕೆ ಮಾಡಿಕೊಳ್ಳುವುದು ಅಕ್ಷಮ್ಯ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ ಎಂದರು.

ಮೈಸೂರು ಜಿಲ್ಲೆ ವ್ಯಾಪ್ತಿಯಲ್ಲೂ ಕಾರ್ಯಾಚರಣೆ: ಎಇಇ ಕಿಶೋರ್ ಕುಮಾರ್, ಎಇ ಸುರೇಶ್ ಬಾಬು ನೇತೃತ್ವದಲ್ಲಿ ಡ್ಯಾಂ ಹಿನ್ನೀರಿನ ಸುತ್ತಲೂ ಕಾರ್ಯಾಚರಣೆ ನಡೆಸಲಾಯಿತು. ಮೈಸೂರು ಜಿಲ್ಲೆ ವ್ಯಾಪ್ತಿಯ ಹಳೇ ಉಂಡವಾಡಿ ಗ್ರಾಮದ ರೆಸಾರ್ಟ್‌ವೊಂದು ಅಕ್ರಮ ನೀರು ಸಂಪರ್ಕ ಪಡೆದಿತ್ತು ಎನ್ನಲಾಗಿದ್ದು, ಸಂಪರ್ಕವನ್ನು ಕಡಿತಗೊಳಿಸಲಾಗಿದೆ. ಇದಾದ ಬಳಿಕ ಕೆಲ ರೈತರು ಸಹ ಜಮೀನುಗಳಿಗೆ ಅಕ್ರಮವಾಗಿ ಅಳವಡಿಸಿಕೊಂಡಿದ್ದ ಪೈಪ್‌ಗಳನ್ನು ಸಹ ಅಧಿಕಾರಿಗಳು ತೆರವುಗೊಳಿಸಿದರು.

ಮೈಸೂರಿನ ಹಳೇ ಉಂಡವಾಡಿ ಗ್ರಾಮದ ಬಳಿ ರೈತರ ಅಕ್ರಮ ಮೋಟಾರ್‌ಗಳನ್ನು ತೆರವು ಮಾಡುವ ಸಂದರ್ಭದಲ್ಲಿ ಅಧಿಕಾರಿ ಬಳಿ ಮನವಿ ಮಾಡಿಕೊಂಡ ರೈತನೋರ್ವ, ಮೇವಿನ ಬೆಳೆಗೆ ನೀರು ಸರಬರಾಜು ಮಾಡಲು ಮೋಟಾರ್ ಹಾಕಿದ್ದೇವೆ. ದಯವಿಟ್ಟು ನಾನು ಜನರಿಗೆ ತೊಂದರೆ ಕೊಡಲ್ಲ. ನಾನೇ ಮೋಟಾರ್ ತೆಗೆದುಕೊಳ್ಳುತ್ತೇನೆ ಎಂದು ಮನವಿ ಮಾಡಿದರು. ರೈತನ ಮನವಿ ನಂತರವೂ ಅಕ್ರಮ ಸಂಪರ್ಕವನ್ನು ಅಧಿಕಾರಿಗಳು ಸ್ಥಗಿತಗೊಳಿಸಿದರು.

ನೀರಿನ ಮಟ್ಟ: ಸದ್ಯ ಜಲಾಶಯದಲ್ಲಿ 90.06 ಅಡಿ ನೀರು ಮಾತ್ರ ಸಂಗ್ರಹವಾಗಿದ್ದು, 124.80 ಅಡಿ ಗರಿಷ್ಠ ಮಟ್ಟವಾಗಿದೆ. ಸದ್ಯ 15.973 ಟಿಎಂಸಿ ನೀರು ಸಂಗ್ರಹವಾಗಿದ್ದು, 49.452 ಟಿಎಂಸಿ ಗರಿಷ್ಠ ಸಂಗ್ರಹವಾಗಿದೆ. 5 ಟಿಎಂಸಿ ಡೆಡ್ ಸ್ಟೋರೇಜ್ ಆಗಿದ್ದು, ಸದ್ಯ ಬಳಕೆಗೆ ಇರುವ ನೀರು 11 ಟಿಎಂಸಿ ಮಾತ್ರ.

ಸಾರ್ವಜನಿಕರಿಗೆ ಸೂರು ಕಲ್ಪಿಸಲು

ಯೋಜನೆ ರೂಪಿಸುತ್ತೇನೆ. ಈ ಸಂಬಂಧ ಮೈಸೂರಿನವರೇ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಅನುಮೋದನೆ ಪಡೆಯುತ್ತೇನೆ ಎಂದು ತಿಳಿಸಿದರು. ಸೋಮವಾರ ಮುಡಾ ಅಧಿಕಾರಿಗಳ ಸಭೆ ನಡೆಸುತ್ತೇನೆ. ಆ ವೇಳೆ ಮುಡಾ ಯೋಜನೆಗಳು ಹಾಗೂ ಪ್ರಗತಿ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಪರಿಶೀಲನೆ ನಡೆಸುತ್ತೇನೆ. ನಂತರ ಆದ್ಯತೆ ಮೇರೆಗೆ ಯಾವ ಕೆಲಸ ಮಾಡಬೇಕು ಎಂಬ ಬಗ್ಗೆ ತೀರ್ಮಾನ ಮಾಡುತ್ತೇನೆ ಎಂದು ಮರಿಗೌಡರು ವಿವರಿಸಿದರು.

ಮೈಸೂರಿನ ಬಲ್ಲಹಳ್ಳಿಯಲ್ಲಿ ನೂತನ ಬಡಾವಣೆ ನಿರ್ಮಾಣ ಮಾಡುವ ಯೋಜನೆ ಇದೆ. ಆದರೆ ಭೂಮಿ ಸ್ವಾಧೀನಪಡಿಸಿಕೊಳ್ಳಲು ಪರಿಹಾರದ ಮೊತ್ತದ ತೀರ್ಮಾನವಾಗಿಲ್ಲ. ಈ ಮೊದಲು 60–40 ಅನುಪಾತ ಪ್ರಸ್ತಾಪ ಮಾಡಲಾಗಿತ್ತು. ಆದರೆ ಇದಕ್ಕೆ ರೈತರು ಒಪ್ಪಿಲ್ಲ. ಈಗ ರೈತರನ್ನು ಕರೆಸಿ 50–50 ರ ಅನುಪಾತದಲ್ಲಿ ಪರಿಹಾರ ಪಡೆಯುವಂತೆ ಪ್ರಸ್ತಾಪ ಇಡಲಾಗುವುದು. ಈ ಎಲ್ಲಾ ಪ್ರಕ್ರಿಯೆ ಪೂರ್ಣಗೊಂಡ ನಂತರ ಬಡಾವಣೆ ನಿರ್ಮಾಣ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ತಿಳಿಸಿದರು. ಮೈಸೂರಿನ ಬಹಳಷ್ಟು ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯವಿಲ್ಲ. ಮುಡಾ, ನಗರ ಪಾಲಿಕೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿಗಳ ನಡುವೆ ಸಮನ್ವಯತೆ ಇಲ್ಲ. ಇದರಿಂದ ಖಾತೆ ಸೇರಿದಂತೆ ಹಲವು ವಿಚಾರವಾಗಿ ಜನರು ಒಂದು ಕಚೇರಿಯಿಂದ ಮತ್ತೊಂದು ಕಚೇರಿಗೆ ಅಲೆದಾಡುವ ಪರಿಸ್ಥಿತಿ ಇದೆ. ಜೊತೆಗೆ ಮುಡಾದಲ್ಲಿ ಮಧ್ಯವರ್ತಿಗಳ ಹಾವಳಿ ಕೂಡ ಇದೆ. ಇದನ್ನೆಲ್ಲಾ ಹಂತ ಹಂತವಾಗಿ ನಿವಾರಣೆ ಮಾಡುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು. ಮುಡಾ ಆಸ್ತಿಯನ್ನು ಕಬಳಿಸುವ ಪ್ರಯತ್ನಗಳು ನಡೆಯುತ್ತಿದ್ದು, ಇನ್ನು ಮುಂದೆ ಇದಕ್ಕೆ ಅವಕಾಶ ನೀಡುವುದಿಲ್ಲ. ಮೊದಲು ಮುಡಾ ಆಸ್ತಿ ಸಂರಕ್ಷಣೆಗೆ ಕ್ರಮ ಕೈಗೊಳ್ಳುತ್ತೇನೆ. ಒಟ್ಟಾರೆ ಮೈಸೂರನ್ನು ಯೋಜನಾಬದ್ಧ ನಗರವಾಗಿ ರೂಪಿಸಲು ಶ್ರಮಿಸುತ್ತೇನೆ ಎಂದು ಮರಿಗೌಡ ಆಶ್ವಾಸನೆ ನೀಡಿದರು.

ಪಾಕಿಸ್ತಾನದ ನೂತನ ಅಧ್ಯಕ್ಷರಾಗಿ ಮಾ.9ಕ್ಕೆ ಜರ್ದಾರಿ ಪಟ್ಟಕ್ಕೆ?



ಇಸ್ಲಾಮಾಬಾದ್, ಮಾ.1– ಪಾಕಿಸ್ತಾನದ ನೂತನ ಅಧ್ಯಕ್ಷರ ಆಯ್ಕೆಗೆ ಮಾರ್ಚ್ 9ರಂದು ಚುನಾವಣೆ ನಡೆಯಲಿದೆ ಎಂದು ಚುನಾವಣಾ ಆಯೋಗ ಶುಕ್ರವಾರ ಪ್ರಕಟಿಸಿದೆ. ಮಾಜಿ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿಯವರೇ 11 ವರ್ಷಗಳ ಬಳಿಕ ಮತ್ತೆ ಅಧ್ಯಕ್ಷರಾಗುವ ಸಾಧ್ಯತೆ ಇದೆ. ಹಾಲಿ ಅಧ್ಯಕ್ಷ ಡಾ. ಆರಿಫ್ ಅಲ್ವಿ ಅವರ ಐದು ವರ್ಷಗಳ ಅವಧಿ ಕಳೆದ ವರ್ಷವೇ ಮುಕ್ತಾಯವಾಗಿತ್ತು. ಆದರೆ ಎಲೆಕ್ಟರಲ್ ಕಾಲೇಜು ರಚನೆಯಾಗದ ಕಾರಣ ಅವರನ್ನೇ ಮುಂದುವರಿಸಲಾಗಿತ್ತು.

ಸಂಸತ್ ಹಾಗೂ ಪ್ರಾಂತೀಯ ಅಸೆಂಬ್ಲಿ ಯನ್ನು 2023ರ ಆಗಸ್ಟ್‌ನಲ್ಲಿ ವಿಸರ್ಜಿಸಿದ್ದರಿಂದ ನೂತನ ಅಧ್ಯಕ್ಷರ ಆಯ್ಕೆ ಆಗಿರಲಿಲ್ಲ. ರಾಷ್ಟ್ರೀಯ ಸಂಸತ್ ಹಾಗೂ ಪ್ರಾಂತೀಯ ಅಸೆಂಬ್ಲಿಗಳು ಅಧ್ಯಕ್ಷರನ್ನು ಆಯ್ಕೆ ಮಾಡುವ ಎಲೆಕ್ಟರಲ್ ಕಾಲೇಜನ್ನು ರಚನೆ ಮಾಡುತ್ತವೆ.

ಮಾರ್ಚ್ 2ರ ಮಧ್ಯಾಹ್ನ 12 ಗಂಟೆಯೊಳಗೆ ನಾಮಪತ್ರ ಸಲ್ಲಿಸಬೇಕು. ಮಾ.4 ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ. ಮಾ.5ರಂದು ನಾಮಪತ್ರ ಹಿಂಪಡೆಯಬಹುದು. ಬಳಿಕ ಅಂಗೀಕೃತ ನಾಮಪತ್ರಗಳ ಪಟ್ಟಿಯನ್ನು ಆಯೋಗ ಪ್ರಕಟಿಸಲಿದ್ದು, ಮಾ.6ರಂದು ಅಭ್ಯರ್ಥಿ ಕಣದಿಂದ ನಿವೃತ್ತಿ ಪಡೆಯಬಹುದು. ಮಾರ್ಚ್ 9ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆ ವರೆಗೆ ಮತದಾನ ನಡೆಯಲಿದೆ. ಆಸಿಫ್ ಅಲಿ ಜರ್ದಾರಿ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ ಹಾಗೂ ಪಾಕಿಸ್ತಾನ್ ಮುಸ್ಲಿಮ್ ಲೀಗ್ ನವಾಜ್ ಪಕ್ಷದ ಜಂಟಿ ಅಭ್ಯರ್ಥಿಯಾಗಿದ್ದು, ಅವರೇ ಗೆಲ್ಲುವ ಸಾಧ್ಯತೆ ಅಧಿಕ.

ಜೆಎನ್‌ಯುನಲ್ಲಿ ಎಡ–ಬಲ ಘರ್ಷಣೆ: ನಾಲ್ವರಿಗೆ ಗಾಯ

ನವದೆಹಲಿ, ಮಾ.1– ಚುನಾವಣಾ ಸಮಿತಿ ಸದಸ್ಯರ ಆಯ್ಕೆ ವಿಚಾರದಲ್ಲಿ ಎಬಿವಿಪಿ ಮತ್ತು ಎಡ ಪಕ್ಷಗಳ ಬೆಂಬಲಿತ ವಿದ್ಯಾರ್ಥಿ ಗುಂಪುಗಳ ನಡುವೆ ಘರ್ಷಣೆ ನಡೆದಿದ್ದು, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ನಾಲ್ವರು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಅವರನ್ನು ಸಫ್ದರ್‌ಜಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿವಿ ಭಾಷಾ ವಿಷಯಗಳ ಕಟ್ಟಡದಲ್ಲಿ ಗುರುವಾರ ತಡರಾತ್ರಿ ಘರ್ಷಣೆ ನಡೆದಿದೆ. ಈ ಸಂಬಂಧ ಎರಡೂ ಗುಂಪುಗಳು ಪರಸ್ಪರ ವಿರುದ್ಧ ವಸಂತ್ ಕುಂಜ್ ನಾರ್ಥ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿವೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬೆಳವಾಡಿ ರಸ್ತೆ ಕಾಮಗಾರಿಗೆ ಅಡ್ಡಿಯಾದ ಕಾಂಪೌಂಡ್

ತೆರವುಗೊಳಿಸಬೇಕೆಂದು ಗ್ರಾಮಸ್ಥರ ಆಗ್ರಹ

ಮೈಸೂರು, ಮಾ1(ಆರ್‌ಕೆ)– ಕೆಹೆಚ್‌ಬಿ ಕಾಲೋನಿಯಿಂದ ಬೆಳವಾಡಿಗೆ ಹಾದು ಹೋಗಿರುವ ರಸ್ತೆ ಕಾಮಗಾರಿಗೆ ಅಡ್ಡಿಯಾಗಿರುವ ಕಾಂಪೌಂಡ್ ತೆರವುಗೊಳಿಸುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಹೂಟಗಳ್ಳಿ ನಗರ ಸಭೆ ಆಯುಕ್ತರು, ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿರುವ ಬೆಳವಾಡಿ ಮತ್ತು ಕೆಹೆಚ್‌ಬಿ ಕಾಲೋನಿ ನಿವಾಸಿಗಳು, ಈಗಾಗಲೇ ಶೇ.80 ರಷ್ಟು ರಸ್ತೆ ಕಾಮಗಾರಿ ಮುಗಿದಿದ್ದು, ಉಳಿದ ಕೆಲಸಕ್ಕೆ ಅಡ್ಡಲಾಗಿ ರಸ್ತೆ ಜಾಗದಲ್ಲಿ ನಿರ್ಮಿಸಿರುವ ಕಾಂಪೌಂಡ್ ಅಡ್ಡಿಯಾಗಿರುವುದರಿಂದ ಅದನ್ನು ತೆರವುಗೊಳಿಸುವಂತೆ ಕೋರಿದ್ದಾರೆ.

ಕೆಹೆಚ್‌ಬಿ ಕಾಲೋನಿಯಿಂದ ಬೆಳವಾಡಿಗೆ ಹಾದು ಹೋಗುವ ಈ ರಸ್ತೆಯಲ್ಲಿ 220 ಕೆ.ವಿ ಸಾಮರ್ಥ್ಯದ ವಿದ್ಯುತ್ ಮಾರ್ಗವಿದ್ದರೂ ಸ್ಥಳೀಯ ನಿವಾಸಿ ರಾಜಾರಾವ್ (ಗೋಪಾಲ ರಾವ್) ಎಂಬುವರು ರಸ್ತೆ ಜಾಗದಲ್ಲಿ ಅಡ್ಡಲಾಗಿ ಕಾಂಪೌಂಡ್ ನಿರ್ಮಿಸಿದ್ದಾರೆ ಆದರಿಂದ ಒಳಚರಂಡಿ ಮತ್ತು ರಸ್ತೆ ನಿರ್ಮಾಣ ಕೆಲಸ ಸ್ಥಗಿತಗೊಂಡಿದೆ. ಪರಿಣಾಮ ಸಾರ್ವಜನಿಕರು ಓಡಾಡಲು ತೊಂದರೆಯಾಗುತ್ತಿರುವುದರಿಂದ ಅಧಿಕಾರಿಗಳು ಕಾಂಪೌಂಡ್ ತೆರವುಗೊಳಿಸಿ ಕಾಮಗಾರಿ ಮುಂದುವರಿಸಲು ಗುತ್ತಿಗೆದಾರರಿಗೆ ಅನುವು ಮಾಡಿಕೊಡಬೇಕೆಂದು ಗ್ರಾಮಸ್ಥರು ಹೂಟಗಳ್ಳಿ ನಗರಸಭೆ ಆಯುಕ್ತರಿಗೆ ಸಲ್ಲಿಸಿರುವ ಮನವಿಪತ್ರದಲ್ಲಿ ಆಗ್ರಹಿಸಿದ್ದಾರೆ.



ಕೆಹೆಚ್‌ಬಿ ಕಾಲೋನಿಯಿಂದ ಬೆಳವಾಡಿಗೆ ಹೋಗುವ ರಸ್ತೆಗೆ ಅಡ್ಡಲಾಗಿ ನಿರ್ಮಿಸಿರುವ ಕಾಂಪೌಂಡ್‌ನಿಂದಾಗಿ ಕಾಮಗಾರಿ ಸ್ಥಗಿತಗೊಂಡಿದೆ

ಚುನಾವಣೆಗೆ ನಿಯೋಜಿಸುವ ಅಧಿಕಾರಿಗಳು, ಸಿಬ್ಬಂದಿ ಮಾದರಿ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಎಚ್ಚರ ವಹಿಸಿ

ಮೈಸೂರು ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಸೂಚನೆ



ಮೈಸೂರು, ಮಾ.1(ಆರ್‌ಕೆ)– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಭಾಗಿಯಾಗುವ ಪ್ರತಿಯೊಬ್ಬ ಅಧಿಕಾರಿ ಹಾಗೂ ಸಿಬ್ಬಂದಿಗಳು ಮಾದರಿ ನೀತಿ ಸಂಹಿತೆ ಪಾಲನೆಯ ಬಗ್ಗೆ ನಿಗಾ ವಹಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ತಿಳಿಸಿದರು.

ಅವರು ಇಂದು ಜಿಲ್ಲಾ ಪಂಚಾಯತ್ ದೇವರಾಜು ಅರಸ್ ಸಭಾಂಗಣದಲ್ಲಿ ಲೋಕಸಭಾ ಸಾರ್ವತ್ರಿಕ ಚುನಾವಣೆ –2024ರ ಚುನಾವಣಾ ಕರ್ತವ್ಯದಲ್ಲಿ ನಿರತರಾಗುವ ವಿವಿಧ ಹಂತದ ಅಧಿಕಾರಿಗಳಿಗೆ ಕರ್ತವ್ಯ ಹಾಗೂ ಜವಾಬ್ದಾರಿಗಳ ಕುರಿತು ಮಾತನಾಡಿದರು.

ಎಫ್‌ಎಸ್, ಎಸ್‌ಎಸ್‌ಟಿ, ವಿಎಸ್‌ಟಿ, ವಿವಿಟಿ ತಂಡ ಹಾಗೂ ಪೊಲೀಸ್ ಸೆಕ್ಟರ್‌ಗಳಿಗೆ ನಿಯೋಜನೆಗೊಳ್ಳುವ ಅಧಿಕಾರಿಗಳು ಚುನಾವಣಾ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಚುನಾವಣಾ ಆಯೋಗದ ನಿರ್ದೇಶನಗಳನ್ನು ತಿಳಿದುಕೊಂಡು ಪಾಲಿಸಬೇಕು ಎಂದರು.

ಬರುವ ಲೋಕಸಭೆ ಚುನಾವಣೆಯನ್ನು ಮುಕ್ತ ಹಾಗೂ ನ್ಯಾಯಸಮ್ಮತವಾಗಿ ನಡೆಯಲು ನಿಗದಿಪಡಿಸಿರುವ ವೆಚ್ಚದಂತೆ ಅಭ್ಯರ್ಥಿಗಳು ಹಣ ವೆಚ್ಚ ಮಾಡುತ್ತಿರುವ ಬಗ್ಗೆ ತೀವ್ರ ನಿಗಾ ಇಡಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಚುನಾವಣೆ ಕರ್ತವ್ಯವನ್ನು ನಿಷ್ಪಕ್ಷ ಹಾಗೂ ನ್ಯಾಯ ಸಮ್ಮತವಾಗಿ ನಡೆಸುವ ಹಿನ್ನೆಲೆಯಲ್ಲಿ ನಿಯೋಜನೆಗೊಂಡ ಎಲ್ಲ ತಂಡಗಳೂ ಹೆಚ್ಚು ಗಮನ ವಹಿಸಬೇಕು. ಚುನಾವಣಾ ಆಯೋಗದ ಮಾರ್ಗಸೂಚಿಯಂತೆ ದಾಖಲಿಸಿ ಇಟ್ಟುಕೊಂಡು ಕಾಲಕಾಲಕ್ಕೆ ಈ ಕುರಿತು ವರದಿಯನ್ನು ಕಳುಹಿಸಬೇಕು ಎಂದರು.

ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿಯಾದರೆ, ಎಂಸಿಸಿ ತಂಡಗಳು ಉಲ್ಲಂಘನೆ ಆಗದಂತೆ ಎಚ್ಚರ ವಹಿಸಬೇಕು. ಸಹಾಯಕ ವೆಚ್ಚ ವೀಕ್ಷಕರು, ಫ್ಲೈಯಿಂಗ್ ಸ್ಕ್ವಾಡ್‌ಗಳು, ವೀಡಿಯೋ ಸರ್ವೆಲನ್ಸ್, ವೀಡಿಯೋ ವಿವ್ಹಿಂಗ್ ತಂಡಗಳು, ಸ್ಟಾಟಿಕ್ ಸರ್ವೆಲನ್ಸ್ ತಂಡಗಳು ಇನ್ನೂ ಜಾಗೃತರಾಗಿ ಕಾರ್ಯನಿರ್ವಹಿಬೇಕು. ಒಟ್ಟಾರೆ ಮುಕ್ತ, ನ್ಯಾಯ ಸಮ್ಮತ ಚುನಾವಣೆ ನಡೆಸಲು ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಬೇಕು ಎಂದರು.

ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಯನ್ವಯ ತಮ್ಮ ತಮ್ಮ ಜವಾಬ್ದಾರಿಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕಿದೆ. ಸಹಾಯಕ ಚುನಾವಣಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ತಂಡಗಳ ಅಧಿಕಾರಿಗಳಿಗೆ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ ನೀಡಬೇಕು. ಈ ಹಿನ್ನೆಲೆಯಲ್ಲಿ ಅಭ್ಯರ್ಥಿ ಹಾಗೂ ರಾಜಕೀಯ ಪಕ್ಷಗಳಿಗೆ ನಿಗದಿಯಾಗುವ ಚುನಾವಣಾ ವೆಚ್ಚದ ಕುರಿತು ಸರಿಯಾದ ಲೆಕ್ಕಪತ್ರಗಳು ಇರಬೇಕು. ಈ ಸಂಬಂಧ ಯಾವುದೇ ಗೊಂದಲಕ್ಕೆ ಒಳಗಾಗದೇ ಎಲ್ಲ ದಾಖಲೆಗಳನ್ನು ಸರಿಯಾಗಿ ನಿರ್ವಹಿಸಬೇಕು ಎಂದು ಹೇಳಿದರು.

ಚುನಾವಣೆ ಘೋಷಣೆಯಾದ ತಕ್ಷಣ ಜಿಲ್ಲೆಯಲ್ಲಿ ರಾಜಕೀಯ ಪಕ್ಷಗಳ ಬ್ಯಾನರ್, ಫ್ಲೆಕ್ಸ್ ಹಾಗೂ ವಿವಿಧ ಇಲಾಖೆಗಳ ವೆಬ್‌ಸೈಟ್‌ಗಳನ್ನು ಪಟ್ಟಿ ಮಾಡಿಕೊಂಡು ವೆಬ್‌ಸೈಟ್‌ಗಳಲ್ಲಿರುವ ಸಚಿವರು ಹಾಗೂ ಜನಪ್ರತಿನಿಧಿಗಳ ಭಾವಚಿತ್ರ ತೆರವು ಗೊಳಿಸುವಂತೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲೆಯಲ್ಲಿ ಗುರುತಿಸಲಾಗಿರುವ ಮತಗಟ್ಟೆಗಳಲ್ಲಿ ಕುಡಿಯುವ ನೀರು, ಶೌಚಾಲಯ, ವಿಕಲಚೇತನರು, ಅಶಕ್ತರು ಪ್ರವೇಶಿಸಲು ಅನುಕೂಲವಾಗುವಂತೆ ರ್‍ಯಾಂಪ್ ವ್ಯವಸ್ಥೆ ಮಾಡಬೇಕು. ಈ ಹಿಂದೆ ಯಾವ ಮತಗಟ್ಟೆ ಕಟ್ಟಡಗಳಲ್ಲಿ ಸೌಲಭ್ಯ ಇದೆ. ಯಾವ ಕಟ್ಟಡಗಳಲ್ಲಿ ಇಲ್ಲ ಎಂಬ ಬಗ್ಗೆ ಪಟ್ಟಿ ಮಾಡಿ ಮೂಲಸೌಕರ್ಯ ಕಲ್ಪಿಸಬೇಕು. ಆ ಪ್ರಕಾರ ಶೌಚಾಲಯ, ರ್‍ಯಾಂಪ್ ನಿರ್ಮಾಣ ಮಾಡಲಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಬೇಕು.

ಚೆಕ್‌ಪೋಸ್ಟ್ ಸ್ಥಾಪನೆ ಇನ್ನಿತರ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಈಗಲೇ ಕಾರ್ಯಪ್ರವೃತ್ತವಾಗಬೇಕು ಹಾಗೂ ಅಗತ್ಯ ಸಿದ್ಧತೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಅವರು ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ ಗಾಯಿತ್ರಿ ಅವರು ಮಾತನಾಡಿ ಚುನಾವಣೆ ಕೆಲಸವನ್ನು ಹಗುರವಾಗಿ ಪರಿಗಣಿಸಬಾರದು. ಇಡೀ ತಂಡವಾಗಿ ಹೊಣೆಗಾರಿಕೆಯಿಂದ ಕೆಲಸ ನಿರ್ವಹಿಸಿದರೆ ಯಶಸ್ವಿಯಾಗಲು ಸಾಧ್ಯವಾಗಲಿದೆ. ಹಾಗಾಗಿ ಪ್ರತಿಯೊಬ್ಬರೂ ನಿಯೋಜಿಸಿದ ಕರ್ತವ್ಯವನ್ನು ಯಾವುದೇ ಲೋಪ ಇಲ್ಲದೆ ನಿರ್ವಹಿಸಬೇಕು ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ದಿನೇಶ್, ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆಯ ಆಯುಕ್ತರಾದ ದೇವರಾಜು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕೆಪಿಸಿಸಿ ವಕ್ತಾರ ಲಕ್ಷ್ಮಣ್ ವಿರುದ್ಧ ನ್ಯಾಯಾಲಯದಲ್ಲಿ ಪ್ರತಾಪ್ ಸಿಂಹ ಕ್ರಿಮಿನಲ್ ಪ್ರಕರಣ ದಾಖಲು

ಮೈಸೂರು, ಮಾ.1(ಬಿಎಲ್‌ಯು)– ಮೈಸೂರು ಕೊಡಗು ಲೋಕಸಭಾ ಸದಸ್ಯ ಪ್ರತಾಪ್ ಸಿಂಹ ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ಸಂಸದ ಪ್ರತಾಪ್ ಸಿಂಹ ಹಾಗೂ ಕೆಪಿಸಿಸಿ ವಕ್ತಾರ ಲಕ್ಷ್ಮಣ್ ನಡುವಿನ ಟಾಕ್ ಫೈಟ್ ಪ್ರಕರಣ ಈಗ ನ್ಯಾಯಾಲಯದ ಮೆಟ್ಟಿಲು ಹತ್ತಿದೆ.

ತಮ್ಮ ವಿರುದ್ಧ ಮಾನಹಾನಿ ಹೇಳಿಕೆ ನೀಡಿರುವ ಲಕ್ಷ್ಮಣ್ ವಿರುದ್ಧ ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆ ನೀಡುವಂತೆ ಪ್ರತಾಪ್ ಸಿಂಹ ಬೆಂಗಳೂರಿನ ಮುಖ್ಯ ಮೆಟ್ರೋ ಪಾಲಿಟನ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಖಾಸಗಿ ದೂರು ಸಲ್ಲಿಸಿದರು.

ಈ ಸಂಬಂಧ ವಿಚಾರಣೆ ನಡೆಸಿದ ನ್ಯಾಯಾಲಯ ಲಕ್ಷ್ಮಣ್ ವಿರುದ್ಧ ಐಪಿಸಿ ಸೆಕ್ಷನ್ 499 ಮತ್ತು 500 ಅಡಿಯಲ್ಲಿ ಕ್ರಿಮಿನಲ್ ಕೇಸ್ ದಾಖಲಿಸಿದೆ.

ಈ ಸಂಬಂಧ ಪ್ರತಿಕ್ರಿಯೆ ನೀಡಿರುವ ಪ್ರತಾಪ್ ಸಿಂಹ, ಕೆಪಿಸಿಸಿ ವಕ್ತಾರ ಲಕ್ಷ್ಮಣ್ ನನ್ನ ವಿರುದ್ಧ ಆಧಾರ ರಹಿತ ಆರೋಪ ಮಾಡುತ್ತಿದ್ದರು. ಪಾರ್ಲಿಮೆಂಟ್ ದಾಳಿಯಲ್ಲಿ ನನ್ನ ಕೈವಾಡವಿದೆ, ಕೊಡಗಿನ ಕಂಪನಿಯೊಂದರಲ್ಲಿ 60 ಕೋಟಿ ಬಂಡವಾಳ ತೊಡಗಿಸಿದ್ದೇನೆ ಎಂದು ಆಪಾದಿಸಿ ನನ್ನ ಕುಟುಂಬದ ವಿರುದ್ಧ ಕೂಡ ಅವಹೇಳನಕಾರಿ ಹೇಳಿಕೆ ನೀಡುತ್ತಿದ್ದರು. ಪ್ರಮುಖವಾಗಿ ಐದು ಆರೋಪಗಳನ್ನು ಮುಂದಿಟ್ಟು ನ್ಯಾಯಾಲಯದಲ್ಲಿ ಖಾಸಗಿ ದೂರು ಸಲ್ಲಿಸಿದ್ದೆ ಎಂದು ತಿಳಿಸಿದ್ದಾರೆ.

ಲಕ್ಷ್ಮಣ್ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ದಿನ ಪತ್ರಿಕೆಗಳ ವರದಿ ಸೇರಿದಂತೆ ಹಲವು ಸಾಕ್ಷಾಧಾರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೆ. ಈ ಸಂಬಂಧ ನ್ಯಾಯಾಲಯ ಸೆಪ್ಟೆಂಬರ್ ತಿಂಗಳಿನಿಂದ ಪರಾಮರ್ಷೆ ನಡೆಸಿ ಮತ್ತಷ್ಟು ಸಾಕ್ಷಿ ಕೇಳಿತ್ತು. ನ್ಯಾಯಾಲಯ ಕೇಳಿದ ಎಲ್ಲಾ ಸಾಕ್ಷಿಗಳನ್ನು ಒದಗಿಸಿದ್ದೆ. ಇದರ ಪರಿಣಾಮ ಲಕ್ಷ್ಮಣ್ ವಿರುದ್ಧ ನ್ಯಾಯಾಲಯ ಕ್ರಿಮಿನಲ್ ಕೇಸ್ ದಾಖಲಿಸಿದೆ ಎಂದು ಪ್ರತಾಪ್ ಸಿಂಹ ವಿವರಿಸಿದ್ದಾರೆ.

ತಮ್ಮ ವಿರುದ್ಧ ಸುಖಾ ಸುಮ್ಮನೆ ಆರೋಪ ಮಾಡುವವರನ್ನು ನ್ಯಾಯಾಲಯದ ಕಟಕಟ್ಟೆಯಲ್ಲಿ ನಿಲ್ಲಿಸಿ ಶಿಕ್ಷೆ ಕೊಡಿಸುವುದು ನನ್ನ ಉದ್ದೇಶ. ಆದರೆ ಲಕ್ಷ್ಮಣ್‌ರಿಂದ ನಾನು ಪರಿಹಾರ ಅಪೇಕ್ಷಿಸುವುದಿಲ್ಲ ಎಂದು ಪ್ರತಾಪ್ ಸಿಂಹ ಸ್ಪಷ್ಟಪಡಿಸಿದರು.





ಕಾನೂನು ಮೂಲಕ ಉತ್ತರ ಕೊಡುತ್ತೇನೆ

ತಾವು ಮಾಡಿರುವ ಆರೋಪವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿರುವ ಪ್ರತಾಪ್ ಸಿಂಹಗೆ ನಾನು ಕಾನೂನು ಮೂಲಕವೇ ಉತ್ತರ ಕೊಡುತ್ತೇನೆ ಎಂದು ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಸ್ಪಷ್ಟಪಡಿಸಿದ್ದಾರೆ.

ನಾನು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತದಾರನಾಗಿ, ಕಾಂಗ್ರೆಸ್ ಪಕ್ಷದ ವಕ್ತಾರನಾಗಿ ಪ್ರತಾಪ್ ಸಿಂಹರನ್ನು ಪ್ರಶ್ನೆ ಮಾಡಿದ್ದೇನೆ. ವಿರೋಧ ಪಕ್ಷದ ಸಂಸದನ ವೈಫಲ್ಯಗಳನ್ನು ಎತ್ತಿ ಹಿಡಿದ್ದೇನೆ. ಆದರೆ ಮಾಧ್ಯಮಗಳ ಮೂಲಕ ಉತ್ತರ ನೀಡದ ಪ್ರತಾಪ್ ಸಿಂಹ ನ್ಯಾಯಾಲಯದ ಮೂಲಕ ನನ್ನ ಅಭಿವ್ಯಕ್ತಿ ಸ್ವಾತಂತ್ರ್ಯ ಕಸಿಯುವ ಪ್ರಯತ್ನ ಮಾಡಿದ್ದಾರೆ ಎಂದು ದೂರಿದರು.

ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣದ ಬಗ್ಗೆ ಜೂನ್ 12 ರಂದು ನಡೆಯುವ ವಿಚಾರಣೆ ವೇಳೆ ನಮ್ಮ ವಕೀಲರ ಮೂಲಕ ಉತ್ತರ ಕೊಡುತ್ತೇನೆ ಎಂದು ತಿಳಿಸಿದರು. ನಾನು ಮಾಡಿದ ಆರೋಪಕ್ಕೆ ಪ್ರತಾಪ್ ಸಿಂಹ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿದ್ದಾರೆ. ಹಾಗಾದರೆ ಪ್ರತಾಪ್ ಸಿಂಹ ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ನಾಯಕರ ವಿರುದ್ಧ ಶೇಕಡ 90 ರಷ್ಟು ಆಧಾರ ರಹಿತ ಆರೋಪ ಮಾಡಿಲ್ಲವೆ. ನಾವೇನು ಮಾಡಬೇಕು ಎಂದು ಪ್ರಶ್ನಿಸಿದ್ದಾರೆ. ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ 40 ಪ್ರಕರಣ ದಾಖಲಿಸಿದ್ದಾರೆ. ಈಗ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿದ್ದು, ನ್ಯಾಯಾಲಯ ದಲ್ಲೇ ಅವರ ಆರೋಪಕ್ಕೆ ತಕ್ಕ ಉತ್ತರ ನೀಡುತ್ತೇನೆ ಎಂದು ಲಕ್ಷ್ಮಣ್ ತಿಳಿಸಿದ್ದಾರೆ.

ಢಾಕಾದ ರೆಸ್ಟೋರೆಂಟ್‌ನಲ್ಲಿ ಭಾರಿ ಅಗ್ನಿ ಅವಘಡ, 44 ಮಂದಿ ಸಾವು

ಢಾಕಾ: ಬಾಂಗ್ಲಾದೇಶದ ರಾಜಧಾನಿ ಢಾಕಾದಲ್ಲಿ 6 ಅಂತಸ್ತಿನ ಕಟ್ಟಡದಲ್ಲಿ ಭಾರೀ ಅಗ್ನಿ ಅವಘಡ ಸಂಭವಿಸಿದ್ದು, ಘಟನೆಯಲ್ಲಿ ಕನಿಷ್ಠ 44 ಮಂದಿ ಮೃತಪಟ್ಟು ಹಲವರಿಗೆ ಗಾಯವಾಗಿರುವ ಘಟನೆ ಗುರುವಾರ ತಡರಾತ್ರಿ ನಡೆದಿದೆ.

ಢಾಕಾ ಬೈಲಿ ರಸ್ತೆಯಲ್ಲಿರುವ ಬಿರಿಯಾನಿ ರೆಸ್ಟೋರೆಂಟ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ನಂತರ ಬೆಂಕಿಯ ಕೆನ್ನಾಲಿಗೆ ಇತರ ಮಹಡಿಗಳಿಗೂ ವ್ಯಾಪಿಸಿದೆ. ಕೂಡಲೇ ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕ ದಳದ ಸಿಬ್ಬಂದಿಗಳು ಸತತ ಎರಡು ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಘಟನೆ ನಡೆದ ಪ್ರದೇಶದಲ್ಲಿ ಅನೇಕ ಹೋಟೆಲ್‌ಗಳು, ಬಟ್ಟೆ ಅಂಗಡಿಗಳು ಮತ್ತು ಮೊಬೈಲ್ ಫೋನ್ ಮಾರಾಟ ಅಂಗಡಿಗಳಿವೆ.

ಸ್ಥಳದಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ 42 ಮಂದಿ ಸೇರಿದಂತೆ 75 ಮಂದಿಯನ್ನು 7 ಅಂತಸ್ತಿನ ಕಟ್ಟಡದಿಂದ ಹೊರ ತೆಗೆಯಲಾಗಿದ್ದು, ಕೆಲವ ಸ್ಥಿತಿ ಗಂಭೀರವಾಗಿದೆ. ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ.

ರೆಸ್ಟೋರೆಂಟ್‌ನಲ್ಲಿ ಗ್ಯಾಸ್ ಸಿಲಿಂಡರ್ ಸ್ಫೋಟದಿಂದಾಗಿ ಅವಘಡ ಸಂಭವಿಸಿದೆ ಎಂದು ಅಗ್ನಿಶಾಮಕ ದಳದ ಅಧಿಕಾರಿಗಳು ಹೇಳಿದ್ದಾರೆ. ಮೆಟ್ಟಿಲುಗಳ ಮೇಲೆ ಹೊಗೆ ಬರುತ್ತಿತ್ತು. ಸಾಕಷ್ಟು ಜನರು ಮೇಲೆ ಓಡಿ ಬರುತ್ತಿದ್ದರು, ಕೆಲವರು ಕಟ್ಟಡದಿಂದ ಇಳಿಯಲು ನೀರಿನ ಪೈಪ್‌ಗಳನ್ನು ಬಳಸುತ್ತಿದ್ದರು. ಕೆಲವರು ಮಹಡಿಯಿಂದ ಕೆಳಗೆ ಜಿಗಿದು ಗಾಯಗೊಂಡಿದ್ದರು ಎಂದು ರೆಸ್ಟೋರೆಂಟ್ ಮ್ಯಾನೇಜರ್ ಹೇಳಿದ್ದಾರೆ.

CHANGE OF NAME

I, Padma Residing at No. 1664 K11, Kanthraja Urs Road, Laksmipuram, Mysore-570004, have Changed my name from Padma Gururaja to Padma on my own free will, Sworn in before Notary Sumithra B Mysuru vide affidvit Dated 29-02-2024

Sd/- Padma

PUBLIC NOTICE

The General Public is hereby informed that my client **Mr. RAVIKUMAR D.S.** S/o K.Doraiswamy is intended to purchase the below mentioned schedule of property from its owner M/s Premio Estates, No.446, 2nd Floor, Parvathi Complex, Near Kotak Mahendra Bank, Buddha Marga, Siddarthanagar, Mysore-570011.

That if anybody is having any objections, claim, interest, dispute with the above owners boundaries for the intended sale transaction, he/she/they may contact the undersigned with the documentary proof substantiating his/her/their objections/claims/details of from dispute/s **within Seven (07) Days** from the date of this publication, failing which my client will proceed to complete the Sale transaction with the above owners as if there are no third party claims/objections/disputes in respect of the Schedule Property and thereafter no claims/ objections/ disputes will be entertained.

SCHEDULE

All the piece and parcel **of the Site bearing No.16, measuring East to West 12 meters, North to South 9 meters,** formed in Sy.No.22/2 measuring 1 acre 7 guntas, Sy.No.22/3, measuring 2 acres 4 guntas, Sy.No.22/4, measuring 1 acre 14 guntas & Sy.No.27 measuring 2 acres 15 guntas, of Yaandahalli Village, Varuna Hobli, Mysore Taluk, bounded by **East** : Site No.07, **West** : Road, **North** : Site No.17, **South** : Site No.15.

Smt. ANNAPURNA S. Advocate
A P LAW ASSOCIATES, #3852/L-11,
"Om Shakthi Nilaya", Near Karunapura Part,
Gandhinagar, Mysore-570007.
9964858870, 7411057728.

ಕೆ.ಬೆಳ್ಳೂರು ಗ್ರಾಮದ ಶ್ರೀ ಭೈರವೇಶ್ವರಸ್ವಾಮಿ ಬಸವಪ್ಪ ನಿಧನ



ಭಾರತೀನಗರ ಸಮೀಪದ ಕೆ.ಬೆಳ್ಳೂರು ಗ್ರಾಮದ ನಿಧನಗೊಂಡ ಶ್ರೀ ಭೈರವೇಶ್ವರ ಸ್ವಾಮಿ ಬಸವಪ್ಪ

ಭಾರತೀನಗರ, ಮಾ.1– ಇಲ್ಲಿಗೆ ಸಮೀಪದ ಕೆ.ಬೆಳ್ಳೂರು ಗ್ರಾಮದ ಶ್ರೀ ಭೈರವೇಶ್ವರ ಸ್ವಾಮಿ ಬಸವಪ್ಪ ಹೃದಯಾಘಾತದಿಂದ ಮೃತಪಟ್ಟಿದೆ.

ಶ್ರೀ ಭೈರವೇಶ್ವರಸ್ವಾಮಿ ಬಸವಪ್ಪನನ್ನು ಟ್ರ್ಯಾಕ್ಟರ್ ಮೂಲಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಭಕ್ತಾದಿಗಳಿಗೆ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು.

ಸಾತನೂರು ಹೋಬಳಿಯ ಬೋರೇಗೌಡನದೊಡ್ಡಿ ಗ್ರಾಮದಿಂದ ತರಲಾಗಿದ್ದ ಈ ಬಸವಪ್ಪನನ್ನು ಭೈರವೇಶ್ವರಸ್ವಾಮಿ ಬಸವನಿಗೆ ಮುದ್ರೆ ಹಾಕಿಸಿ ಬಿಡಲಾಗಿತ್ತು. ಇಂದು ಮಧ್ಯಾಹ್ನ ಬಸವಪ್ಪನನ್ನು ಕೊಕ್ಕರೆ ಬೆಳ್ಳೂರು ಬಳಿ ಇರುವ ಶಿಂಷಾ ನದಿಯ ದಡದಲ್ಲಿ ಮೈ ತೊಳೆಯಲು ಕರೆದೊಯ್ದಾಗ ಮೃತಪಟ್ಟಿದೆ. ಈ ಬಸವಪ್ಪನಿಗೆ 3 ವರ್ಷ ತುಂಬಿದೆ. ಕುಲದೇವರ ಭಕ್ತಾದಿಗಳು ಬಸವಪ್ಪನ ಅಂತಿಮ ದರ್ಶನ ಪಡೆದು ಪೂಜೆ ಸಲ್ಲಿಸಿದರು. ನಂತರ ಗ್ರಾಮದ ಮುಖಂಡರು, ಯಜಮಾನರು ಬಸವಪ್ಪನ ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಿ ಗ್ರಾಮದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ನಡೆಸಿ ನಂತರ ದೇವಸ್ಥಾನದ ಬಳಿ ಹಾಲು, ಮೊಸರಿನಿಂದ ಅಭಿಷೇಕ ಮಾಡಿದ ಬಳಿಕ ವಿಭೂತಿಗಟ್ಟಿ, ಉಪ್ಪು, ಬಿಲ್ವಪತ್ರೆ ಪಂಚದ್ರವ್ಯಗಳಿಂದ ಸಂಜೆ ಅಂತ್ಯಸಂಸ್ಕಾರ ನೆರವೇರಿಸಿದರು.

ನಾಳೆ ಪಲ್ಸ್ ಪೋಲಿಯೊ ಲಸಿಕ ಕಾರ್ಯಕ್ರಮ

ಮಂಡ್ಯ,ಮಾ.1– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ವಿವಿಧ ಇಲಾಖೆ, ಸಂಘ ಸಂಸ್ಥೆಗಳ ಸಹಯೋಗದಲ್ಲಿ 5 ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಹನಿ ಹಾಕುವ ಕಾರ್ಯಕ್ರಮವನ್ನು ಜಿಲ್ಲೆಯಾದ್ಯಂತ ಮಾ.3 ರಿಂದ ನಡೆಯಲಿದೆ.

ಮಂಡ್ಯ ಜಿಲ್ಲೆಯ ಪಲ್ಸ್ ಪೋಲಿಯೊ ಉದ್ಘಾಟನಾ ಕಾರ್ಯಕ್ರಮವನ್ನು ಮಾ.3ರ ಭಾನುವಾರ ಬೆಳಿಗ್ಗೆ 9 ಗಂಟೆಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣ, ಹಾಲಹಳ್ಳಿ ಸ್ಲಂ ಬೋರ್ಡ್, ಯತ್ತಗದಹಳ್ಳಿ ರಸ್ತೆ, ಮಂಡ್ಯ ಇಲ್ಲಿ ಏರ್ಪಡಿಸಲಾಗಿದೆ.

ಸಾರ್ವಜನಿಕರು ತಮ್ಮ 5 ವರ್ಷದ ಒಳಗಿನ ಮಕ್ಕಳಿಗೆ ತಪ್ಪದೇ ಪೋಲಿಯೋ ಲಸಿಕೆ ಹಾಕಿಸಬೇಕು. ಮಗುವಿನ ಶಾಶ್ವತ ಅಂಗವೈಕಲ್ಯ ತಡೆಯಲು ಎರಡು ಹನಿ ಪಲ್ಸ್ ಪೋಲಿಯೋ ಅತ್ಯಗತ್ಯ ಎಂದು ಜಿಲ್ಲಾ ಆರೋಗ್ಯ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಭಾರತೀನಗರದ ಅಂಬೇಡ್ಕರ್ ಭವನದಲ್ಲಿ ಐಎಎಸ್ ಅಧಿಕಾರಿ ಕೆ.ಶಿವರಾಮು ಅವರಿಗೆ ದಲಿತ ಸಂಘಟನೆಗಳ ವತಿಯಿಂದ ಶ್ರದ್ಧಾಂಜಲಿ ಸಭೆ ನಡೆಯಿತು. ದಲಿತ ಮುಖಂಡ ಕಬ್ಬಾಳಯ್ಯ, ತಾ.ಪಂ ಮಾಜಿ ಸದಸ್ಯ ಭರತೇಶ್, ಕರಡಕೆರೆ ಯೋಗೇಶ್, ಚಿಕ್ಕರಸಿನಕೆರೆ ಮೂರ್ತಿ, ಗುಡಿಗೆರೆ ಬಸವರಾಜು, ಪ್ರಸಾದ್, ಅಣ್ಣೂರು ರಾಮಣ್ಣ, ಬಸವರಾಜು, ಇತರರಿದ್ದರು.

ಕೆರಗೋಡು ಗ್ರಾಮದಲ್ಲಿ ಹನುಮ, ರಾಷ್ಟ್ರಧ್ವಜ ಹಾರಿಸಿ ಸಾಮರಸ್ಯ ಸಾರಿದ ಗ್ರಾಮಸ್ಥರು

ಧ್ವಜ ವಿವಾದಕ್ಕೆ ತೆರೆ, ಗ್ರಾಮಕ್ಕೆ ಶಾಸಕ ಗಣಿಗ ರವಿಕುಮಾರ್ ಭೇಟಿ, ಬಿಗಿ ಪೊಲೀಸ್ ಬಂದೋಬಸ್ತ್

ಮಂಡ್ಯ,ಮಾ.1– ಕಳೆದ ತಿಂಗಳು ಹನುಮ ಧ್ವಜ ವಿವಾದದಿಂದ ಭಾರೀ ವಿವಾದಕ್ಕೀಡಾಗಿದ್ದ ತಾಲೂಕಿನ ಕೆರಗೋಡು ಗ್ರಾಮದಲ್ಲಿ ಗ್ರಾಮಸ್ಥರು ಇಂದು ಹನುಮ ಧ್ವಜ ಮತ್ತು ರಾಷ್ಟ್ರ ಧ್ವಜ ಹಾರಿಸಿ ಸಾಮರಸ್ಯ ಪ್ರದರ್ಶಿಸಿದರು. ಶಾಸಕ ಗಣಿಗ ರವಿಕುಮಾರ್ ಭೇಟಿ ನೀಡಿದಾಗ ಗ್ರಾಮಸ್ಥರು ಪಕ್ಷಬೇಧ ಮರೆತು ಅವರನ್ನು ಸ್ವಾಗತಿಸಿ, ಅಭಿನಂದಿಸಿದರು. ನಂತರ ಗ್ರಾಮಸ್ಥರು ಹನುಮ ಧ್ವಜ ಹಾಗೂ ರಾಷ್ಟ್ರಧ್ವಜ ಹಾರಿಸಿ ಸಾಮರಸ್ಯ ಪ್ರದರ್ಶಿಸಿದರು.

ನಂತರ ಶಾಸಕರು ಗ್ರಾಮದ ಹನುಮ ದೇಗುಲ ಸೇರಿದಂತೆ ವಿವಿಧ ದೇಗುಲಗಳ ಜೀರ್ಣೋದ್ಧಾರಕ್ಕೆ ಅನುದಾನ ಘೋಷಿಸಿದರು. ಶಾಸಕರ ಭೇಟಿ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ತಾಲೂಕಿನ ಕೆರಗೋಡು ಪಂಚಲಿಂಗೇಶ್ವರ ದೇವಾಲಯದ ಆವರಣದಲ್ಲಿ ಕೆರಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ 2023–24ನೇ ಸಾಲಿನ ವಿವಿಧ ದೇವಾಲಯಗಳಿಗೆ ಶಾಸಕರು ಅನುದಾನ ನೀಡಿದರು.

ಕೆರಗೋಡು ಗ್ರಾಮದ ದೇವಿರಮ್ಮ ದೇವಾಲಯಕ್ಕೆ 4 ಲಕ್ಷ, ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ 1.5 ಲಕ್ಷ, ಹೊನ್ನಮ್ಮ ದೇವಿ ದೇವಾಲಯಕ್ಕೆ 1.5 ಲಕ್ಷ, ಚನ್ನಕೇಶವ ದೇವಸ್ಥಾನಕ್ಕೆ 1.5 ಲಕ್ಷ, ದೊಡ್ಡಮ್ಮತಾಯಿ ದೇವಸ್ಥಾನಕ್ಕೆ 1.5 ಲಕ್ಷ, ಮರಿಲಿಂಗನದೊಡ್ಡಿ ಶ್ರೀರಾಮ ದೇವಸ್ಥಾನಕ್ಕೆ 2 ಲಕ್ಷ ಅನುದಾನ ಘೋಷಿಸಿದರು. ಕಳೆದ ತಿಂಗಳು ಗ್ರಾಮದ ಧ್ವಜಸ್ತಂಭದಿಂದ ಹನುಮ ಧ್ವಜ ತೆಗೆದು ರಾಷ್ಟ್ರಧ್ವಜ ಹಾರಿಸಿದ್ದಕ್ಕೆ ಭಾರೀ ಆಕ್ರೋಶ ವ್ಯಕ್ತವಾಗಿ, ಹಿಂದೂ ಪರ ಸಂಘಟನೆಗಳು, ಬಿಜೆಪಿ, ಜೆಡಿಎಸ್ ಭಾರೀ ಪ್ರತಿಭಟನೆ ನಡೆಸಿದ್ದವು. ಜೊತೆಗೆ ಗ್ರಾಮದಲ್ಲಿ ಲಾಠಿ ಚಾರ್ಜ್ ನಡೆದು ಅಶಾಂತಿ ವಾತಾವರಣ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ 144 ಸೆಕ್ಷನ್ ಜಾರಿ ಮಾಡಲಾಗಿತ್ತು. ಇದೀಗ ಸ್ವತ: ಶಾಸಕರೇ ಗ್ರಾಮಕ್ಕೆ ಭೇಟಿ ನೀಡಿ, ಎಲ್ಲಾ ವಿವಾದಕ್ಕೂ ತೆರೆ ಎಳೆದಿದ್ದಾರೆ.



ಕೆರಗೋಡಿನಲ್ಲಿ ಗ್ರಾಮಸ್ಥರು ಹನುಮ ಧ್ವಜ ಮತ್ತು ರಾಷ್ಟ್ರ ಧ್ವಜ ಹಾರಿಸಿ ಸಾಮರಸ್ಯ ಪ್ರದರ್ಶಿಸಿದರು.

ಪೋಷಕರು ಮಕ್ಕಳ ಜವಾಬ್ದಾರಿ ತೆಗೆದುಕೊಳ್ಳಬೇಕು

ಕೆ.ಆರ್.ಪೇಟೆ,ಮಾ.1– ವಿದ್ಯಾರ್ಥಿಗಳು ಶಾಲೆಯಲ್ಲಿ 6 ಗಂಟೆಗಳ ಕಾಲ ಇದ್ದರೆ, ಉಳಿದ 18 ಗಂಟೆಗಳ ಕಾಲ ಪೋಷಕರ ಜೊತೆಯಲ್ಲಿ ಇರುತ್ತಾರೆ. ಹಾಗಾಗಿ ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ಪೋಷಕರೂ ಸಹ ತೆಗೆದುಕೊಳ್ಳಬೇಕು ಎಂದು ಮಂಗಳೂರು ರಾಮಕೃಷ್ಣ ಮಿಷನ್ ಹಾಗೂ ಸ್ವಚ್ಛ ಮಂಗಳೂರು ಅಭಿಯಾನದ ಸಂಯೋಜಕ ರಂಜನ್ ಬೆಳ್ಳರ್ಪಾಡಿ ಹೇಳಿದರು.

ಅವರು ಕೆಆರ್.ಪೇಟೆ ತಾಲೂಕಿನ ಮಣಿಗನ ಹಳ್ಳಿ(ದೊಡ್ಡನಕಟ್ಟೆ) ಗ್ರಾಮದಲ್ಲಿರುವ ಶ್ರೀ ಚಾಮುಂಡೇಶ್ವರಿ ಪಬ್ಲಿಕ್ ಶಾಲೆಯ 2023–24ನೇ ಸಾಲಿನ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಮಕ್ಕಳನ್ನು ಮೊಬೈಲ್ ಗೀಳಿನಿಂದ ದೂರವಿಡಬೇಕು. ಅಂಕ ಗಳಿಕೆಗೆ ಹೆಚ್ಚಿನ ಮಹತ್ವ ನೀಡಬಾರದು. ಅಂಕಗಳ ಜೀವನವನ್ನು ನಿರ್ಧಾರ ಮಾಡುವುದಿಲ್ಲ. ಧರ್ಮಸ್ಥಳ ಸಂಸ್ಥೆಯಲ್ಲಿ ಶಿಕ್ಷಣ ಪಡೆದು ಒಬ್ಬ ಶ್ರೇಷ್ಠ ವ್ಯಕ್ತಿಯಾಗಿ ಬೆಳೆಯಲು ಸಾಧ್ಯವಾಗಿದೆ. ಅಂಕಗಳಿಕೆಯಿಂದ ಮಕ್ಕಳ ಅಳೆಯಬೇಡಿ. ಮನೆಯ ಪರಿಸರವನ್ನು ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಇಡಬೇಕು. ಪೋಷಕರು ಮಕ್ಕಳ ಜೊತೆ ಸುಳ್ಳು ಹೇಳಬೇಡಿ. ಮಕ್ಕಳಿಗೆ ಸಂಸ್ಕಾರ ನೀಡಿ. ಮಕ್ಕಳಿಗೆ ಆತ್ಮವಿಶ್ವಾಸ ತುಂಬಬೇಕು. ದೇಶಕ್ಕಾಗಿ ಏನಾದರೂ ಸೇವೆ ನೀಡಬೇಕು ಎಂಬ ಭಾವನೆಯನ್ನು ಬೆಳೆಸಬೇಕು ಎಂದು ಅವರು ಮನವಿ ಮಾಡಿದರು.

ರಾಜ್ಯ ಆರ್.ಟಿ.ಓ ಅಧಿಕಾರಿಗಳ ಸಂಘದ ಅಧ್ಯಕ್ಷರು ಹಾಗೂ ಸಮಾಜ ಸೇವಕರಾದ ಆರ್.ಟಿ.ಓ ಮಲ್ಲಿಕಾರ್ಜುನ್ ಮುಖ್ಯ ಅತಿಥಿಯಾಗಿ ಭಾಗವಹಿಸಿ ಪೋಷಕರಿಗೆ ಬಹುಮಾನ ವಿತರಿಸಿದರು.

ಶ್ರೀ ಚಾಮುಂಡೇಶ್ವರಿ ಪಬ್ಲಿಕ್ ಶಾಲೆಯ ಸಂಸ್ಥಾಪಕ ಅಧ್ಯಕ್ಷ ಕೆ.ದಿನೇಶ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗ್ರಾಮಾಂತರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಆನಂದೇಗೌಡ, ವಿಠಲಾಪುರ ಸಿ.ಆರ್.ಸಿ. ಸಂಪನ್ಮೂಲ ವ್ಯಕ್ತಿ ಎಸ್.ಎಸ್.ಪ್ರಸನ್ನ, ಶಾಲೆಯ ಸಿಇಓ ಪಿ.ಮಂಜುರಾಮ್, ಮೇಲ್ವಿಚಾರಕ ಸಂಕ್ರಾಂತಿ ಮಂಜುರಾಮ್, ಮುಖ್ಯ ಶಿಕ್ಷಕ ಎಂ.ಕೆ.ಅಶೋಕ್ ಸೇರಿದಂತೆ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ವಾರ್ಷಿಕೋತ್ಸವ ಸಮಾರಂಭವನ್ನು ಮಂಗಳೂರು ರಾಮಕೃಷ್ಣ ಮಿಷನ್ ಹಾಗೂ ಸ್ವಚ್ಛ ಮಂಗಳೂರು ಅಭಿಯಾನದ ಸಂಯೋಜಕರಾದ ರಂಜನ್ ಬೆಳ್ಳರ್ಪಾಡಿ ಉದ್ಘಾಟಿಸಿದರು.

ಹಾಲತಿ ಗ್ರಾಮದಲ್ಲಿ ಪಾರ್ವತಿ ಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯ ಲೋಕಾರ್ಪಣೆ

ನಾಗಮಂಗಲ: ಹಾಲತಿ ಗ್ರಾಮದಲ್ಲಿ ಪಾರ್ವತಿ ಸಮೇತ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ದೇವಾಲಯ ಲೋಕಾರ್ಪಣೆಗೊಳ್ಳಲು ಸಿದ್ಧವಾಗಿದೆ.

ತಾಲೂಕಿನ ಇತಿಹಾಸ ಪ್ರಸಿದ್ಧ ಹಾಲತಿ ಸ್ವರ್ಗಾಶ್ರಮ ಶಾಖಾ ಮಠದಲ್ಲಿ ಸುದ್ದಿಗೋಷ್ಠಿಯನ್ನು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ ಮಾತನಾಡಿ, ಮಾ.5 ರಿಂದ 7 ರವರೆಗೆ ಈ ಸಂಬಂಧ ವಿವಿಧ ಧಾರ್ಮಿಕ ಕಾರ್ಯ ನಡೆಯಲಿದೆ ಎಂದರು.

ಕಾರ್ಯಕ್ರಮದಲ್ಲಿ ಕೃಷಿ ಹಾಗೂ ಮಂಡ್ಯ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ, ವಿಧಾನಪರಿಷತ್ ಸದಸ್ಯ ಮಧು ಜಿ ಮಾದೇಗೌಡ , ಮಾಜಿ ಸಚಿವರಾದ ಪುಟ್ಟರಾಜು, ಸಾ.ರಾ.ಮಹೇಶ್, ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ, ಮಾಜಿ ಶಾಸಕ ಸುರೇಶ್ ಗೌಡ ಭಾಗವಹಿಸಲಿದ್ದಾರೆ.

ಮಾ.7 ರಂದು ಪಾರ್ವತಿ ಸಮೇತ ಶ್ರೀ ಮಲ್ಲಿಕಾರ್ಜುನ ಸ್ವಾಮಿ, ಮಹಾ ಗಣಪತಿ, ಸುಬ್ರಹ್ಮಣ್ಯ ಸ್ವಾಮಿ, ಬಾಲ ಭೈರವೇಶ್ವರ ಸ್ವಾಮಿ, ಧ್ವಜಸ್ತಂಭ ಹಾಗೂ ಪರಿವಾರ ದೇವತೆಗಳ ಪ್ರತಿಷ್ಠಾಪನೆ ನಡೆಯಲಿದೆ ಹಾಗೂ ನೂತನ ದೇವಾಲಯದ ವಿಮಾನ ಗೋಪುರದ ಮಹಾ ಕುಂಭಾಭಿಷೇಕ ಮಹೋತ್ಸವ ವೈಭವದಿಂದ ಜರಗಲಿದೆ ಎಂದರು.

ಹಾಲತಿ ಸ್ವರ್ಗಾಶ್ರಮ ಶಾಖಾ ಮಠದ ಪೂಜ್ಯ ಶ್ರೀ ಅಮರಾನಂದ ಪರಮಹಂಸ ಸ್ವಾಮೀಜಿ ಅವರ ಸದಿಚ್ಛೆಯಂತೆ ಸ್ವರ್ಗಾಶ್ರಮದ ಸುವರ್ಣ ಮಹೋತ್ಸವದ ಕಾರ್ಯಕ್ರಮಗಳು ಮಾ.5 ರಂದು ಮಂಗಳವಾರ ವೇದಪಾರಾಯಣ, ಗಣಪತಿ ಪೂಜೆ, ಪುಣ್ಯಹ, ಪಂಚಗವ್ಯ, ಮಹಾಸಂಕಲ್ಪ ಹಾಗೂ ಬೆಟ್ಟದ ಮೂಲದೇವರಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವರಿಗೆ ಅನುಜ್ಞಾ ಪೂರ್ವಕ ವಿವಿಧ ಅಭಿಷೇಕಗಳು, ಕಳಶ ಸ್ಥಾಪನೆ, ನವಗ್ರಹ ಹೋಮ, ದ್ರವ್ಯಹುತಿ, ಪೂರ್ಣಾವತಿ ಮಹಾಮಂಗಳಾರತಿ, ನಂತರ ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ.

ಸಂಜೆ ಗೋದೋಳಿ ಲಗ್ನದಲ್ಲಿ ಗ್ರಾಮ ಪ್ರದಕ್ಷಿಣೆ, ಗಂಗಾ ಪೂಜೆ, ನೂತನ ದೇವಾಲಯದಲ್ಲಿ ಗಣಪತಿ ಪೂಜೆ, ಅನುಜ್ಞ ಪೂಜೆ, ವಾಸ್ತು ಪೂಜೆ ಇನ್ನಿತರ ಪೂಜೆಗಳು ನಡೆಯಲಿವೆ ಎಂದರು.

ಮಾ.6 ರಂದು ಬುಧವಾರ ಬೆಳಿಗ್ಗೆ ಮಹಾಲಕ್ಷ್ಮಿ ಕಳಸ ಸ್ಥಾಪನೆ ಅಗ್ನಿ ಕಾರ್ಯ ನೂತನ ವಿಗ್ರಹಗಳಿಗೆ ಜಲಾಧಿ ವಾಸ, ಕ್ಷೀರಧಿ ವಾಸ, ಪೂರ್ಣಾವತಿ, ಅಷ್ಟವರ್ಧನ ಸೇವೆ ಮಹಾಮಗಳಾರತಿ ನಂತರ ತೀರ್ಥ ಪ್ರಸಾದ ವಿನಿಯೋಗ ಜರಗಲಿದ್ದು, ಸಂಜೆ 7ಕ್ಕೆ ಮಹಾಸಂಕಲ್ಪ ಅಂಕುರಾರ್ಪಣ, ರಕ್ಷಾ ಬಂಧನ, ಅಗ್ನಿ ಕಾರ್ಯ ಹೋಮ, ಪೂರ್ಣಾವತಿ ಹಾಗೂ ನೂತನ ವಿಗ್ರಹಗಳಿಗೆ ಪುಷ್ಪಾರ್ಚನೆ ಮಂಗಳಾರತಿ ನಡೆಯಲಿದೆ.

ಪ.ಮಲ್ಲೇಶ್–90 ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಮೈಸೂರಲ್ಲಿ ಚಾಲನೆ

• ಕಳೆದ ಒಂಭತ್ತೂವರೆ ವರ್ಷದಿಂದ ಎಲ್ಲಾ ರೀತಿಯ ಹೋರಾಟಗಳನ್ನು ಕೇಂದ್ರ ಸರ್ಕಾರ ಹತ್ತಿಕ್ಕಿದೆ • ದೆಹಲಿ ಸಾಮಾಜಿಕ ಹೋರಾಟಗಾರ ತೀಸ್ತಾ ಸೆಟಲ್‌ವಾಡ್ ಆರೋಪ

ಮೈಸೂರು, ಮಾ.1(ಎಂಟಿವೈ)– ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ನಿರಂತರವಾಗಿ ರೈತರೂ ಸೇರಿದಂತೆ ದೇಶದ ಎಲ್ಲಾ ಸಮುದಾಯಗಳ ವಿರುದ್ಧ ಯುದ್ಧ ಸಾರುವ ಮೂಲಕ ಚಳುವಳಿಗಳನ್ನು ಹತ್ತಿಕ್ಕುತ್ತಿದೆ ಎಂದು ದೆಹಲಿಯ ಸಾಮಾಜಿಕ ಹೋರಾಟಗಾರ ತೀಸ್ತಾ ಸೆಟಲ್‌ವಾಡ್ ಆರೋಪಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟ 'ಪ.ಮಲ್ಲೇಶ್–90' ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಕಳೆದ ಒಂಭತ್ತೂವರೆ ವರ್ಷಗಳಲ್ಲಿ ಎಲ್ಲ ಸಮುದಾಯಗಳ ವಿರುದ್ಧವೂ ಯುದ್ಧ ಘೋಷಿಸಿದೆ. ಸಂವಿಧಾನ ಸೌಧದ ಇಟ್ಟಿಗೆಗಳನ್ನು ಒಂದೊಂದಾಗಿ ಉರುಳಿಸುತ್ತಿದೆ. ಅಲ್ಲದೆ, ದೇಶಕ್ಕೆ ಅನ್ನ ನೀಡುವ ರೈತರನ್ನು ಶತ್ರುಗಳಂತೆ ನೋಡುತ್ತಿದೆ. ಅದಾನಿ ತಯಾರಿಸುವ ಡ್ರೋನ್‌ಗಳು ಹೋರಾಟನಿರತ ರೈತರ ವಿರುದ್ಧ ಬಳಸಲಾಗುತ್ತಿದೆ. ದೆಹಲಿಯ ರಸ್ತೆಗಳಿಗೆ ಮೊಳೆ ಹೊಡೆದು, ತಂತಿಬೇಲಿ, ಗೋಡೆ ನಿರ್ಮಿಸಿ, ರೈತ ಚಳವಳಿ ಹತ್ತಿಕ್ಕಲಾಗುತ್ತಿದೆ. 2014ರ ನಂತರ ಭಾರತೀಯರು ನಿರಂಕುಶತ್ವ, ಸರ್ವಾಧಿಕಾರಿ ಆಡಳಿತದ ಕಪಿಮುಷ್ಠಿಯಲ್ಲಿ ಸಿಲುಕಿದ್ದಾರೆ. ಹೆಡಗೇವಾರ್, ಗೋಳ್ವಾಲ್ಕರ್ ಅವರ ಸಿದ್ಧಾಂತದ ಆಧಾರ ಮೇಲೆಯೇ ದೇಶವನ್ನು ನಿರ್ಮಿಸಲಾಗುತ್ತಿದೆ. ಶಾಲೆಗಳಿಗಿಂತ ಪ್ರತಿಮೆಗಳು ಮುಖ್ಯವಾಗಿವೆ. ವೈಚಾರಿಕತೆ, ವಿಜ್ಞಾನ ಬೇಡವಾಗಿದೆ ಎಂದು ಕಿಡಿಕಾರಿದರು.

ಆರ್‌ಎಸ್‌ಎಸ್‌ಗೆ ಸಂವಿಧಾನವೇ ಸಮಸ್ಯೆಯಾಗಿ ಪರಿಣಮಿಸಿದೆ. ಜಾತಿ ಆಧಾರಿತ ಮನುಸ್ಮೃತಿಯನ್ನು ಜಾರಿಗೊಳಿಸುವುದಕ್ಕಾಗಿಯೇ ಅವರು ಅಧಿಕಾರಕ್ಕೆ ಬಂದಿದ್ದಾರೆ ಡಬಲ್ ಎಂಜಿನ್ ಸರ್ಕಾರಗಳು ಸಂಸದೀಯ ಪ್ರಜಾಪ್ರಭುತ್ವದ ಆಧಾರದಲ್ಲಿಯೇ ಅಧಿಕಾರಕ್ಕೆ ಬಂದು ಸಂವಿಧಾನದ ಆಶಯಗಳಾದ ಮೂಲ ಭೂತ ಹಕ್ಕುಗಳು, ರಾಜ್ಯನಿರ್ದೇಶಕ ತತ್ವಗಳು ಸೇರಿದಂತೆ ಎಲ್ಲ ಸ್ತಂಭಗಳನ್ನು ಕೆಡವುತ್ತಿವೆ ಎಂದರು.

ಪುಣೆಯಲ್ಲಿ ಮೊಹಸಿನ್ ಶೇಖ್ ಹತ್ಯೆ ನಂತರ ಅಮಾಯಕರ ಹತ್ಯೆಗಳು ಮುಂದುವರಿದಿವೆ. ಮಣಿಪುರದಲ್ಲಿ ಸಂಘರ್ಷ ಸೃಷ್ಟಿಸಿ, ಅಲ್ಲಿನ ಮೂರು ಸಮುದಾಯಗಳು ಬಾಯಿ ಬಿಡದಂತೆ ಕುತಂತ್ರ ನಡೆಸಲಾಗಿದೆ. ಗಲಭೆಗೆ ಸಿಲುಕಿ ಸಂತ್ರಸ್ತರಾದ 12 ಸಾವಿರ ಮಕ್ಕಳು ನಿರಾಶ್ರಿತ ಶಿಬಿರದಲ್ಲಿದ್ದಾರೆ. ಈ ಬಗ್ಗೆ ಸಂಸತ್ತಿನಲ್ಲಿ ಯಾವುದೇ ಚರ್ಚೆ ಆಗುವುದಕ್ಕೆ ಅವಕಾಶ ನೀಡಲಿಲ್ಲ. ತುರ್ತು ಪರಿಸ್ಥಿತಿ ನಂತರ ನಡೆದ ಜನಚಳವಳಿಗಳು ಆಗಿನ ಸರ್ಕಾರಕ್ಕೆ ಪಾಠ ಕಲಿಸಿದ್ದವು. ಆದರೆ, ಇಂದು ಚಳವಳಿಗಳನ್ನೇ ಇಲ್ಲವಾಗಿಸಲಾಗುತ್ತಿದೆ. ಸಂಸತ್ತಿನ ಶೇ.84ರಷ್ಟು ಸದಸ್ಯರು ಕೋಟ್ಯಾಧಿಪತಿಗಳಾಗಿರುವುದರಿಂದ ರೈತರು, ಬಡವರು, ಚಳವಳಿಗಳ ಬಗ್ಗೆ ಮಾತನಾಡುತ್ತಿಲ್ಲ ಎಂದು ಕಿಡಿಕಾರಿದರು.

ಹಿರಿಯ ವಕೀಲರು, ಸಮಾಜವಾದಿಯೂ ಆದ ಪ್ರೊ.ರವಿವರ್ಮ ಕುಮಾರ್ ದಿಕ್ಸೂಚಿ ಭಾಷಣ ಮಾಡಿ, ಭಾರತದ ಪ್ರಜಾತಂತ್ರದ ಆಧಾರವಾದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗವನ್ನು ಅಸ್ಥಿರಗೊಳಿಸಲಾಗಿದೆ. ಕಳೆದ ಹತ್ತು ವರ್ಷದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತಿನ ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲ. ಮಣಿಪುರ ಸಂಘರ್ಷದ ಬಗ್ಗೆ ಒಂದು ಮಾತೂ ಆಡಿಲ್ಲ. ಸರ್ಕಾರವನ್ನು ಪ್ರಶ್ನಿಸುವ ವಿರೋಧ ಪಕ್ಷಗಳ ಸದಸ್ಯರನ್ನು ಅನರ್ಹಗೊಳಿಸಲಾಗುತ್ತಿದೆ. ಜಾರಿ ನಿರ್ದೇಶನಾಲಯದ ಮೂಲಕ ಮಾನವ ಹಕ್ಕು ಸಂಘಟನೆಗಳ ಕತ್ತು ಹಿಸುಕಲಾಗಿದೆ. ಸಂಸತ್, ರಾಮಮಂದಿರ ಉದ್ಘಾಟನೆಗೆ ಕಾರ್ಯಾಂಗದ ಮುಖ್ಯಸ್ಥರಾದ ರಾಷ್ಟ್ರಪತಿ ದ್ರೌಪತಿ ಮುರ್ಮು ಅವರನ್ನು ಆಹ್ವಾನಿಸದೇ ಅವಮಾನಿಸಲಾಗಿದೆ. ಲೋಕಸೇವಾ ಆಯೋಗವನ್ನು ಕಡೆಗಣಿಸಿ ಸರ್ಕಾರದ ಉನ್ನತ ಹುದ್ದೆಗಳಲ್ಲಿ ಖಾಸಗಿ ವಲಯದ ವ್ಯಕ್ತಿಗಳನ್ನು ನೇಮಕ ಮಾಡಲಾಗುತ್ತಿದೆ. ಸರ್ಕಾರ ಹಾಗೂ ಪಕ್ಷದ ಪರ ತೀರ್ಪು ನೀಡುವ ನ್ಯಾಯಾಧೀಶರು ನಿವೃತ್ತಿಯ ನಂತರ ರಾಜ್ಯಪಾಲರಾಗುವ, ಅರ್ಜಿ ಹಾಕಿದವರಿಗೆ ಜ್ಞಾನಪೀಠ ನೀಡುವ ಕಾಲಘಟ್ಟ ಇದಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಯಕ್ರಮದಲ್ಲಿ ರಂಗಕರ್ಮಿ ಸಿ.ಬಸವಲಿಂಗಯ್ಯ, ನವದೆಹಲಿಯ ಸಾಮಾಜಿಕ ಕಾರ್ಯಕರ್ತ, ಬಾಬು ಜಗಜೀವನ್ ರಾಮ್ ಅವರ ಮೊಮ್ಮಗ ಅನ್ಮೋಲ್ ಅವಿಜಿತ್, ಸವಿತಾ ಮಲ್ಲೇಶ್, ಉಗ್ರನರಸಿಂಹೇಗೌಡ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಕಲಾಮಂದಿರದಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟ 'ಪ.ಮಲ್ಲೇಶ್–90' ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ದೆಹಲಿಯ ಸಾಮಾಜಿಕ ಹೋರಾಟಗಾರರಾದ ತೀಸ್ತಾ ಸೆಟಲ್‌ವಾಡ್ ಚಾಲನೆ ನೀಡಿದರು.

ರೈತರು, ನಿರುದ್ಯೋಗಿ ಯುವಕರ ಹೋರಾಟ ಮತ್ತಷ್ಟು ಪ್ರಬಲಗೊಳ್ಳಲಿದೆ

ಬಹುಭಾಷಾ ನಟ ಪ್ರಕಾಶ್ ರಾಜ್ ಆತಂಕ



ಮೈಸೂರು, ಮಾ.1(ಎಂಟಿವೈ)– ಕೇಂದ್ರ ಸರ್ಕಾರ ನಿರ್ಲಕ್ಷ್ಯದ ಧೋರಣೆಯಿಂದ ಭವಿಷ್ಯದಲ್ಲಿ ರೈತರು ಮತ್ತು ನಿರುದ್ಯೋಗಿ ಯುವಕರ ಹೋರಾಟ ಮತ್ತಷ್ಟು ಪ್ರಬಲವಾಗುವ ಸಾಧ್ಯತೆ ಇದೆ ಎಂದು ಬಹುಭಾಷ ನಟ ಪ್ರಕಾಶ್ ರಾಜ್ ಎಚ್ಚರಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ನಡೆದ ಪ.ಮಲ್ಲೇಶ್–90 ವಿಚಾರ ಸಂಕಿರಣದಲ್ಲಿ ಜನತಂತ್ರದ ಆಶಯಗಳು ಕುರಿತು ಮಾತನಾಡಿದ ಅವರು, ದೇಶದಲ್ಲಿ ನಿರುದ್ಯೋಗಿ ಯುವಜನತೆ ಹಾಗೂ ರೈತರು ರೋಸಿ ಹೋಗಿದ್ದಾರೆ. ಪ್ರತಿಭಟನೆ ಮೂಲಕ ತಮ್ಮ ಅಸಮಾದಾನ ವ್ಯಕ್ತಪಡಿಸುತ್ತಿದ್ದಾರೆ. ದಾರುಣ ದಿನಗಳನ್ನು ಎದುರಿಸಬೇಕಾಗುತ್ತದೆ. ಶಾಂತಿ ಇರುವುದಿಲ್ಲ. ಪ್ರಜಾತಂತ್ರ, ಜನತಂತ್ರ ವ್ಯವಸ್ಥೆಯನ್ನು ಹಸನುಗೊಳಿಸಲಿಲ್ಲ. ನಮ್ಮ ಮಕ್ಕಳಿಗೆ ಭ್ರಾತೃತ್ವ ಭಾವನೆ ಬೆಳೆಸಲಿಲ್ಲ. ಸುತ್ತಲಿನ ಆಗುಹೋಗುಗಳ ಬಗ್ಗೆ ಹೇಳಿಕೊಡಲಿಲ್ಲ. ಈ ತಪ್ಪುಗಳಿಂದಾಗಿಯೇ ಈ ಸಮಸ್ಯೆಗಳು ಉದ್ಭವಾಗಿವೆ. ಯಾವ ನಾಯಕರು ನಮನ್ನು ಕಾಪಾಡುವುದಿಲ್ಲ. ಒಬ್ಬರಿಗೆ ಎದುರಾಗಿ ಮತ್ತೊಬ್ಬರನ್ನು ಹಿಡಿದುಕೊಂಡಿದ್ದೇವೆ. ಎಲ್ಲ ಪಕ್ಷಗಳ ರಾಜಕಾರಣಿಗಳು ಒಂದೆ. ಇವರನ್ನು ಎದೆಗುಂದದೆ ಪ್ರಶ್ನೆ ಮಾಡಬೇಕಿದೆ. ಇಷ್ಟು ವರ್ಷಗಳ ತಲ್ಲಣಗಳಿಗೆ ನಾವೇ ಕಾರಣರು ಎಂದರು.

ದೇವಾಲಯ ಕಟ್ಟುವ, ದೇಗುಲ ಉದ್ಘಾಟನೆಗೆ ಉಪವಾಸವಿರುವ ನಾಯಕ, ರೈತರ ಹೋರಾಟ ತಡೆಯುವ, ನಿರುದ್ಯೋಗಿ ಯುವಕರ ಮೇಲೆ ಲಾಠಿ ಚಾರ್ಜ್ ಮಾಡುವ, ಹೇಳಿದ್ದನ್ನು ತಿರುಚುವ ಮಾಧ್ಯಮಗಳು ಇವತ್ತಿನ ನಮ್ಮ ತಲ್ಲಣಗಳಾಗಿವೆ. ಕಾಮಾಲೆ ಕಣ್ಣಿಗೆ ಕಂಡಿದ್ದೆಲ್ಲ ಹಳದಿ. ಇವತ್ತು ಕಾಣುವುದೆಲ್ಲ ಕೇಸರಿ. ಜನ ಸಾಮಾನ್ಯರನ್ನು ಫುಟ್‌ಬಾಲ್‌ನಂತೆ ಒದೆಯುತ್ತಿದ್ದಾರೆ. ಯುವಕರು ಪಾರ್ಲಿಮೆಂಟ್‌ನಲ್ಲಿ ಸ್ಮೋಕ್ ಬಾಂಬ್ ಸಿಡಿಸುವ ದುಸ್ಸಾಹಸ ಯಾಕೇ ಮಾಡಿದರು. ಈ ಬಗ್ಗೆ ಚರ್ಚಿಸದೇ ಸ್ಮೋಕ್ ಬಾಂಬ್ ಎಲ್ಲಿಂದ ತಂದರು ಎಂಬ ಚರ್ಚೆ ನಡೆಸುತ್ತಿವೆ. ಇದು ನಮ್ಮ ಇವತ್ತಿನ ತಲ್ಲಣವಾಗಿದೆ. ವರ್ತಮಾನದ ಗಾಯಗಳನ್ನು ಮರೆಯದೇ ನೆನಪಿಟ್ಟುಕೊಳ್ಳಬೇಕು ಎಂದು ಹೇಳಿದರು. ಸಾಹಿತಿ ಜಿ.ಪಿ. ಬಸವರಾಜು ನಿರೂಪಿಸಿದರು. ರಂಗಕರ್ಮಿ ಹೆಚ್.ಜನಾರ್ಧನ್ ಮತ್ತು ತಂಡದವರು ಕ್ರಾಂತಿಗೀತೆಗಳನ್ನು ಹಾಡಿದರು.

ಕಡಿಮೆ ಬೆಲೆಗೆ ಗೃಹೋಪಯೋಗಿ, ಚಿನ್ನ, ಸೀರೆ ಕೊಡುವುದಾಗಿ ವಂಚನೆ: ಆರೋಪಿ ಬಂಧನ

ಮೈಸೂರು, ಮಾ.1(ಎಂಕೆ)– ಹೋಂ ಪ್ರಾಡಕ್ಟ್ ಹಾಗೂ ಟ್ರಸ್ಟ್ ಹೆಸರಿನಲ್ಲಿ ಚಿನ್ನ, ಸೀರೆ, ಆಹಾರ ಪದಾರ್ಥಗಳನ್ನು ಕಡಿಮೆ ಬೆಲೆಗೆ ಕೊಡುತ್ತೇನೆಂದು ನಂಬಿಸಿ ಲಕ್ಷಾಂತರ ರೂ. ವಂಚಿಸಿದ್ದ ಆರೋಪಿಯನ್ನು ನಜರ್‌ಬಾದ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ನಗರದ ಇಟ್ಟಿಗೆಗೂಡಿನ ನಿವಾಸಿ ಸಂಜಯ್ ಅಲಿಯಾಸ್ ಬದ್ರಿ(34) ಬಂಧಿತ ಆರೋಪಿ. ಸತ್ಯಂ ಹೋಂ ಪ್ರಾಡಕ್ಟ್ ಹಾಗೂ ಪ್ರತಿಷ್ಠಾಪನಾ ಚಾರಿಟಬಲ್ ಟ್ರಸ್ಟ್ ಹೆಸರಿನಲ್ಲಿ ಕಡಿಮೆ ಹಣಕ್ಕೆ ಚಿನ್ನ, ಸೀರೆ, ಟಿವಿ, ದಿನಸಿ ಆಹಾರ ಪದಾರ್ಥಗಳನ್ನು ಕೊಡುತ್ತೇನೆಂದು ಹಲವರಿಂದ ಸುಮಾರು 30.33 ಲಕ್ಷಕ್ಕೂ ಹೆಚ್ಚು ಹಣ ಪಡೆದು ವಂಚಿಸಿರುವ ಆರೋಪದಡಿ ನಜರ್‌ಬಾದ್ ಪೊಲೀಸರು ಆರೋಪಿ ಸಂಜಯ್‌ನನ್ನು ಬಂಧಿಸಿ, ನ್ಯಾಯಾಲಯದ ಅನುಮತಿ ಮೇರೆಗೆ ಹೆಚ್ಚಿನ ವಿಚಾರಣೆಗೆ ಒಳಪಡಿಸಿದ್ದಾರೆ.



ಆರಂಭದಲ್ಲಿ ವಂಚನೆಗೊಳಗಾದ ಒಬ್ಬರು ದೂರು ದಾಖಲಿಸಿದ್ದರು. ಆರೋಪಿಯ ಬಂಧನವಾದ ಬಳಿಕ ಹಲವರು ಸಂಜಯ್‌ನಿಂದ ತಮಗೆ ವಂಚನೆಯಾಗಿದೆ ಎಂದು ಕರೆ ಮಾಡಿ ಮಾಹಿತಿ ಪಡೆದ ನಂತರ ಠಾಣೆಗೆ ಬಂದು ಹೇಳಿಕೆ ನೀಡುತ್ತಿದ್ದಾರೆ. ಇದುವರೆಗೂ ಹಲವರು ಬಂದಿದ್ದು, ಸುಮಾರು 30.33 ಲಕ್ಷಕ್ಕೂ ಹೆಚ್ಚು ಹಣ ಪಡೆದು ವಂಚಿಸಿದ್ದಾನೆ ಎಂಬ ಮಾಹಿತಿ ಇದೆ. ಆತನಿಂದ ವಂಚನೆಗೊಳದವರ ಸಂಖ್ಯೆ ಇನ್ನಷ್ಟು ಜಾಸ್ತಿಯಾಗುವ ಸಾಧ್ಯತೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ 'ಗೆಡ್ಡೆ–ಗೆಣಸು ಮೇಳ'ಕ್ಕೆ ಚಾಲನೆ

ಮೈಸೂರು, ಮಾ.1(ಎಂಕೆ)– ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗದ ವತಿಯಿಂದ ಹಮ್ಮಿಕೊಂಡಿರುವ ಮೂರು ದಿನಗಳ 'ಗೆಡ್ಡೆ–ಗೆಣಸು ಮೇಳ'ಕ್ಕೆ ಶುಕ್ರವಾರ ಚಾಲನೆ ದೊರೆಯಿತು.

ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನ ಮುಖ್ಯ ದ್ವಾರದಲ್ಲಿ ಅಲಂಕಾರಿಕವಾಗಿ ಜೋಡಿಸಿದ್ದ ವಿವಿಧ ಬಗೆಯ ಗೆಡ್ಡೆ–ಗೆಣಸುಗಳನ್ನು ಪ್ರದರ್ಶಿಸುವ ಮೂಲಕ ಡೆಲ್ಲಿ ಪಬ್ಲಿಕ್ ಸ್ಕೂಲ್‌ನ ಪ್ರಾಂಶುಪಾಲರಾದ ಮಂಜು ಶರ್ಮಾ ಮೇಳಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಗೆಡ್ಡೆ–ಗೆಣಸು ಪೌಷ್ಟಿಕ ಆಹಾರ ಪದಾರ್ಥವಾಗಿದ್ದು, ನಗರವಾಸಿಗಳು ಗೆಡ್ಡೆ–ಗೆಣಸುಗಳ ಮಾಹಿತಿ ಪಡೆದುಕೊಳ್ಳುವುದರ ಜೊತೆಗೆ ಖರೀದಿ ಮಾಡಲು ಉತ್ತಮ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗದ ಕೃಷ್ಣ ಪ್ರಸಾದ್ ಮಾತನಾಡಿ, ನೈಸರ್ಗಿಕವಾಗಿ ಬೆಳೆಯುವ ಗೆಡ್ಡೆ ಗೆಣಸು ಪೋಷಕಾಂಶದ ಕಣಜವಾಗಿದ್ದು, ಯಾವುದೇ ಆತಂಕವಿಲ್ಲದೆ ಸವಿಯಬಹುದು. ನಮ್ಮ ದಿನನಿತ್ಯದ ಊಟದಲ್ಲಿ ಗೆಡ್ಡೆ ಗೆಣಸನ್ನು ಬಳಸಲು ಮತ್ತು ಯುವ ಜನತೆಗೆ ಇಷ್ಟವಾಗುವ ಅಡುಗೆಗಳನ್ನು ಪರಿಚಯಿಸುವ ದೃಷ್ಟಿಯಿಂದ ಮೇಳ ಏರ್ಪಡಿಸಲಾಗಿದೆ. ಪರ್ಪಲ್ ಯಾಮ್, ಸಿಹಿ ಗೆಣಸು, ಕೆಸು, ಸುವರ್ಣ ಗೆಡ್ಡೆ ಬಳ್ಳಿ ಆಲೂಗೆಡ್ಡೆ, ಕೂವೆ ಗೆಡ್ಡೆ, ಬಣ್ಣದ ಸಿಹಿ ಗೆಣಸು, ಹಸಿರು ಮತ್ತು ಕಪ್ಪು ಅರಿಶಿಣ, ಮಾವಿನ ಶುಂಠಿ ಮೊದಲಾದ ಗೆಡ್ಡೆ ಗೆಣಸುಗಳು ಲಭ್ಯವಿವೆ ಎಂದರು. ಮೇಳದಲ್ಲಿ 10ಕ್ಕೂ ಹೆಚ್ಚಿನ ಮಳಿಗೆಗಳು ಗೆಡ್ಡೆ–ಗೆಣಸಿನ ಮೌಲ್ಯವರ್ಧಿತ ಪದಾರ್ಥ, ದೇಸಿ ಅಕ್ಕಿ, ಸಿರಿಧಾನ್ಯಗಳು, ಜವಾರಿ ಬೀಜಗಳು, ಗಾಣದ ಎಣ್ಣೆ, ಮತ್ತು ಸಾವಯವ ಪದಾರ್ಥಗಳನ್ನು ಇಡಲಾಗಿದೆ. ಹಾಗೆಯೇ ಆಹಾರ ಪ್ರಿಯರಿಗೆ ಜೋಳದ ರೊಟ್ಟಿ ಮತ್ತು ಗೆಣಸಿನ ಪಲ್ಯ, ರಾಗಿರೊಟ್ಟಿ– ಹುಚ್ಚೆಳ್ಳು ಚಟ್ನಿ, ದೇಸಿ ಕ್ಯಾರೆಟ್ ಹಲ್ವ, ಬೆಲ್ಲದ ಐಸ್ಕ್ರೀಂ ಸೇರಿದಂತೆ ಬಗೆಬಗೆಯ ಪಾನೀಯಗಳು ದೊರೆಯಲಿವೆ ಎಂದು ಮಾಹಿತಿ ನೀಡಿದರು.

ಅಡುಗೆ ಪ್ರದರ್ಶನ: ಬರಹಗಾರ್ತಿ ಮತ್ತು ಆಹಾರ ತಜ್ಞೆ ಶ್ರೀಮತಿ ರತ್ನಾ ರಾಜಯ್ಯ, ನಾಳೆ(ಮಾ.2) ಗೆಡ್ಡೆ–ಗೆಣಸುಗಳಿಂದ ತಯಾರಿಸಬಹುದಾದ ಅಡುಗೆಗಳ ಪ್ರದರ್ಶನ ಮತ್ತು ಪರಿಚಯ ಮಾಡಿಕೊಡಲಿದ್ದಾರೆ. ಡೆಲ್ಲಿ ಪಬ್ಲಿಕ್ ಸ್ಕೂಲ್‌ನ ಹಿರಿಯ ಶಿಕ್ಷಕಿಯರಾದ ಅಮೀರಾ ಸುಬೋಹಿ, ನಂದಿತಾ ಫಿಲಿಪ್, ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗದ ಸೀಮಾ, ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನ ಮೋಹನ್‌ಕುಮಾರ್, ಮನು, ಜುನೈದ್, ಮಧು, ಮಿಥುನ್, ಅಮೃತ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಮೂರು ದಿನಗಳ 'ಗೆಡ್ಡೆ–ಗೆಣಸು ಮೇಳ'ಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಮೂರನೇ ಪುಟದಿಂದ

ಬಾಂಬ್ ಸ್ಫೋಟ

ಬರುತ್ತಿದ್ದರು. ಕೆಲ ನಿಮಿಷಗಳ ನಂತರ ಹೋಟೆಲ್ ಸಿಬ್ಬಂದಿ ಮತ್ತು ಸಾರ್ವಜನಿಕರು ಗಾಯಾಳುಗಳನ್ನು ಆಸ್ಪತ್ರೆಗೆ ರವಾನಿಸಿದ್ದಾರೆ. ಬಾಂಬ್ ಸ್ಫೋಟದಲ್ಲಿ ಸ್ವರ್ಣಾಂಬ(49), ಮೋಹನ್(41), ನಾಗಶ್ರೀ(35), ಮೋಮಿ(30), ಬಲರಾಮ ಕೃಷ್ಣನ್(31) ಫಾರೂಕ್ (19), ದೀಪಾಂಶು(23), ನವ್ಯ(25) ಮತ್ತು ಶ್ರೀನಿವಾಸ್(67) ಗಾಯಗೊಂಡ ವರಾಗಿದ್ದು, ಗಾಯಾಳುಗಳನ್ನು ಮಣಿಪಾಲ್, ವೈದೇಹಿ ಮತ್ತು ಬ್ರೂಕ್ ಫೀಲ್ಡ್ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಬ್ರೂಕ್ ಫೀಲ್ಡ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸ್ವರ್ಣಾಂಬ ಅವರಿಗೆ ಶೇ.40ರಷ್ಟು ಸುಟ್ಟಗಾಯಗಳಾಗಿವೆ ಎಂದು ಆಸ್ಪತ್ರೆಯ ವೈದ್ಯ ಡಾ. ಪ್ರದೀಪ್ ಕುಮಾರ್ ತಿಳಿಸಿದ್ದಾರೆ. ಸ್ವರ್ಣಾಂಬ ಅವರ ಸ್ಥಿತಿ ಚಿಂತಾಜನಕವಾಗಿದೆ. ಇನ್ನುಳಿದವರು ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಕುಂದಲಹಳ್ಳಿ ಬಳಿಯ ಬ್ರೂಕ್ ಫೀಲ್ಡ್‌ನಲ್ಲಿರುವ ರಾಮೇಶ್ವರಂ ಕೆಫೆ ಬೆಳಗ್ಗೆಯಿಂದ ರಾತ್ರಿ ಸುಮಾರು 2 ಗಂಟೆವರೆವಿಗೂ ಗ್ರಾಹಕರಿಂದ ತುಂಬಿ ತುಳುಕುತ್ತಿರುತ್ತದೆ. ಈ ಕೆಫೆಗೆ ಹೆಚ್ಚಿನ ಸಂಖ್ಯೆಯಲ್ಲಿ ಟೆಕ್ಕಿಗಳು ಆಗಮಿಸುತ್ತಾರೆ. ಶುಕ್ರವಾರ ಮತ್ತು ಶನಿವಾರ ಗ್ರಾಹಕರ ದಟ್ಟಣೆ ಹೆಚ್ಚಾಗಿರುತ್ತದೆ. ಇಂದು ಮಧ್ಯಾಹ್ನ 12.55ರಲ್ಲಿ ಹೋಟೆಲ್‌ನ ಕಿಚನ್ ಬಳಿ ಇರುವ ವಾಶ್ ಬೇಸಿನ್ ಸಮೀಪ ಇರಿಸಲಾಗಿದ್ದ ಬ್ಯಾಗ್‌ನಿಂದ ಹಠಾತ್ತನೆ ಭಾರೀ ಶಬ್ದದೊಂದಿಗೆ ಬಾಂಬ್ ಸ್ಫೋಟಗೊಂಡಿದೆ. ಮೊದಲಿಗೆ ಸಾರ್ವಜನಿಕರು ಸಿಲಿಂಡರ್ ಸ್ಫೋಟಗೊಂಡಿದೆ ಎಂದು ಭಾವಿಸಿ ಅಗ್ನಿಶಾಮಕ ದಳ ಮತ್ತು ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದರು. ಈ ಹಿನ್ನೆಲೆಯಲ್ಲಿ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಹೆಚ್‌ಎಎಲ್ ಠಾಣೆಯ ಪೊಲೀಸರು ಸಂಭವಿಸಿರುವುದು ಸಿಲಿಂಡರ್ ಸ್ಫೋಟವಲ್ಲ ಎಂಬುದನ್ನು ಗ್ರಹಿಸಿ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ತಕ್ಷಣವೇ ಕೆಫೆ ಬಳಿಗೆ ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನು ರವಾನಿಸಲಾಯಿತು. ಸಾರ್ವಜನಿಕರು ಕೆಫೆಯ ಒಳಗೆ ಹೋಗದಂತೆ ಪೊಲೀಸರು ನಿರ್ಬಂಧಿಸಿದರು. ಘಟನಾ ಸ್ಥಳಕ್ಕೆ ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ, ಬಾಂಬ್ ನಿಷ್ಕ್ರಿಯ ದಳ, ಬೆರಳಚ್ಚು ತಜ್ಞರು, ಶ್ವಾನ ದಳವನ್ನು ಕರೆಸಲಾಯಿತು. ಸ್ಫೋಟ ಸಂಭವಿಸಿದ ಸ್ಥಳದಲ್ಲಿ ಬ್ಯಾಗ್, 'ಮೈಕ್ರೋ ಚಿಪ್' ಸಂಸ್ಥೆಯ ಐಡಿ ಕಾರ್ಡ್, ನಟ್‌ಗಳು, ಬ್ಯಾಟರಿ, ಟೈಮರ್ ದೊರೆತಿದೆ. ಇವುಗಳನ್ನೆಲ್ಲಾ ಸಂಗ್ರಹಿಸಿರುವ ಎಫ್‌ಎಸ್‌ಎಲ್ ಅಧಿಕಾರಿಗಳು ವೈಜ್ಞಾನಿಕ ತನಿಖೆ ಮುಂದುವರೆಸಿದ್ದಾರೆ. ಘಟನಾ ಸ್ಥಳಕ್ಕೆ ಬೆಂಗಳೂರು ನಗರ ಪೊಲೀಸ್ ಆಯುಕ್ತ ದಯಾನಂದ, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್ ಸೇರಿದಂತೆ ಹಿರಿಯ ಅಧಿಕಾರಿಗಳು ಭೇಟಿ ನೀಡಿದ್ದರು. ಸದ್ಯಕ್ಕೆ ಬ್ರೂಕ್ ಫೀಲ್ಡ್‌ನ ರಾಮೇಶ್ವರಂ ಕೆಫೆ ಪೊಲೀಸರ ವಶದಲ್ಲಿದೆ.

ದೃಶ್ಯಾವಳಿಗಳು ಸಿಸಿ ಕ್ಯಾಮರಾದಲ್ಲಿ ಸೆರೆ

ಎಂಬುದು ಪೊಲೀಸರ ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ರಾಮೇಶ್ವರಂ ಕೆಫೆ ಮಾತ್ರವಲ್ಲದೆ, ಇದರ ಸುತ್ತಮುತ್ತ ಎರಡರಿಂದ ಮೂರು ಕಿ.ಮೀ. ವ್ಯಾಪ್ತಿಯಲ್ಲಿ ಸಾವಿರಾರು ಸಿಸಿ ಕ್ಯಾಮರಾಗಳಿದ್ದು, ವೈಜ್ಞಾನಿಕ ತನಿಖೆಯನ್ನು ತ್ವರಿತ ಗತಿಯಲ್ಲಿ ಆರಂಭಿಸಿದ ಪೊಲೀಸರು, ಕಮಾಂಡಿಂಗ್ ಸೆಂಟರ್‌ನಿಂದ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಪರಿಶೀಲಿಸಲಾಗಿ ಬಾಂಬರ್ ಎಂದು ಶಂಕಿಸಲಾಗಿರುವ ವ್ಯಕ್ತಿ ಬಸ್‌ನಲ್ಲಿ ಬಂದಿಳಿದು ನಂತರ ರಾಮೇಶ್ವರಂ ಕೆಫೆ ಪ್ರವೇಶಿಸಿದ್ದಾನೆ ಎಂಬುದು ಗೊತ್ತಾಗಿದೆ. ಈತ ಕೆಫೆಯಿಂದ ನಿರ್ಗಮಿಸಿದ ನಂತರ ಯಾವುದೋ ವಾಹನದಲ್ಲಿ ತೆರಳಿದ್ದಾನೆ ಎಂಬುದು ಕೆಲವು ಮೂಲಗಳು ತಿಳಿಸುತ್ತಿವೆಯಾದರೂ, ಅದು ಖಚಿತವಾಗಿಲ್ಲ. ಆದರೆ ದುಷ್ಕರ್ಮಿಯ ಸುಳಿವನ್ನು ಪೊಲೀಸರು ಪತ್ತೆ ಹಚ್ಚಿದ್ದು, ಸಿಸಿ ಕ್ಯಾಮರಾ ದೃಶ್ಯಾವಳಿಗಳ ಮೂಲಕ ಆತ ಕೆಫೆಯಿಂದ ಎಲ್ಲಿಗೆ ಹೋಗಿದ್ದಾನೆ ಎಂಬುದರ ಬಗ್ಗೆ ಖಚಿತವಾಗಿ ಪತ್ತೆ ಮಾಡಿದ್ದಾರೆ ಎಂದು ಹೇಳಲಾಗಿದೆ.

ಇದಕ್ಕೆ ಪೂರಕವೆಂಬಂತೆ ಇಂದು ರಾತ್ರಿ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರೊಂದಿಗೆ ರಾಮೇಶ್ವರಂ ಕೆಫೆಗೆ ಭೇಟಿ ನೀಡಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಆರೋಪಿ ಯಾರು ಎಂಬುದು ಬಹುತೇಕ ಗೊತ್ತಾಗಿದೆ. ಕೆಲವೇ ಗಂಟೆಗಳಲ್ಲಿ ಈತ ಸೆರೆ ಸಿಕ್ಕುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ. ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಂಬರ್ ಪತ್ತೆ ಹಾಗೂ ತನಿಖೆಗಾಗಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್ ನಿರ್ದೇಶನದ ಮೇರೆಗೆ ಬೆಂಗಳೂರು ನಗರ ನಗರ ಪೊಲೀಸ್ ಆಯುಕ್ತ ದಯಾನಂದ ಅವರು 8 ತಂಡಗಳನ್ನು ರಚಿಸಿದ್ದಾರೆ. ಈ ತಂಡಗಳು ತಾಂತ್ರಿಕತೆಯನ್ನು ಬಳಸಿಕೊಂಡು ವೈಜ್ಞಾನಿಕ ತನಿಖೆಯನ್ನು ಆರಂಭಿಸಿವೆ. ಅದೇ ವೇಳೆ ಆರೋಪಿ ಬಂಧನಕ್ಕಾಗಿ ಕಾರ್ಯಾಚರಣೆ ತಂಡವೂ ಕೂಡ ಕಾರ್ಯ ನಿರ್ವಹಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

> "ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ನಡೆದಿರುವ ಸ್ಫೋಟದ ತನಿಖೆ ತೀವ್ರ ಗತಿಯಲ್ಲಿ ನಡೆಯುತ್ತಿದೆ. ತಪ್ಪಿತಸ್ಥರ ವಿರುದ್ಧ ಖಚಿತವಾಗಿ ಕಠಿಣ ಕ್ರಮ ಕೈಗೊಳ್ಳಲಾಗುವುದು. ಪ್ರಾಥಮಿಕ ತನಿಖೆಯಲ್ಲಿ ಸಣ್ಣ ಪ್ರಮಾಣದ ಸುಧಾರಿತ ಸ್ಫೋಟವಾಗಿದೆ ಎಂದು ತಿಳಿದು ಬಂದಿದೆ. ಪೂರ್ಣ ತನಿಖಾ ವರದಿ ಬಂದ
>
> 
>
> ನಂತರ ಇನ್ನಷ್ಟು ಮಾಹಿತಿ ಸಿಗಲಿದೆ. ಕ್ಯಾಷಿಯರ್ ಬಳಿ ಟೋಕನ್ ಪಡೆದು ತಿಂಡಿ ತಿಂದಿರುವ ವ್ಯಕ್ತಿ ಬ್ಯಾಗ್ ಬಿಟ್ಟು ಬಂದಿದ್ದಾನೆ ಎಂಬ ಮಾಹಿತಿ ತಿಳಿದು ಬಂದಿದೆ. ಘಟನೆಯಲ್ಲಿ 9 ಮಂದಿಗೆ ಗಾಯಗಳಾಗಿದ್ದು, ಅದೃಷ್ಟವಶಾತ್ ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸಿಸಿ ಕ್ಯಾಮರಾ ಪರಿಶೀಲಿಸಲಾಗುತ್ತಿದೆ. ರಾಜ್ಯದಲ್ಲಿ ಇಂತಹ ಘಟನೆ ನಡೆಯಬಾರದಿತ್ತು. ಮಂಗಳೂರಿನಲ್ಲಿ ಆಗಿದ್ದು ಬಿಟ್ಟರೆ ಪುನಃ ಇಂತಹ ಘಟನೆ ಸಂಭವಿಸಿದೆ. ಇದನ್ನು ಯಾರು ಮಾಡಿದ್ದಾರೆ ಎಂಬುದನ್ನು ಪತ್ತೆ ಹಚ್ಚಿ, ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ವಿರೋಧ ಪಕ್ಷಗಳು ಇಂತಹ ವಿಷಯದಲ್ಲಿ ರಾಜಕೀಯ ಮಾಡಬಾರದು. ಎಲ್ಲರೂ ಸರ್ಕಾರದ ಜೊತೆ ಸಹಕರಿಸಬೇಕು.
>
> – ಎಕ್ಸ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪೋಸ್ಟ್

ರಾಮೇಶ್ವರಂ ಕೆಫೆಯೇ ಸ್ಫೋಟದ ಟಾರ್ಗೆಟ್ಟಾ...!?

ಪ್ರಾಣ ಹಾನಿಯಾಗದಂತೆ ಬಾಂಬ್‌ನ ತೀವ್ರತೆ ಕಡಿಮೆ ಇರುವಂತೆ ನೋಡಿಕೊಂಡಿದ್ದಾರೆ. ಇದು ರಾಮೇಶ್ವರಂ ಕೆಫೆ ಮಾಲೀಕರನ್ನು ಹೆದರಿಸುವ ಕುತಂತ್ರ ಇರಬಹುದೇ ಎಂಬ ಪ್ರಶ್ನೆಯೂ ಕೂಡ ಉದ್ಭವಿಸಿದೆ. ರಾಮೇಶ್ವರಂ ಕೆಫೆಯ ವ್ಯವಸ್ಥಾಪಕ ನಿರ್ದೇಶಕಿ ದಿವ್ಯಾ ಅವರು ಮಾಧ್ಯಮಗಳಿಗೆ ನೀಡಿರುವ ಹೇಳಿಕೆ ಹಲವಾರು ಅನುಮಾನಗಳಿಗೆ ಕಾರಣವಾಗಿದೆ. ಸದ್ಯ ಮುಂಬೈನಲ್ಲಿರುವ ದಿವ್ಯಾ ಅವರು ದೂರವಾಣಿ ಮೂಲಕ ಮಾಧ್ಯಮಗಳಿಗೆ ನೀಡಿದ ಹೇಳಿಕೆಯಲ್ಲಿ ಇಂದು ರಾಮೇಶ್ವರಂ ಕೆಫೆ ಬ್ರೂಕ್ ಫೀಲ್ಡ್ ಬ್ರಾಂಚ್‌ನಲ್ಲಿ ಮಧ್ಯಾಹ್ನ 12.55ಕ್ಕೆ ಸ್ಫೋಟವಾಗಿದೆ. ಅಪರಿಚಿತ ವ್ಯಕ್ತಿ ವಾಷ್ ಬೇಸಿನ್ ಬಳಿ ಇಟ್ಟು ಹೋಗಿದ್ದ ಬ್ಯಾಗ್‌ನಿಂದ ಸ್ಫೋಟ ಸಂಭವಿಸಿದೆ. ನಮ್ಮ ಕೆಫೆಯಲ್ಲಿ ಎಲ್ಲಾ ಸಿಸಿ ಕ್ಯಾಮರಾಗಳು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಪೊಲೀಸರ ತನಿಖೆಗೆ ಸಂಪೂರ್ಣವಾಗಿ ಸಹಕಾರ ನೀಡುತ್ತಿದ್ದೇವೆ. ಸ್ಫೋಟದಲ್ಲಿ ನಮ್ಮ ಸಿಬ್ಬಂದಿಯೂ ಸೇರಿ 9 ಮಂದಿ ಗಾಯಗೊಂಡಿದ್ದಾರೆ. ಅವರನ್ನೆಲ್ಲಾ ನಮ್ಮ ಸಿಬ್ಬಂದಿ ಸಾರ್ವಜನಿಕರ ಸಹಕಾರದೊಂದಿಗೆ ಆಸ್ಪತ್ರೆಗೆ ಸೇರಿಸಿದ್ದಾರೆ.

ನಮ್ಮ ಕೆಫೆಯಲ್ಲಿ ಬ್ಯಾಗ್‌ಗಳನ್ನು ಇಟ್ಟು ಹೋಗಿರುವ ಎರಡ್ಮೂರು ಘಟನೆಗಳು ನಡೆದಿವೆ. ರಾಜಾಜಿನಗರ ಬ್ರಾಂಚ್‌ನಲ್ಲಿ 2 ಬಾರಿ ಬ್ಯಾಗ್‌ಗಳನ್ನಿಟ್ಟು ಹೋಗಿದ್ದರು. ನಾವು ಅವುಗಳನ್ನು ಪ್ರತ್ಯೇಕವಾಗಿ ಬಾಕ್ಸ್‌ನಲ್ಲಿಟ್ಟು ಪೊಲೀಸರಿಗೊಪ್ಪಿಸಿದ್ದೇವೆ. ಒಮ್ಮೆ ಬ್ಯಾಗ್ ಪರಿಶೀಲಿಸಿದಾಗ ಅದರಲ್ಲಿ ಮಡಿಕೆ ಇನ್ನಿತರ ವಸ್ತುಗಳಿದ್ದವು. ಅದನ್ನು ಹೊರತುಪಡಿಸಿ ಬೇರೆ ಬ್ಯಾಗ್‌ಗಳನ್ನು ನಾವು ಪರಿಶೀಲಿಸಿಲ್ಲ. ಅವುಗಳನ್ನು ಪೊಲೀಸರಿಗೆ ಕೊಟ್ಟಿದ್ದೇವೆ. ಆ ಬ್ಯಾಗ್‌ಗಳಲ್ಲಿ ಏನಿತ್ತು ಎಂಬುದು ಕೂಡ ನಮಗೆ ಗೊತ್ತಿಲ್ಲ. ಈಗ ನಮ್ಮ ಕೆಫೆಯಲ್ಲಿ ಸ್ಫೋಟ ಸಂಭವಿಸಿದೆ. ಈ ಸ್ಫೋಟಕ್ಕೂ ಹಿಂದೆ ಸಿಕ್ಕಿದ್ದ ಬ್ಯಾಗ್‌ಗಳಿಗೂ ಸಂಬಂಧವಿದೆಯೇ ಎಂಬುದು ನಮಗೆ ಗೊತ್ತಿಲ್ಲ. ಪೊಲೀಸರ ತನಿಖೆಯಿಂದ ಗೊತ್ತಾಗಬೇಕಾಗಿದೆ. ನಾವಂತೂ ಯಾರು ಏನೇ ಹೇಳಲಿ ಯಾವುದಕ್ಕೂ ತಲೆ ಕೆಡಿಸಿಕೊಳ್ಳದೇ ನಮ್ಮ ವ್ಯಾಪಾರದತ್ತ ಸಂಪೂರ್ಣವಾಗಿ ಗಮನಹರಿಸಿದ್ದೇವೆ ಎಂದು ದಿವ್ಯಾ ತಿಳಿಸಿದ್ದಾರೆ. ರಾಮೇಶ್ವರಂ ಕೆಫೆ ಬೆಂಗಳೂರಿನ ದಂಪತಿಯೇ ನಡೆಸುತ್ತಿರುವ ಪ್ರತಿಷ್ಠಿತ ಹೋಟೆಲ್ ಆಗಿದ್ದು, ತನ್ನ 21ನೇ ವರ್ಷದಲ್ಲೇ ಸಿಎ ಮುಗಿಸಿದ್ದ ದಿವ್ಯಾ ಹಾಗೂ ಹೋಟೆಲ್ ಉದ್ಯಮಿ ರಾಘವ್ ದಂಪತಿ 2021ರಲ್ಲಿ ಮಾಜಿ ರಾಷ್ಟ್ರಪತಿ ದಿವಂಗತ ಅಬ್ದುಲ್ ಕಲಾಂ ಅವರ ಮೇಲಿನ ಅಭಿಮಾನದಿಂದಾಗಿ ಅವರ ಹುಟ್ಟೂರಾದ 'ರಾಮೇಶ್ವರಂ' ಹೆಸರಿನಲ್ಲೇ ಹೋಟೆಲ್ ಆರಂಭಿಸಿದರು. ಇವರ ರಾಮೇಶ್ವರಂ ಕೆಫೆ ನಿರೀಕ್ಷೆಗೂ ಮೀರಿ ಖ್ಯಾತಿ ಗಳಿಸಿತು. ಬೆಂಗಳೂರಿನ ಹಲವೆಡೆ ಇರುವ ಎಲ್ಲಾ ರಾಮೇಶ್ವರಂ ಕೆಫೆಗಳಲ್ಲೂ ಗ್ರಾಹಕರು ಕಿಕ್ಕಿರಿದು ನೆರೆದಿರುತ್ತಾರೆ. ಕೆಲವು ಕೆಫೆಗಳು ರಾತ್ರಿ 2 ಗಂಟೆವರೆಗೂ ಕಾರ್ಯ ನಿರ್ವಹಿಸುತ್ತಿದ್ದು, ಬಹುತೇಕ ಟೆಕ್ಕಿಗಳು ಹಾಗೂ ಯುವ ಉದ್ಯಮಿಗಳೇ ಇವರ ಗ್ರಾಹಕರು. ರಾಮೇಶ್ವರಂ ಕೆಫೆ ಬೆಂಗಳೂರು ಮಾತ್ರವಲ್ಲದೇ ಚೆನ್ನೈ, ಹೈದರಾಬಾದ್, ದುಬೈ ಮುಂತಾದೆಡೆ ಹಲವಾರು ಶಾಖೆಗಳನ್ನು ಹೊಂದಿದೆ. ತಮ್ಮ ಹೋಟೆಲ್ ಉದ್ಯಮವನ್ನು ದೇಶಾದ್ಯಂತ ವಿಸ್ತರಿಸುವ ನಿಟ್ಟಿನಲ್ಲಿ ದಿವ್ಯಾ ಮತ್ತು ರಾಘವ್ ದಂಪತಿ ಚಿಂತನೆ ನಡೆಸಿದ್ದಾರೆ ಎಂದು ಹೇಳಲಾಗಿದೆ. ಹಲವಾರು ಬಾಲಿವುಡ್ ನಟ–ನಟಿಯರು ರಾಮೇಶ್ವರಂ ಕೆಫೆ ದೋಸೆಗೆ ಮಾರುಹೋಗಿದ್ದಾರೆ. ಇದರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ದೇಶದಲ್ಲಿ ಬಹುಬೇಗ ಪ್ರಖ್ಯಾತಿ ಹೊಂದಿರುವ ರಾಮೇಶ್ವರಂ ಕೆಫೆಗೆ ಉದ್ಯಮಿ ಅಂಬಾನಿ ಕುಟುಂಬದವರು ಪ್ರಮುಖ ಗ್ರಾಹಕರಾಗಿದ್ದು, ಅಂಬಾನಿ ಪುತ್ರನ ವಿವಾಹ ಕಾರ್ಯಕ್ರಮಕ್ಕೆ ಕ್ಯಾಟರಿಂಗ್ ಮಾಡುತ್ತಿರುವುದು ಕೂಡ ರಾಮೇಶ್ವರಂ ಕೆಫೆ ಎಂಬುದು ವಿಶೇಷ. ಈ ಹಿನ್ನೆಲೆಯಲ್ಲಿ ವ್ಯಾವಹಾರಿಕ ದ್ವೇಷದಿಂದ ಈ ದಂಪತಿಗೆ ಬೆದರಿಕೆ ಹಾಕುವ ಸಲುವಾಗಿ ಸಣ್ಣ ಪ್ರಮಾಣದ ಸುಧಾರಿತ ಬಾಂಬ್ ಅನ್ನು ರಾಮೇಶ್ವರಂ ಕೆಫೆಯಲ್ಲಿ ಸ್ಫೋಟಿಸಲಾಗಿದೆ ಎಂಬ ಪ್ರಶ್ನೆ ವ್ಯಾಪಕವಾಗಿ ಕೇಳಿಬರುತ್ತಿದೆ. ಆದರೆ, ದಿವ್ಯಾ ಅವರಂತೂ ನಮ್ಮಷ್ಟಕ್ಕೆ ನಾವು ನಮ್ಮ ವ್ಯವಹಾರದತ್ತ ಗಮನಹರಿಸಿದ್ದೇವೆ. ಪೊಲೀಸರ ತನಿಖೆಯಿಂದ ಎಲ್ಲವೂ ತಿಳಿಯಬೇಕಾಗಿದೆ. ಬಾಂಬ್ ಸ್ಫೋಟದ ಹಿನ್ನೆಲೆಯಲ್ಲಿ ನಮ್ಮ ಎಲ್ಲಾ ಬ್ರಾಂಚ್‌ಗಳಲ್ಲೂ ಭದ್ರತೆಯನ್ನು ಹೆಚ್ಚಿಸಿಕೊಳ್ಳುವಂತೆ ತಿಳಿಸಿದ್ದೇವೆ ಎಂದಿದ್ದಾರೆ.

ನಾಳೆ ಮೈಸೂರು ವಿಶ್ವವಿದ್ಯಾನಿಲಯದ 104ನೇ ಘಟಿಕೋತ್ಸವ

● 100 ಮಂದಿಗೆ ಪಿಹೆಚ್.ಡಿ ಸೇರಿ 32,249 ವಿದ್ಯಾರ್ಥಿಗಳಿಗೆ ನಾನಾ ಪದವಿ ಪ್ರದಾನ ● ಜಯದೇವ ಹೃದ್ರೋಗ ಸಂಸ್ಥೆ ನಿವೃತ್ತ ನಿರ್ದೇಶಕ ಡಾ. ಸಿ.ಎನ್.ಮಂಜುನಾಥ್‌ರಿಂದ ಘಟಿಕೋತ್ಸವ ಭಾಷಣ ● ಎಂಎಸ್ಸಿ ರಸಾಯನ ವಿಭಾಗದ ಹೆಚ್.ಎಸ್.ಮೇಘನಾಗೆ 15 ಚಿನ್ನದ ಪದಕ, 5 ನಗದು ಬಹುಮಾನ

ಮೈಸೂರು, ಮಾ.1(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ 104ನೇ ಘಟಿಕೋತ್ಸವ ಮಾ.3ರಂದು ಬೆಳಗ್ಗೆ 10 ಗಂಟೆಗೆ ಕ್ರಾಫರ್ಡ್ ಭವನದಲ್ಲಿ ನಡೆಯಲಿದ್ದು, 100 ಮಂದಿಗೆ ಪಿಹೆಚ್‌ಡಿ ಪದವಿ ಸೇರಿದಂತೆ 32,249 ಮಂದಿಗೆ ವಿವಿಧ ಪದವಿ ಪ್ರದಾನ ಮಾಡಲಾಗುತ್ತಿದೆ ಎಂದು ಮೈಸೂರು ವಿವಿ ಕುಲಪತಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದ್ದಾರೆ.



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಭಾಂಗಣದಲ್ಲಿ ಶುಕ್ರವಾರ ಮೈಸೂರು ವಿವಿ ಕುಲಪತಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಘಟಿಕೋತ್ಸವದ ಕುರಿತಂತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಚಿತ್ರದಲ್ಲಿ ಹಣಕಾಸು ಅಧಿಕಾರಿ ಕೆ.ಎಸ್.ರೇಖ, ಕುಲಸಚಿವರಾದ ಕೆ.ಎಂ.ಮಹದೇವನ್, ವಿ.ಆರ್.ಶೈಲಜಾ ಅವರನ್ನು ಕಾಣಬಹುದು.

ಕ್ರಾಫರ್ಡ್ ಭವನದ ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 104ನೇ ಘಟಿಕೋತ್ಸವದ ಅಧ್ಯಕ್ಷತೆಯನ್ನು ಕುಲಾಧಿಪತಿಗಳೂ ಆದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ವಹಿಸಲಿದ್ದಾರೆ. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವಿಶ್ರಾಂತ ನಿರ್ದೇಶಕ, ಪದ್ಮಶ್ರೀ ಡಾ.ಸಿ.ಎನ್. ಮಂಜುನಾಥ್ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಕುಲಪತಿ ಎನ್.ಕೆ.ಲೋಕನಾಥ್, ಕುಲಸಚಿವರಾದ ವಿ.ಆರ್.ಶೈಲಜಾ ಸೇರಿದಂತೆ ಇನ್ನಿತರರು ಉಪಸ್ಥಿತರಿರುತ್ತಾರೆ ಎಂದು ತಿಳಿಸಿದರು.

ಘಟಿಕೋತ್ಸವದಲ್ಲಿ ಈ ಬಾರಿ 100 ಮಂದಿ ಪಿಹೆಚ್‌ಡಿ ಪದವೀಧರರು, 6,144 ಮಂದಿಗೆ ಸ್ನಾತಕೋತ್ತರ ಪದವಿ, 26,009 ಪದವೀಧರರು ಸೇರಿದಂತೆ ಒಟ್ಟು 32,249 ವಿದ್ಯಾರ್ಥಿಗಳಿಗೆ ವಿವಿಧ ಪದವಿ ಪ್ರದಾನ ಮಾಡಲಾಗುತ್ತಿದೆ. ಪಿಹೆಚ್‌ಡಿ ಪದವಿ ಪಡೆಯುತ್ತಿರುವ 100 ಮಂದಿಯಲ್ಲಿ 55 ಪುರುಷರು, 45 ಮಹಿಳೆಯರಿದ್ದಾರೆ. ಸ್ನಾತಕೋತ್ತರ ಪದವಿ ವಿಭಾಗದಲ್ಲಿ 2105 ಪುರುಷರು, 4039 ಮಹಿಳೆಯರು, ಪದವಿ ವಿಭಾಗದಲ್ಲಿ 10099 ಪುರುಷರು, 15910 ಮಹಿಳೆಯರು ಒಳಗೊಂಡಿದ್ದಾರೆ. ಎಲ್ಲಾ ವಿಭಾಗಗಳಿಂದ ಪದವಿ ಪಡೆಯುತ್ತಿರುವ 32,249 ಮಂದಿಯಲ್ಲಿ 12,257 ಮಂದಿ ಪುರುಷರು ಹಾಗೂ 19,992 ಮಹಿಳೆಯರು ಪದವಿ ಪಡೆಯುತ್ತಿದ್ದಾರೆ. ಅಲ್ಲದೆ, 174 ಮಹಿಳೆಯರು ಸೇರಿದಂತೆ 252 ಅಭ್ಯರ್ಥಿಗಳು 436 ಪದಕ ಮತ್ತು 266 ನಗದು ಬಹುಮಾನವನ್ನು ತನ್ನದಾಗಿಸಿಕೊಂಡಿದ್ದಾರೆ ಎಂದು ವಿವರಿಸಿದರು.

ಚಿನ್ನದ ಪದಕ ವಿಜೇತರು: ಪ್ರತಿವರ್ಷದಂತೆ ಈ ಬಾರಿಯೂ ಹಲವು ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಅಂಕ ಸಾಧನೆ ಮಾಡಿದ್ದು, ಚಿನ್ನದ ಪದಕ ಹಾಗೂ ನಗದು ಬಹುಮಾನಕ್ಕೆ ಭಾಜನರಾಗಿದ್ದಾರೆ. ಎಂಎಸ್ಸಿ ರಸಾಯನಶಾಸ್ತ್ರ ವಿಭಾಗದ ಹೆಚ್.ಎಸ್.ಮೇಘನಾ 15 ಚಿನ್ನದ ಪದಕ ಹಾಗೂ 5 ನಗದು ಬಹುಮಾನದೊಂದಿಗೆ ಈ ವರ್ಷದ ಘಟಿಕೋತ್ಸವದಲ್ಲಿ ಅತೀ ಹೆಚ್ಚು ಬಹುಮಾನ ಪಡೆದುಕೊಳ್ಳುತ್ತಿದ್ದಾರೆ.

ಎಂಎಸ್ಸಿ ಗಣಿತ ಶಾಸ್ತ್ರ ವಿಭಾಗದ ಡಿ.ದರ್ಶನ್ 5 ಚಿನ್ನದ ಪದಕ ಹಾಗೂ 2 ನಗದು ಬಹುಮಾನ, ಕಾನೂನು ಅಧ್ಯಯನ ವಿಭಾಗದ ಹೆಚ್.ಎಲ್.ನವ್ಯಶ್ರೀ 4 ಪದಕ, 3 ನಗದು ಬಹುಮಾನ, ಎಂಇಡಿ ವಿಭಾಗದ ಎನ್.ನಂದನ್ 5 ಪದಕ, 1 ನಗದು ಬಹುಮಾನ, ಎಂಬಿಎ ಅಗ್ರಿ ಬಿಜಿನೆಸ್ ವಿಭಾಗದಲ್ಲಿ ಎಸ್.ಲಿಖಿತಾ 5 ಚಿನ್ನದ ಪದಕ, ಎಂಕಾಂನಲ್ಲಿ ಪಿ.ಬಿ.ಭವ್ಯಶ್ರೀ ಭಟ್ 4 ಪದಕ, 2 ನಗದು ಬಹುಮಾನ, ಎಂಎ ಕನ್ನಡದಲ್ಲಿ ವಿ.ತೇಜಸ್ವಿನಿ 10 ಪದಕ, 4 ನಗದು ಬಹುಮಾನ ಪಡೆದುಕೊಂಡಿದ್ದಾರೆ.

ಬಿಎ ಪದವಿಯಲ್ಲಿ ಎಂ.ಸುಮಾ 5 ಪದಕ, 3 ನಗದು ಬಹುಮಾನ, ಬಿ.ನಂದೀಶ್ 4 ಪದಕ, 10 ನಗದು ಬಹುಮಾನ, ಬಿಕಾಂನಲ್ಲಿ ವೈ.ವೈ. ಸಿಂಧು 1 ಪದಕ, 2 ನಗದು ಬಹುಮಾನ, ಬಿಇಡಿಯಲ್ಲಿ ಎಂ.ಮಾನಸ 2 ಪದಕ, 2 ನಗದು ಬಹುಮಾನ, ಕೆ.ರಂಜಿತಾ 2 ಪದಕ, 2 ನಗದು ಬಹುಮಾನ, ಎಲ್‌ಎಲ್‌ಬಿಯಲ್ಲಿ ಐ.ಕೆ.ಫಾತಿಮಾ ರೀಫಾ 1 ಪದಕ, ಬಿಎಸ್ಸಿಯಲ್ಲಿ ವಿ.ಪಿ.ರೋಶನಿ 5 ಪದಕ, 2 ನಗದು ಬಹುಮಾನ, ಎಂ.ಎಸ್. ದೀಪಿಕಾ ಗೌಡ 4 ಪದಕ, 7 ನಗದು ಬಹುಮಾನವನ್ನು ಪಡೆದುಕೊಂಡಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕುಲಸಚಿವರಾದ ವಿ.ಆರ್.ಶೈಲಜಾ, ಕೆ.ಎಂ.ಮಹದೇವನ್, ಹಣಕಾಸು ಅಧಿಕಾರಿ ಕೆ.ಎಸ್.ರೇಖಾ ಇದ್ದರು.

ತಮಿಳುನಾಡಿಗೆ ನೀರು ಬಿಟ್ಟಿರುವುದನ್ನು ಖಂಡಿಸಿ

ಕಾಡಾ ಕಚೇರಿಗೆ ಮುತ್ತಿಗೆ ಹಾಕಲೆತ್ನಿಸಿದ ಕಾವೇರಿ ಕ್ರಿಯಾ ಸಮಿತಿ ಸದಸ್ಯರ ಬಂಧನ, ಬಿಡುಗಡೆ



ಮೈಸೂರಿನ ಕಾಡಾ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಕಾವೇರಿ ಕ್ರಿಯಾ ಸಮಿತಿ ಸದಸ್ಯರನ್ನು ಪೊಲೀಸರು ಬಂಧಿಸಿದರು.

ಮೈಸೂರು, ಮಾ.1(ಜಿಎ)–ಕಾವೇರಿ ನೀರು ಬಿಡುವ ವಿಚಾರದಲ್ಲಿ ರಾಜ್ಯ ಸರ್ಕಾರ ತೋರಿದ ಅಸಹಾಯಕತೆ ಯನ್ನು ಖಂಡಿಸಿ ಕಾಡಾ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಕಾವೇರಿ ಕ್ರಿಯಾ ಸಮಿತಿ ಸದಸ್ಯರನ್ನು ಶುಕ್ರವಾರ ಪೊಲೀಸರು ಬಂಧಿಸಿ, ಬಿಡುಗಡೆಗೊಳಿಸಿದರು.

ಕಾವೇರಿ ನೀರನ್ನು ಉಳಿಸುವ ವಿಚಾರದಲ್ಲಿ ರಾಜ್ಯ ಸರ್ಕಾರ ನ್ಯಾಯಾಲಯದ ಮುಂದೆ ಸೂಕ್ತ ಮಾಹಿತಿ ಒದಗಿಸಲು ಸಂಪೂರ್ಣ ವಿಫಲವಾಗಿದೆ. ಕಾವೇರಿ ಕೊಳ್ಳದ ಭಾಗದಲ್ಲಿ ತೀವ್ರ ಬರ ಆವರಿಸಿದ್ದು, ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದೆ. ಸಂಘಟನೆಗಳು ನೂರಾರು ದಿನದಿಂದ ಪ್ರತಿಭಟಿಸಿದರು ಯಾವುದೇ ಕ್ರಮ ವಹಿಸದಿರುವುದು ವಿಷಾದನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮಿತಿ ಅಧ್ಯಕ್ಷ ಜಯಪ್ರಕಾಶ್ ಮಾತನಾಡಿ, ಸರ್ಕಾರ ಕಾವೇರಿ ನೀರು ಉಳಿಸುವ ಬಗ್ಗೆ ಚಿಂತನೆ ನಡೆಸಬೇಕು. ರಾಜಕೀಯ ಲಾಭಕ್ಕಾಗಿ ಮೇಕೆದಾಟು ಹೋರಾಟದ ನಾಟಕ ಮಾಡಿದ್ದ ಕಾಂಗ್ರೆಸ್, ಇದೀಗ ಸುಮ್ಮನಾಗಿದೆ. ಕಾವೇರಿ ವಿವಾದಕ್ಕೆ ಪರಿಹಾರ ಸೂತ್ರ ಹುಡುಕಬೇಕು ಎಂದು ಒತ್ತಾಯಿಸಿದರು.

ಪ್ರಧಾನ ಸಂಚಾಲಕ ಮೂಗೂರು ನಂಜುಂಡಸ್ವಾಮಿ, ಮೆಲ್ಲಹಳ್ಳಿ ಮಹಾದೇವ ಸ್ವಾಮಿ, ಎಂ.ಜೆ.ಸುರೇಶ್ ಗೌಡ, ತೇಜೇಶ್ ಲೋಕೇಶ್ ಗೌಡ, ಬೋಗಾದಿ ಸಿದ್ದೇಗೌಡ, ವರಕೂಡು ಕೃಷ್ಣೆಗೌಡ, ಶಿವಲಿಂಗಯ್ಯ, ಸುರೇಶ್ ಗೋಲ್ಡ್, ಮಹಾದೇವ ಸ್ವಾಮಿ, ರಾಜಶೇಖರ್, ಹೊನ್ನೇಗೌಡ, ಸೋಮೇಗೌಡ, ಆಟೋ ಮಹದೇವ್, ಮಂಜುಳಾ, ಪ್ರಭುಶಂಕರ್, ಸಿಂದುವಳ್ಳಿ ಶಿವಕುಮಾರ್, ಕೃಷ್ಣಯ್ಯ, ಭಾಗ್ಯಮ್ಮ, ನಾಗರಾಜ್, ನೇಹಾ, ಅಕ್ಬರ್, ಕೃಷ್ಣಪ್ಪ, ಪ್ರಭಾಕರ, ಹನುಮಂತಯ್ಯ ಪಾಲ್ಗೊಂಡಿದರು.

ರಾಮೇಶ್ವರಂ ಕೆಫೆ ಸ್ಫೋಟ: ರಾಜ್ಯ ಸರ್ಕಾರದ ವಿರುದ್ಧ ವಿಜಯೇಂದ್ರ ಗುಡುಗು

ಬೆಂಗಳೂರು: ಇಲ್ಲಿನ ರಾಮೇಶ್ವರಂ ಕೆಫೆಯಲ್ಲಿ ನಡೆದ ಸ್ಫೋಟ ಘಟನೆಯನ್ನು ಉಲ್ಲೇಖಿಸಿ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ ವಿಜಯೇಂದ್ರ ಅವರು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.



ಕಾಂಗ್ರೆಸ್ ಸರ್ಕಾರವನ್ನು ವಿಧಾನಸೌಧ'ದಿಂದ ಹೊರಕಳಿಸುವ ದಾರಿ ತೋರಿಸುವ ಹೋರಾಟ ಬಿಜೆಪಿ ಕೈಗೆತ್ತಿಕೊಳ್ಳಲಿದೆ ಎಂದು ಅವರು ಗುಡುಗಿದ್ದಾರೆ. ಈ ಬಗ್ಗೆ 'ಎಕ್ಸ್'ನಲ್ಲಿ ಅವರು ಬರೆದುಕೊಂಡಿದ್ದಾರೆ.

ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟಗೊಂಡಿರುವ ಘಟನೆ ರಾಜಧಾನಿಯ ಜನರನ್ನು ಬೆಚ್ಚಿಬೀಳಿಸಿದೆ. ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಕಾನೂನು ಸುವ್ಯವಸ್ಥೆ ದಿನದಿಂದ ದಿನಕ್ಕೆ ಕುಸಿಯಲಾರಂಭಿಸಿದೆ ಎಂದು ಅವರು ಹೇಳಿದ್ದಾರೆ.

ಕೊಲೆ, ಸುಲಿಗೆ, ಗೂಂಡಾಗಿರಿ, ಮಹಿಳಾ ದೌರ್ಜನ್ಯಗಳು ಸರಣಿ ರೂಪದಲ್ಲಿ ವರದಿಯಾಗುತ್ತಲೇ ಇವೆ. ದೇಶ ಕಂಟಕ ಶಕ್ತಿಗಳು ವಿಧಾನಸೌಧದೊಳಗೇ ಬಂದು 'ಪಾಕಿಸ್ತಾನ್ ಜಿಂದಾಬಾದ್' ಘೋಷಣೆ ಕೂಗುವಷ್ಟರ ಮಟ್ಟಿಗೆ ಅಟ್ಟಹಾಸ ಮೆರೆಯುತ್ತಿದ್ದಾರೆ. ಇದೀಗ ಜನನಿಬಿಡ ಹೋಟೆಲ್ ಪ್ರವೇಶಿಸಿ ಬಾಂಬ್ ಸ್ಫೋಟಿಸಿ ಅಮಾಯಕರನ್ನು ಗಾಯಗೊಳಿಸಿ ತೀವ್ರ ಆತಂಕದ ವಾತಾವರಣ ಸೃಷ್ಟಿಸಿದೆ ಎಂದು ಅವರು ಬರೆದುಕೊಂದಿದ್ದಾರೆ. ಸುಭದ್ರ ಕರ್ನಾಟಕಕ್ಕೆ ಗಂಡಾಂತರದ ಆತಂಕ ತರುವ ಚಟುವಟಿಕೆಗಳನ್ನು ಬಗ್ಗುಬಡಿಯುವಲ್ಲಿ ಮೀನಾಮೇಷ ಎಣಿಸುತ್ತಾ ಕಾಂಗ್ರೆಸ್ ಸರ್ಕಾರ ಮತ ಬ್ಯಾಂಕ್ ಲೆಕ್ಕಾಚಾರದ ಹೆಜ್ಜೆಗಳ ದಾರಿ ಬದಲಿಸಿಕೊಳ್ಳದೇ ಹೋದರೆ, ಅಧಿಕಾರದಿಂದ ಕೆಳಗಿಳಿಸಿ ವಿಧಾನಸೌಧದಿಂದ ಹೊರಕಳಿಸುವ ದಾರಿ ತೋರಿಸುವ ಹೋರಾಟ ಬಿಜೆಪಿ ಕೈಗೆತ್ತಿಕೊಳ್ಳಲಿದೆ' ಎಂದು ವಿಜಯೇಂದ್ರ ಹೇಳಿದ್ದಾರೆ.



ನಿವೃತ್ತ ಐಎಎಸ್ ಅಧಿಕಾರಿ, ಬಿಜೆಪಿ ಮುಖಂಡ, ಚಲನಚಿತ್ರ ನಟ ಕೆ.ಶಿವರಾಂ ನಿಧನಕ್ಕೆ ಮಾಜಿ ಗ್ರಾಪಂ ಸದಸ್ಯ ಹಾಗೂ ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ಶ್ರದ್ಧಾಂಜಲಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಹರೀಶ್ ರೆಡ್ಡಿ, ಗೋಪಾಲಗೌಡ ಹುಯಿಲಾಳು, ಮಂಜುನಾಥ್ ಪ್ರಸಾದ್ ಉಪಸ್ಥಿತರಿದ್ದರು.

ಮೊದಲು ಪಾಕ್ ಪರ ಘೋಷಣೆ, ಈಗ ಸ್ಫೋಟ ಗೃಹ ಸಚಿವರ ರಾಜೀನಾಮೆಗೆ ಯತ್ನಾಳ್ ಆಗ್ರಹ

ಬ್ಲಾಸ್ಟ್ ಪ್ರಕರಣವನ್ನು NIA ತನಿಖೆಗೆ ಒಪ್ಪಿಸುವಂತೆ ಒತ್ತಾಯ

ಬೆಂಗಳೂರು: ಮೊನ್ನೆ ಪಾಕಿಸ್ತಾನ ಪರ ಘೋಷಣೆ, ಇಂದು ರಾಮೇಶ್ವರಂ ಕೆಫೆಯಲ್ಲಿ ಬ್ಲಾಸ್ಟ್ ನಡೆದಿದೆ. ಈ ಹಿನ್ನೆಲೆಯಲ್ಲಿ ಗೃಹ ಸಚಿವ ಜಿ. ಪರಮೇಶ್ವರ್ ಅವರು ರಾಜೀನಾಮೆ ನೀಡುವಂತೆ ಇಡೀ ಕರ್ನಾಟಕ ಆಗ್ರಹಿಸುತ್ತಿದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ.



ರಾಮೇಶ್ವರಂ ಕೆಫೆಯಲ್ಲಿ ನಡೆದ ಸ್ಫೋಟ ಸಂಬಂಧ ತಮ್ಮ ಎಕ್ಸ್ ಖಾತೆ ಯಲ್ಲಿ ಬರೆದುಕೊಂಡಿರುವ ಶಾಸಕರು, ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ನಡೆದ ಸ್ಫೋಟದ ಬಗ್ಗೆ ರಾಷ್ಟ್ರೀಯ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

ಗ್ರಾಹಕರು ಬಿಟ್ಟು ಹೋಗಿದ್ದ ಬ್ಯಾಗ್‌ನಿಂದ ಸ್ಫೋಟ ಸಂಭವಿಸಿದೆ. ಯಾವುದೇ ಸಿಲಿಂಡರ್ ಸ್ಫೋಟವಾಗಿಲ್ಲ. ಕೆಲ ದಿನಗಳ ಹಿಂದೆ ಪಾಕಿಸ್ತಾನದ ಪರ ಘೋಷಣೆ ಕೂಗಿದವರನ್ನು ಕಾಂಗ್ರೆಸ್ ಪಕ್ಷ ಸಮರ್ಥಿಸಿಕೊಂಡಿತ್ತು. ಹೀಗಾಗಿ ಗೃಹ ಸಚಿವ ಪರಮೇಶ್ವರ್ ರಾಜೀನಾಮೆಗೆ ಕರ್ನಾಟಕ ಆಗ್ರಹ ಮಾಡುತ್ತಿದೆ ಎಂದು ಬರೆದುಕೊಂಡಿದ್ದಾರೆ.

ರಾಮೇಶ್ವರಂ ಕೆಫೆಯಲ್ಲಿ ಬ್ಲಾಸ್ಟ್: ನಗರದ ಪ್ರಮುಖ ಹೋಟೆಲ್‌ಗಳಲ್ಲಿ ಒಂದಾಗಿ ರುವ ಬ್ರೂಕ್‌ಫೀಲ್ಡ್ ರಾಮೇಶ್ವರಂ ಕೆಫೆಯಲ್ಲಿ ಶುಕ್ರವಾರ ಮಧ್ಯಾಹ್ನ 1:05ಕ್ಕೆ ಕೆಫೆಯ ಕೈ ತೊಳೆಯುವ ಜಾಗದಲ್ಲಿಈ ಸ್ಫೋಟ ಸಂಭವಿಸಿದೆ. ಸ್ಥಳದಲ್ಲಿ ಬ್ಯಾಟರಿ, ಬೋಲ್ಟ್‌ಗಳು ಪತ್ತೆಯಾಗಿದೆ. ಪೊಲೀಸರ ಜೊತೆ ಸ್ಥಳಕ್ಕೆ ವಿಧಿ ವಿಜ್ಞಾನ ಪ್ರಯೋಗಾಲಯದ (FSL) ಅಧಿಕಾರಿಗಳು, ಭಯೋತ್ಪಾದಾ ನಿಗ್ರಹ ದಳ ಭೇಟಿ ನೀಡಿದ್ದು ಪರಿಶೀಲನೆ ನಡೆಯುತ್ತಿದೆ.

ಪ್ರಾಥಮಿಕ ಹಂತದಲ್ಲಿ ಸಿಲಿಂಡರ್ ಸ್ಫೋಟದಿಂದ ಘಟನೆ ನಡೆದಿದೆ ಎನ್ನಲಾಗಿತ್ತು. ಆದರೆ ಇಲ್ಲಿ ಸಿಲಿಂಡರ್ ಸ್ಫೋಟ ಸಂಭವಿಸಿಲ್ಲ ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ. ಹೀಗಾಗಿ ವಿವಿಧ ಆಯಾಮಗಳಲ್ಲಿ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಇಂದಿನಿಂದ ಉಸಿರಾಟದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ



ಮೈಸೂರು, ಮಾ.1– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮಾರ್ಚ್ 2ರಿಂದ 10ರವರೆಗೆ ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ ಉಸಿರಾಟದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9538367282, ದೂ. 0821–2548231 ಸಂಪರ್ಕಿಸಬಹುದು.

ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿ

ರೈಲು ತಡೆಗೆ ಯತ್ನಿಸಿದ ರೈತರ ಬಂಧನ, ಬಿಡುಗಡೆ

ಮೈಸೂರು, ಮಾ.1(ಜಿಎ)–ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿ, ರೈತರ ಮೇಲಿನ ದಾಳಿ ಖಂಡಿಸಿ ರೈಲು ತಡೆಗೆ ಮುಂದಾದ ರಾಜ್ಯ ಕಬ್ಬು ಬೆಳೆಗಾರರ ಸಂಘದ ರೈತರನ್ನು ಪೊಲೀಸರು ಬಂಧಿಸಿ, ಬಿಡುಗಡೆಗೊಳಿಸಿದ್ದಾರೆ.

ಕೇಂದ್ರ ಸರ್ಕಾರಕ್ಕೆ ಬಿಸಿ ಮುಟ್ಟಿಸುವ ಸಲುವಾಗಿ ನೂರಾರು ರೈತರು ರೈಲು ತಡೆಯಲು ಶುಕ್ರವಾರ ನಗರದ ರೈಲು ನಿಲ್ದಾಣಕ್ಕೆ ತೆರಳಿದರು. ಈ ವೇಳೆ ದ್ವಾರದಲ್ಲೇ ಇದ್ದ ಪೊಲೀಸರು ಪ್ರತಿಭಟನಾಕಾರರನ್ನು ತಡೆದರು. ಇದರಿಂದ ರೈತರು ಮತ್ತು ಪೊಲೀಸರ ನಡುವೆ ನೂಕಾಟ ತಳ್ಳಾಟ ಉಂಟಾಗಿ ಮಾತಿನ ಚಕಮಕಿ ನಡೆಯಿತು. ನಂತರ ಪೊಲೀಸರು ಬಂಧಿಸಲು ಯತ್ನಿಸಿದಾಗ ದ್ವಾರದ ಬಳಿ ಕುಳಿತ ರೈತರು ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಲು ನಾವು ರೈಲು ತಡೆ ನಡೆಸಲು ಬಂದಿದ್ದೇವೆ. ನಾವು ಗೂಂಡಾಗಳು, ದೇಶ ದ್ರೋಹಿಗಳಲ್ಲ. ನಾವು ಲೂಟಿ ಮಾಡಲು ಬಂದಿಲ್ಲ. ನಮ್ಮನ್ನು ಏಕೆ ತಡೆದಿದ್ದೀರಿ? ರೈಲು ನಿಲ್ದಾಣಕ್ಕೆ ಹೋಗಲು ನಮಗೆ ಹಕ್ಕಿಲ್ಲವೇ ಎಂದು ರೈಲ್ವೆ ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ರೈಲು ನಿಲ್ದಾಣಕ್ಕೆ ನುಗ್ಗಲು ಯತ್ನಿಸಿದರು. ಈ ಸಂದರ್ಭದಲ್ಲಿ ಪೊಲೀಸರು ರೈತರನ್ನು ಬಂಧಿಸಿ ಸಿಎಆರ್ ಮೈದಾನಕ್ಕೆ ಕರೆದೊಯ್ದು ಸಂಜೆ ವೇಳೆಗೆ ಬಿಡುಗಡೆಗೊಳಿಸಿದರು.



ಮೈಸೂರು ರೈಲ್ವೇ ನಿಲ್ದಾಣದಲ್ಲಿ ರೈಲು ತಡೆಗೆ ಮುಂದಾದ ರೈತರನ್ನು ಪೊಲೀಸರು ಬಂಧಿಸಿದರು.

ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಖಾತರಿ ಕಾನೂನು ಜಾರಿ ಮಾಡದಿದ್ದರೆ ಚುನಾವಣೆಯಲ್ಲಿ ಕೇಂದ್ರ ಸರ್ಕಾರದ ಮರಣ ಶಾಸನವನ್ನು ರೈತರು ಬರೆಯುತ್ತೇವೆ. ಕೇಂದ್ರ ಸರ್ಕಾರಕ್ಕೆ ಬಂಡವಾಳ ಶಾಹಿಗಳ ಸಾಲ ಮನ್ನಾ ಮಾಡಲು ಹೆಚ್ಚಿನ ಕಾಳಜಿ ಇರುತ್ತದೆ. ಆದರೆ ರೈತರ ಸಾಲ ಮನ್ನಾ ವಿಚಾರ, ಎಂ.ಎಸ್.ಸ್ವಾಮಿನಾಥನ್ ವರದಿ ಬೆಂಬಲ ಬೆಲೆ, ಡಬ್ಲ್ಯೂಟಿಓ ಒಪ್ಪಂದ, ರೈತರಿಗೆ ಪಿಂಚಣಿ ನೀಡುವ ಯೋಜನೆ, ಬೆಳೆ ವಿಮೆ ಪದ್ಧತಿ, ಕಳೆದ ವರ್ಷ ಹೋರಾಟದಲ್ಲಿ ಪ್ರಾಣತ್ಯಾಗ ಮಾಡಿದ 750 ರೈತ ಕುಟುಂಬಕ್ಕೆ ನೆರವು ನೀಡುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಕಿಡಿ ಕಾರಿದರು.

ರೈತರು ನ್ಯಾಯ ಕೇಳಿದರೆ ಗೋಲಿಬಾರ್ ಮಾಡುತ್ತಾರೆ. ಇದು ದೇಶದ ರೈತರಿಗೆ ಮಾಡುವ ಅಪಮಾನ. ರೈತರು ಗುಲಾಮರು, ಭಿಕ್ಷುಕರಲ್ಲ. ಕೂಡಲೇ ಸಮಸ್ಯೆ ಬಗೆಹರಿಸಿ ಅನ್ನದಾತನ ಋಣ ತೀರಿಸಿ. ದೆಹಲಿಯಲ್ಲಿ ಹೋರಾಟ ಮಾಡುತ್ತಿರುವ ರೈತರು ಯಾರೂ ದೇಶ ದ್ರೋಹಿಗಳಲ್ಲ. ನಾವು ದೆಹಲಿಗೆ ಹೋಗುವಾಗ ಮಾರ್ಗ ಮಧ್ಯದಲ್ಲೇ ತಡೆದು ವಾಪಸ್ ಕಳುಹಿಸುತ್ತಾರೆ. ದೆಹಲಿಯಲ್ಲಿ ಹೋರಾಟ ಮಾಡುವ ಪಂಜಾಬ್, ಹರಿಯಾಣ ರೈತರನ್ನು ದೇಶ ವಿರೋಧಿಗಳು ಎನ್ನುತ್ತಾರೆ. ಇದರ ಅರ್ಥ ಏನು? ರೈತರ ಸಮಸ್ಯೆ ಬಗೆಹರಿಯುವವರೆಗೂ ಚಳವಳಿಯಿಂದ ಹಿಂದೆ ಸರಿಯುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ಕಿರಗಸೂರು ಶಂಕರ್, ಜಿಲ್ಲಾ ಉಪಾಧ್ಯಕ್ಷ ಮಾರ್ಬಳ್ಳಿ ನೀಲಕಂಠಪ್ಪ, ಮುಖಂಡರಾದ ಹೆಗ್ಗೂರು ರಂಗರಾಜು, ಬನ್ನೂರು ಸೂರಿ, ಬಿಪಿ ಪರಶಿವಮೂರ್ತಿ, ಕುರುಬೂರು ಸಿದ್ದೇಶ್, ದೇವನೂರು ವಿಜಯೇಂದ್ರ, ಕುರುಬೂರು ಪ್ರದೀಪ್, ಕಿರಗಸೂರು ಪ್ರಸಾದ್ ನಾಯಕ್, ಉಮೇಶ್, ಕಾಟೂರು ಮಹಾದೇವಸ್ವಾಮಿ, ನಾಗೇಶ್, ಶ್ರೀಕಂಠ, ನಂಜುಂಡಸ್ವಾಮಿ, ವರಕೋಡು ನಾಗೇಶ್, ಪಿ ರಾಜು, ಅಂಬಳೆ ಮಂಜುನಾಥ್, ಕೋಟೆ ಸುನಿಲ್, ಕೊಡನಹಳ್ಳಿ ಪ್ರಕಾಶ್, ಸೋಮಶೇಖರ್, ಚೇತನ್, ಶಂಭು, ಶಾಂತರಾಜ್, ಶಿವಮೂರ್ತಿ, ಮಂಜುನಾಥ್, ಶಿವಕುಮಾರ್, ನೂರಕ್ಕೂ ಹೆಚ್ಚು ರೈತರು ಪಾಲ್ಗೊಂಡಿದರು.



ಸಕಾಲದಲ್ಲಿ ವೇತನ ಪಾವತಿಸುವಂತೆ ಒತ್ತಾಯಿಸಿ ಅತಿಥಿ ಉಪನ್ಯಾಸಕರು ಪ್ರತಿಭಟನೆ ನಡೆಸಿದರು.

ವೇತನ ಪಾವತಿಗೆ ಆಗ್ರಹಿಸಿ ಅತಿಥಿ ಉಪನ್ಯಾಸಕರ ಪ್ರತಿಭಟನೆ

ಮಡಿಕೇರಿ,ಮಾ.1– ಸಕಾಲದಲ್ಲಿ ವೇತನ ಪಾವತಿಸುವಂತೆ ಒತ್ತಾಯಿಸಿ ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಅತಿಥಿ ಉಪನ್ಯಾಸಕರು ಪ್ರತಿಭಟನೆ ನಡೆಸಿದರು. ತರಗತಿ ಬಹಿಷ್ಕರಿಸಿ ಕಾಲೇಜಿನ ಎದುರು ಮೌನ ಪ್ರತಿಭಟನೆ ನಡೆಸಿದ ಉಪನ್ಯಾಸಕರು, ವೇತನ ಪಾವತಿಸುವವರೆಗೆ ತರಗತಿಗೆ ತೆರಳುವುದಿಲ್ಲ ಎಂದು ಪಟ್ಟು ಹಿಡಿದರು.

ಅತಿಥಿ ಉಪನ್ಯಾಸಕ ಡಾ.ಸೋಮಣ್ಣ ಮಾತನಾಡಿ, ಮಂಗಳೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಪ್ಪ ಕಾಲೇಜ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ 43 ಉಪನ್ಯಾಸಕರಿಗೆ ಕಳೆದ 5 ತಿಂಗಳಿನಿಂದ ವೇತನ ಪಾವತಿಯಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಕೋವಿಡ್ ಸಂದರ್ಭದಲ್ಲಿ 3 ತಿಂಗಳ ವೇತನ ಖಡಿತಗೊಳಿಸಲಾಗಿದೆ. ಆ ವೇತನ ಸೇರಿ ಒಟ್ಟು 8 ತಿಂಗಳ ವೇತನವನ್ನು ತಕ್ಷಣ ನೀಡಬೇಕೆಂದು ಆಗ್ರಹಿಸಿದ ಅವರು, ಅಲ್ಲಿಯವರೆಗೆ ತರಗತಿ ಬಹಿಷ್ಕರಿಸಿ ಪ್ರತಿಭಟನೆ ಮುಂದುವರೆಸುವುದಾಗಿ ಎಚ್ಚರಿಕೆ ನೀಡಿದರು.

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷೆಯನ್ನು ನಡೆಸಿ ಮೌಲ್ಯಮಾಪನ ಕೂಡ ಮಾಡಲಾಗಿದೆ. ಪರೀಕ್ಷಾ ಮೇಲ್ವಿಚಾರಣಾ ಕಾರ್ಯವನ್ನು ಸುಸೂತ್ರವಾಗಿ ನಡೆಸಲಾಗಿದೆ ಆದರೂ, ನಮಗೆ ವೇತನವನ್ನು ಸಕಾಲದಲ್ಲಿ ಪಾವತಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿ ತಿಂಗಳು ಸರಿಯಾದ ಸಮಯದಲ್ಲಿ ವೇತನ ಪಾವತಿ ಮಾಡುವಂತೆ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಮನವಿ ಮಾಡಲಾಗಿದೆ ಆದರೆ ಇಲ್ಲಿಯವರೆಗೆ ಯಾವುದೇ ಸ್ಪಂದನೆ ದೊರೆತ್ತಿಲ್ಲ ನಮಗೆ ಜೀವನ ಸಾಗಿಸಲು ಕಷ್ಟವಾಗಿದೆ ಎಂದು ಅಳಲು ತೋಡಿಕೊಂಡರು. ಕಾಲೇಜ್‌ನ ಎಲ್ಲಾ ಅತಿಥಿ ಉಪನ್ಯಾಸಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಾಳೆ ರಾಷ್ಟ್ರೀಯ ಪಲ್ಸ್ ಪೋಲಿಯೋ

ಮಡಿಕೇರಿ ಮಾ.1– ಪಲ್ಸ್ ಪೋಲಿಯೊ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಕೊಡಗು ಜಿಲ್ಲೆಯಲ್ಲಿ 0–5 ವರ್ಷದೊಳಗಿನ 36,595 ಮಕ್ಕಳನ್ನು ಗುರುತಿಸಿದ್ದು, ಇದರಲ್ಲಿ ಗ್ರಾಮೀಣ ಪ್ರದೇಶದಲ್ಲಿ 32,261 ಮಕ್ಕಳು ಹಾಗೂ ನಗರ ಪ್ರದೇಶದಲ್ಲಿ 4,334 ಮಕ್ಕಳನ್ನು ಗುರುತಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ತಿಳಿಸಿದ್ದಾರೆ.

ಒಟ್ಟು ಜನಸಂಖ್ಯೆಯಲ್ಲಿ 890 ವಲಸೆ ಪ್ರದೇಶಗಳನ್ನು ಗುರುತಿಸಿದ್ದು, ಒಟ್ಟು ವಲಸಿಗರ ಜನಸಂಖ್ಯೆ 24,021 ಇದ್ದು, ಇವರಲ್ಲಿ 0–5 ವರ್ಷದೊಳಗಿನ ಒಟ್ಟು 3143 ಮಕ್ಕಳನ್ನು ಗುರುತಿಸಲಾಗಿದೆ. ಸ್ಥಿರ ವಾಸಿತ ವಲಸಿಗರ 350 ಪ್ರದೇಶಗಳನ್ನು ಗುರುತಿಸಲಾಗಿದ್ದು, ಒಟ್ಟು ಜನಸಂಖ್ಯೆ 2,66,770 ಇದ್ದು, ಇವರಲ್ಲಿ 0–5 ವರ್ಷದೊಳಗಿನ 14,460 ಮಕ್ಕಳನ್ನು ಗುರುತಿಸಲಾಗಿದೆ.

ಜಿಲ್ಲೆಯಲ್ಲಿ ಒಟ್ಟು 464 ಬೂತ್‌ಗಳನ್ನು ತೆರೆಯಲಾಗುತ್ತಿದ್ದು, ಜನಸಂದಣಿ ಇರುವ ಪ್ರದೇಶ ಮತ್ತು ಬಸ್ ನಿಲ್ದಾಣಗಳು ಹಾಗೂ ಪ್ರವಾಸಿ ಕೇಂದ್ರಗಳನ್ನು ಗುರಿಯಾಗಿಸಿ 31 ಟ್ರಾನ್ಸಿಟ್ ಬೂತ್‌ಗಳನ್ನು ತೆರೆಯಲಾಗುವುದು.

ನಿವೃತ್ತ ಮುಖ್ಯ ಶಿಕ್ಷಕ ಲಾಲ್‌ಕುಮಾರ್‌ಗೆ ಬೀಳ್ಕೊಡುಗೆ



ನಿವೃತ್ತ ಮುಖ್ಯ ಶಿಕ್ಷಕ ಲಾಲ್‌ಕುಮಾರ್ ದಂಪತಿಯನ್ನು ಶಾಲಾ ಆಡಳಿತ ಮಂಡಳಿ ಹಾಗೂ ಶಾಲೆ ವತಿಯಿಂದ ಸನ್ಮಾನಿಸಲಾಯಿತು.

ವಿರಾಜಪೇಟೆ, ಮಾ.1– ವಿರಾಜಪೇಟೆ ಚಿಕ್ಕಪೇಟೆಯಲ್ಲಿರುವ ಜಯಪ್ರಕಾಶ್ ನಾರಾಯಣ ಸ್ಮಾರಕ ಪ್ರೌಢಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿದ್ದ ಬಿ.ಎಸ್.ಲಾಲ್‌ಕುಮಾರ್ ಅವರು 30 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾಗಿದ್ದು, ಶಾಲಾ ಆಡಳಿತ ಮಂಡಳಿ ಹಾಗೂ ಶಾಲೆಯ ವತಿಯಿಂದ ಶಾಲಾ ಸಭಾಂಗಣದಲ್ಲಿ ಬೀಳ್ಕೊಡಲಾಯಿತು.

ಜಯಪ್ರಕಾಶ್ ನಾರಾಯಣ ಪ್ರೌಢಶಾಲಾ ಆಡಳಿತ ಮಂಡಳಿಯ ಕಾರ್ಯದರ್ಶಿ ತ್ರಿಶೂ ಗಣಪತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಲಾಲ್ ಕುಮಾರ್ ಅವರು ಮುಖ್ಯ ಶಿಕ್ಷಕರಾಗಿ ವಿದ್ಯಾರ್ಥಿಗಳನ್ನು ಉತ್ತಮ ಪ್ರೀತಿ ವಾತ್ಸಲ್ಯದಿಂದ ಕಾಣುತ್ತ ಶಿಕ್ಷಣದೊಂದಿಗೆ ಕ್ರೀಡೆಯಲ್ಲೂ ಭಾಗವಹಿಸುವಂತೆ ಮಕ್ಕಳನ್ನು ಪ್ರೋತ್ಸಾಹಿಸುತ್ತಿದ್ದರು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಪ್ರಕಾಶ್ ಮಾತನಾಡಿ ಲಾಲ್‌ಕುಮಾರ್ ಅವರ ಸೇವೆ ವಿದ್ಯಾರ್ಥಿಗಳಿಗೆ ಅವಶ್ಯವಾಗಿದೆ ಎಂದರು.

ನಿವೃತ್ತರಾದ ಮುಖ್ಯ ಶಿಕ್ಷಕ ಬಿ.ಎಸ್. ಲಾಲ್‌ಕುಮಾರ್ ಹಾಗೂ ಗೀತಾ ಲಾಲ್ ಕುಮಾರ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಸನ್ಮಾನ ಸ್ವೀಕರಿಸಿದ ಲಾಲ್‌ಕುಮಾರ್ ಮಾತನಾಡಿ ಶಿಕ್ಷಕ ವೃತ್ತಿಯಲ್ಲಿ ಸಾಗಿಬಂದ ಹಾದಿಯ ಬಗ್ಗೆ ನೆನಪಿಸಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಶಾಲಾ ಆಡಳಿತ ಮಂಡಳಿ ನಿರ್ದೇಶಕರಾದ ಎಂ.ಎಂ.ಉತ್ತಪ್ಪ, ಆಶಾ ಸುಬ್ಬಯ್ಯ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ವನಜಾಕ್ಷಿ, ಸಂಪನ್ಮೂಲ ವ್ಯಕ್ತಿ ಕೆ.ಸಿ.ಗೀತಾಂಜಲಿ, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರಾದ ಗಾಯತ್ರಿ, ಹಳೆ ವಿದ್ಯಾರ್ಥಿ ನೀತು, ಉಪಸ್ಥಿತರಿದ್ದು ಮಾತನಾಡಿದರು. ಮುಖ್ಯ ಶಿಕ್ಷಕ ರಾಜೇಗೌಡ ಸ್ವಾಗತಿಸಿದರು. ಶಿಕ್ಷಕಿ ಕವಿತಾ ನಿರೂಪಿಸಿದರೆ ನಂದೀಶ್ ವಂದಿಸಿದರು. ಈ ಸಂದರ್ಭ ಶಾಲಾ ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸುಸೂತ್ರವಾಗಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆ: 4351 ವಿದ್ಯಾರ್ಥಿಗಳು ಹಾಜರು

ಮಡಿಕೇರಿ,ಮಾ.1– ಜಿಲ್ಲೆಯಾದ್ಯಂತ ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭವಾಗಿದ್ದು, ಸುಸೂತ್ರವಾಗಿ ನೆರವೇರಿದೆ. ಪಿಯುಸಿ ಪರೀಕ್ಷೆಗಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದೆ. ಕನ್ನಡ ವಿಷಯದ ಪರೀಕ್ಷೆಗೆ 4439 ವಿದ್ಯಾರ್ಥಿಗಳು ಹಾಜರಾಗಬೇಕಿತ್ತು ಆದರೆ 4351 ವಿದ್ಯಾರ್ಥಿಗಳು ಪರೀಕ್ಷೆ ಹಾಜರಾಗಿದ್ದು, ಒಟ್ಟು 88 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಸುಂಟಿಕೊಪ್ಪ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಬಾರಿಗೆ ಪರೀಕ್ಷಾ ಕೇಂದ್ರ ತೆರೆದ ಹಿನ್ನೆಲೆಯಲ್ಲಿ ಸುತ್ತಮುತ್ತಲಿನ 4 ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಿದೆ ಸುಂಟಿಕೊಪ್ಪದ ಸಂತ ಮೇರಿ ಆಂಗ್ಲ ಪದವಿ ಪೂರ್ವ ಕಾಲೇಜು, ಮಾದಾಪುರ ಚೆನ್ನಮ್ಮ ಕಾಲೇಜು, ಗರಗಂದೂರು ಮೊರಾರ್ಜಿ ವಸತಿ ವಿಜ್ಞಾನ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸುಂಟಿಕೊಪ್ಪ ಪಪೂ ಕಾಲೇಜಿನ ವಿದ್ಯಾರ್ಥಿಗಳಿಗೆ ಅನೂಕೂಲವಾಗಿದೆ.

ಪಿಯುಸಿ ವಾರ್ಷಿಕ ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಲು ಇಲಾಖೆ ವತಿಯಿಂದ ಅಗತ್ಯ ಕ್ರಮ ಕೈಗೊಳ್ಳಲಾಗಿತ್ತು. ದೂರದ ಪರೀಕ್ಷಾ ಕೇಂದ್ರಕ್ಕೆ ಪ್ರಶ್ನೆ ಪತ್ರಿಕೆಗಳನ್ನು ಸರಿಯಾದ ಸಮಯದಲ್ಲಿ ತಲುಪಿಸಲು ಸೂಕ್ತ ಕ್ರಮ ಕೈಗೊಂಡಿದ್ದರಿಂದ ಯಾವುದೇ ಸಮಸ್ಯೆಯಾಗಿಲ್ಲ. ಜಿಲ್ಲೆಯ ಒಟ್ಟು 19 ಪರೀಕ್ಷಾ ಕೇಂದ್ರಗಳಲ್ಲಿ ವ್ಯವಸ್ಥೆ ಮಾಡಲಾಗಿತ್ತಲ್ಲದೇ, ವಿದ್ಯಾರ್ಥಿಗಳಿರುವ ಪ್ರದೇಶದ 10ರಿಂದ 15 ಕಿ.ಮೀ ಒಳಗೆ ಪರೀಕ್ಷಾ ಕೇಂದ್ರಗಳನ್ನು ತೆರೆದಿದ್ದ ಕಾರಣ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರ ತಲುಪಲು ಅನುಕೂಲವಾಯಿತು.

ಬಾಲ ಸಂಸ್ಕಾರ ಶಿಬಿರದ ಸಮಾರೋಪ ಸಮಾರಂಭ

ಮಡಿಕೇರಿ,ಮಾ.1– ದೇವರಕೊಲ್ಲಿ ಶ್ರೀ ಚಾಮುಂಡೇಶ್ವರಿ ದೇವಾಲಯ ಹಾಗೂ ಬಾಲ ಸಂಸ್ಕಾರ ಶಿಕ್ಷಣ ಸಮಿತಿಯ ಸಂಯುಕ್ತಾಶ್ರಯದಲ್ಲಿ ಬಾಲ ಸಂಸ್ಕಾರ ಶಿಬಿರದ ಸಮಾರೋಪ ಸಮಾರಂಭ ನಡೆಯಿತು.

ದೇವರಕೊಲ್ಲಿಯ ಶ್ರೀ ಚಾಮುಂಡೇಶ್ವರಿ ದೇವಾಲಯದ ಸಭಾಂಗಣದಲ್ಲಿ ನಿವೃತ್ತ ಅಧ್ಯಾಪಕ ಎಂ.ಎಸ್.ಶಿವರಾವ್ ಅವರ ನೇತೃತ್ವದಲ್ಲಿ ಕಳೆದ 12 ವಾರಗಳ ಕಾಲ ಪ್ರತಿ ಭಾನುವಾರ ಶಿಬಿರವನ್ನು ನಡೆಸಲಾಯಿತು. ದೇವರಕೊಲ್ಲಿ, ಮದೆ, 2ನೇ ಮೊಣ್ಣಂಗೇರಿ, ಜೋಡುಪಾಲ, ಕೊಯನಾಡು ಭಾಗದ 60ಕ್ಕೂ ಹೆಚ್ಚು ಮಕ್ಕಳಿಗೆ ಹಿಂದೂ ಧರ್ಮದ ಸಂಸ್ಕಾರ, ಆಚಾರ ವಿಚಾರ, ಶ್ಲೋಕ, ಯೋಗ ಮತ್ತು ದೇಶಭಕ್ತಿ ಗೀತೆಯನ್ನು ಹೇಳಿ ಕೊಡಲಾಯಿತು. ಬುದ್ಧಿಯನ್ನು ಚುರುಕುಗೊಳಿಸುವ ಆಟಗಳ ಬಗ್ಗೆ ಶಿಬಿರದ ಗುರುಗಳಾದ 2ನೇ ಮೊಣ್ಣಂಗೇರಿ ಗ್ರಾಮದ ಧನಂಜಯ ಅಗೋಳಿಕಜೆ, ಎ.ಎ.ವಿಠಲ ಹಾಗೂ ಕೆ.ವಿ.ಗೀತಾ ತರಬೇತಿ ನೀಡಿದರು.



ದೇವರಕೊಲ್ಲಿಯ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ನಿವೃತ್ತ ಅಧ್ಯಾಪಕ ಎಂ.ಎಸ್.ಶಿವರಾವ್ ನೇತೃತ್ವದಲ್ಲಿ ಪ್ರತಿ ಭಾನುವಾರ ಶಿಬಿರವನ್ನು ನಡೆಸಲಾಯಿತು.

ಶಿಬಿರದ ಸಮಾರೋಪ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಕೊಡಗು ಸೇವಾ ಭಾರತೀಯ ಪ್ರಮುಖ ಡಿ.ಹೆಚ್.ತಿಮ್ಮಪ್ಪ, ಶಾಲಾ ಶಿಕ್ಷಣದೊಂದಿಗೆ ಸಂಸ್ಕಾರ ಮೈಗೂಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಎಲ್ಲಾ ಗ್ರಾಮಗಳಲ್ಲಿಯೂ ಇಂತಹ ಶಿಬಿರಗಳು ನಡೆಯಬೇಕು ಎಂದು ಹೇಳಿದರು. ಶ್ರೀ ಚಾಮುಂಡೇಶ್ವರಿ ದೇವಾಲಯದ ಅಧ್ಯಕ್ಷ ಬಿ.ಜೆ. ಯಶೋಧರ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಮುಖರಾದ ಕಳಗಿ ರಮಾದೇವಿ ಸಂಪಾಜೆ ಹಾಗೂ ದೇವಾಲಯದ ಆಡಳಿತ ಮಂಡಳಿಯ ಪ್ರಮುಖರು ಉಪಸ್ಥಿತರಿದ್ದರು.

ನೀರಿನ ಸಂಪರ್ಕ ಕಡಿತಗೊಳಿಸುವ ಮೂಲಕ ಬಾಕಿ ವಸೂಲಿಗೆ ಮುಂದಾದ ನಗರಸಭೆ

ಮಡಿಕೇರಿ,ಮಾ1– ನೀರಿನ ಕಂದಾಯ ಪಾವತಿಸುವಂತೆ ನಗರಸಭೆಯ ಕಸ ಸಂಗ್ರಹಿಸುವ ವಾಹನಗಳಲ್ಲಿ ಪ್ರತಿನಿತ್ಯ ಧ್ವನಿವರ್ಧಕದ ಮೂಲಕ ಮನವಿ ಮಾಡುತ್ತಿದೆ. ಹೀಗಿದ್ದರೂ ನೀರಿನ ಕಂದಾಯವನ್ನು ಪಾವತಿಸದೇ, ಬಾಕಿ ಉಳಿಸಿಕೊಂಡವರಿಗೆ ಮಡಿಕೇರಿ ನಗರಸಭೆ ನೀರಿನ ಸಂಪರ್ಕವನ್ನು ಕಡಿತಗೊಳಿಸುವ ಮೂಲಕ ಬಾಕಿ ವಸೂಲಾತಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ.

ಮಡಿಕೇರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿಗೆ ನಗರಸಭೆಯಿಂದ ಪಡೆದುಕೊಂಡಿದ್ದ ನೀರಿನ ಸಂಪರ್ಕ ಶುಲ್ಕ ಸುಮಾರು 15 ಸಾವಿರ ರೂಪಾಯಿಗಳಷ್ಟು ಬಾಕಿ ಉಳಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ನಗರಸಭಾ ನೀರು ಸರಬರಾಜು ವಿಭಾಗದ ಸಿಬ್ಬಂದಿಗಳು ನೀರಿನ ಸಂಪರ್ಕವನ್ನು ಕಡಿತಗೊಳಿಸಿದ್ದಾರೆ.

ಈ ಕುರಿತು ಮಾತನಾಡಿದ ನಗರಸಭೆಯ ಕರ ವಸೂಲಿಗಾರರಾದ ಸತ್ಯನಾರಾಯಣ, ನೀರಿನ ಸಂಪರ್ಕ ಪಡೆದುಕೊಂಡವರಿಗೆ ದಿನಕ್ಕೆ 4 ರೂಪಾಯಿಯಂತೆ ವರ್ಷಕ್ಕೆ 1440 ರೂಪಾಯಿಗಳ ಕಂದಾಯವನ್ನು ನಿಗದಿಪಡಿಸಲಾಗಿದೆ. ಕನಿಷ್ಠ 15ರಿಂದ 20 ಸಾವಿರ



ರೂಪಾಯಿಗಳಷ್ಟು ನೀರಿನ ಕಂದಾಯವನ್ನು ಪಾವತಿಸದೇ ಬಾಕಿ ಉಳಿಸಿಕೊಂಡಿರುವವರಿಂದ ಕಟ್ಟುನಿಟ್ಟಿನ ವಸೂಲಾತಿಗೆ ಜಿಲ್ಲಾಧಿಕಾರಿ ಹಾಗೂ ಮಡಿಕೇರಿ ನಗರಸಭೆ ಪೌರಾಯುಕ್ತರ ಆದೇಶ ನೀಡಿದ ಹಿನ್ನೆಲೆಯಲ್ಲಿ ನೀರಿನ ಸಂಪರ್ಕವನ್ನು ಕಡಿತಗೊಳಿಸಲಾಗುತ್ತಿದೆ ಎಂದರು.

ರೈಲು ತಡೆಗೆ ಯತ್ನಿಸಿದ ರೈತರ ಬಂಧನ, ಬಿಡುಗಡೆ



ಮಹದೇವಸ್ವಾಮಿ ನೇತೃತ್ವದಲ್ಲಿ ನಗರದ ರೈಲ್ವೆ ನಿಲ್ದಾಣದಲ್ಲಿ ರೈಲು ತಡೆಗೆ ಯತ್ನಿಸಿದ ರೈತರನ್ನು ಪೊಲೀಸರು ಬಂಧಿಸುತ್ತಿರುವುದು.

ಚಾಮರಾಜನಗರ, ಮಾ.1– ಪಂಜಾಬ್, ಹರಿಯಾಣ ರಾಜ್ಯಗಳಲ್ಲಿ ರೈತರ ಮೇಲೆ ಕೇಂದ್ರ ಸರ್ಕಾರ ಪೊಲೀಸ್ ದೌರ್ಜನ್ಯ ನಡೆಸುತ್ತಿರುವುದನ್ನು ಖಂಡಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಜಿಲ್ಲಾ ಕಾರ್ಯದರ್ಶಿ ಎಚ್. ಮೂಕಹಳ್ಳಿ ಮಹದೇವಸ್ವಾಮಿ ಅವರ ನೇತೃತ್ವದಲ್ಲಿ ನಗರದ ರೈಲ್ವೆ ನಿಲ್ದಾಣದಲ್ಲಿ ರೈಲು ತಡೆಗೆ ಯತ್ನಿಸಿದ್ದು, ರೈತರನ್ನು ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದರು.

ನಗರದ ರೈಲ್ವೆ ನಿಲ್ದಾಣದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರೈಲು ತಡೆದು ಪ್ರತಿಭಟನೆ ನಡೆಸಲು ಮುಂದಾದಾಗ ಸ್ಥಳದಲ್ಲಿದ್ದ ಪೊಲೀಸರು ಪ್ರತಿಭಟನಾಕಾರರ ಮನವೊಲಿಸಲು ಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಬಳಿಕ ಪೊಲೀಸರು ಪ್ರತಿಭಟನಾನಿರತ ರೈತರನ್ನು ಬಂಧಿಸಿ, ಬಿಡುಗಡೆ ಮಾಡಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಜಿಲ್ಲಾ ಕಾರ್ಯದರ್ಶಿ ಎಚ್. ಮೂಕಹಳ್ಳಿ ಮಹದೇವಸ್ವಾಮಿ ಮಾತನಾಡಿ, ಕೇಂದ್ರ ಸರ್ಕಾರಕ್ಕೆ ಬಂಡವಾಳಶಾಹಿಗಳ ಸಾಲ ಮನ್ನಾ ಮಾಡಲು ಹೆಚ್ಚಿನ ಕಾಳಜಿ ಇರುತ್ತದೆ. ಆದರೆ, ರೈತರ ಸಾಲ ಮನ್ನಾ ವಿಚಾರ, ಸ್ವಾಮಿನಾಥನ್ ವರದಿ, ಬೆಂಬಲ ಬೆಲೆ, ರೈತರಿಗೆ ಪಿಂಚಣಿ ನೀಡುವ ಯೋಜನೆ, ಬೆಳೆ ವಿಮೆ ಪದ್ಧತಿ, ಪ್ರಾಣತ್ಯಾಗ ಮಾಡಿದ 750 ರೈತ ಕುಟುಂಬಕ್ಕೆ ಸರ್ಕಾರದ ನೆರವು ಸೇರಿದಂತೆ ಇತರೆ ಕ್ರಮಗಳ ಕುರಿತು ಕೇಂದ್ರ ಸರ್ಕಾರ ವಿಫಲವಾಗಿದೆ ಎಂದರು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾ ಉಪಾಧ್ಯಕ್ಷ ಶಿವಮೂರ್ತಿ, ಕಾರ್ಯಾಧ್ಯಕ್ಷ ಉಡಿಗಾಲ ರೇವಣ್ಣ, ತಾಲೂಕು ಅಧ್ಯಕ್ಷ ಸತೀಶ್, ಕಾರ್ಯದರ್ಶಿ ಸುಂದ್ರಪ್ಪ, ಉಪಾಧ್ಯಕ್ಷ ಶಿವಸ್ವಾಮಿ, ಯಳಂದೂರು ತಾಲೂಕು ಅಧ್ಯಕ್ಷವ ಷಡಕ್ಷರಿ, ಕೊಳ್ಳೇಗಾಲ ಅಧ್ಯಕ್ಷ ಇಂದುವಾಡಿ ಮಾದೇಶ್, ಉಡಿಗಾಲ ರಘು, ನಾಗಣ್ಣ, ಮಹೇಶ್, ವೀರನಪುರ ನವೀನ್, ಗುರುಪ್ರಸಾದ್ ಇತರರು ಭಾಗವಹಿಸಿದ್ದರು.

ಶ್ರೀನಿವಾಸಪ್ರಸಾದ್ ಕುಟುಂಬ ಹೊರತು ಬೇರೆ ಯಾರಿಗಾದರು ಟಿಕೆಟ್ ನೀಡಿ

ಜಿಲ್ಲಾ ಪರಿಷತ್ ಮಾಜಿ ಸದಸ್ಯ ಎಚ್.ಸಿ.ಲಕ್ಷ್ಮಣ್ ಆಗ್ರಹ

ಚಾಮರಾಜನಗರ, ಮಾ.1– ಸಂಸದ ವಿ.ಶ್ರೀನಿವಾಸಪ್ರಸಾದ್ ಕುಟುಂಬ ಹೊರತುಪಡಿಸಿ ಬೇರೆ ಯಾರಿಗಾದರು ಹೊಸಬರಿಗೆ ಟಿಕೆಟ್ ನೀಡಿ ಎಂದು ಬಿಜೆಪಿ ವರಿಷ್ಠರನ್ನು ಜಿಲ್ಲಾ ಪರಿಷತ್ ಮಾಜಿ ಸದಸ್ಯ ಎಚ್.ಸಿ. ಲಕ್ಷ್ಮಣ್ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ತಾನು ಎಚ್.ಡಿ.ಕೋಟೆ ಮಾಜಿ ಶಾಸಕ ಲೇ.ಚಲುವಯ್ಯನವರ ಪುತ್ರರಾಗಿದ್ದು, 2 ಬಾರಿ ಜಿಲ್ಲಾ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದು, ರಾಜಕೀಯ ಅನುಭವವುಳ್ಳವನಾಗಿದ್ದೇನೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಮೀಸಲು ಕ್ಷೇತ್ರದಿಂದ ಬಿಜೆಪಿ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ ಪಕ್ಷದ ವರಿಷ್ಠರು ನನಗೊಂದು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

2011 ರಲ್ಲಿ ಬಿಜೆಪಿ ಸೇರ್ಪಡೆಯಾಗಿದ್ದು, ಮೈಸೂರು ಜಿಲ್ಲಾ ಬಿಜೆಪಿ ಎಸ್‌ಸಿ ಮೋರ್ಚಾದ ಅಧ್ಯಕ್ಷರಾಗಿದ್ದು ಸೇವೆ ಸಲ್ಲಿಸಿದ್ದೇನೆ. ಈಗ ಪಕ್ಷದಲ್ಲಿ ನಿರಂತರವಾಗಿದ್ದು, ನನ್ನ ಜೊತೆಯಲ್ಲಿ ಮಾಜಿ ಶಾಸಕ ಎಸ್.ಬಾಲರಾಜು, ಕಾಂಪೋಸ್ಟ್ ನಿಗಮ ಮಾಜಿ ಅಧ್ಯಕ್ಷ ಎಸ್. ಮಹದೇವಯ್ಯ, ಬಿಜೆಪಿ ಮುಖಂಡ ವೆಂಕಟರಮಣಸ್ವಾಮಿ (ಪಾಪು) ಆಕಾಂಕ್ಷಿಯಾಗಿದ್ದಾರೆ. ನಮ್ಮಲ್ಲಿ ಯಾರಿಗಾದರೊಬ್ಬರಿಗೆ



ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪರಿಷತ್ ಮಾಜಿ ಸದಸ್ಯ ಎಚ್.ಸಿ.ಲಕ್ಷ್ಮಣ್ ಮಾತನಾಡಿದರು.

ಅವಕಾಶ ಮಾಡಿಕೊಡಬೇಕು. ಯಾವುದೇ ಕಾರಣಕ್ಕೂ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರ ಕುಟುಂಬಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ಪಕ್ಷದ ವರಿಷ್ಠರಲ್ಲಿ ಒತ್ತಾಯಿಸಿದರು.

ಕ್ಷೇತ್ರಕ್ಕೆ ವಿ.ಶ್ರೀನಿವಾಸಪ್ರಸಾದ್ ಕೊಡುಗೆ ಏನು? : ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಸಂಸದ ವಿ. ಶ್ರೀನಿವಾಸಪ್ರಸಾದ್ ಅವರ ಕೊಡುಗೆ ಏನು? ವೈಯುಕ್ತಿವಾಗಿ ಅವರಿಂದ ಪಕ್ಷಕ್ಕೆ ಏನು ಸಹಾಯವಾಗಿದೇ? ನಾವು ನಮ್ಮವರು ಎಂದು ಕೆಲವು ತಪ್ಪುಗಳನ್ನು ಮುಚ್ಚಿಕೊಂಡು ಬಂದೆವು. ಸಂಸತ್‌ನಲ್ಲಿ ಶೇ.32 ರಷ್ಟು ಹಾಜರಾತಿ, ಸಂಸತ್ ಹೋಗಿ ಪ್ರಶ್ನೆ ಮಾಡಿರುವುದು ಶೂನ್ಯ. ಕಳೆದ ಚುನಾವಣೆಯಲ್ಲಿ ನನ್ನಂತಹ ಸಾವಿರಾರು ಮುಖಂಡರು ಪ್ರಸಾದ್ ಅವರಿಗೆ ಮತ ಕೇಳಿ ಗೆಲ್ಲಿಸಿದ್ದೇನೆ. ಆದರೆ ಯಾವುದೇ ಕಾರ್ಯಕರ್ತರನ್ನು ಯಾವುದೇ ಹುದ್ದೆಗೂ ನಾಮನಿರ್ದೇಶನ ಮಾಡಲಿಲ್ಲ. ಲೆಟರ್ ಕೇಳಲು ಹೋದರೆ ನನಗಿಂತ ಚಿಕ್ಕವ ಅವರಿಗೆ ನಾನು ಲೆಟರ್ ಕೊಡಕ್ಕೆ ಆಗುತ್ತಾ ಎಂದು ಹೇಳುವ ಮೂಲಕ ಸಣ್ಣಪುಟ್ಟ ಮುಖಂಡರು ಮನೆ ಹತ್ತಿರ ಹೋಗದಂತೆ ಮಾಡಿದರು ಎಂದರು.

ಮನೆಯಲ್ಲಿ ನಡೆಯುವ ಭ್ರಷ್ಟಚಾರದ ವಿರುದ್ಧ ಚಕಾರವೆತ್ತಿಲ್ಲ: ಶ್ರೀನಿವಾಸಪ್ರಸಾದ್ ಪ್ರಾಮಾಣಿಕರು, ಕಳಂಕ ರಹಿತ ರಾಜಕಾರಣಿ ಅದರಲ್ಲಿ ಎರಡು ಮಾತಿಲ್ಲ. ಆದರೆ ಅವರ ಮನೆಯಲ್ಲಿ ನಡೆಯುವ ಭ್ರಷ್ಟಾಚಾರದ ವಿರುದ್ಧ ಪ್ರಸಾದ್ ಅವರು ಚಕಾರವೆತ್ತಿಲ್ಲ. ಅವರ ಅಳಿಯ ಹರ್ಷವರ್ಧನ್ ನಂಜನಗೂಡಿನಲ್ಲಿ ರವಿ ಎಂಬ ವ್ಯಕ್ತಿ ಬಿಟ್ಟುಕೊಂಡು ಸಂಸದರಿಗೆ ಬರುವ ಕಾಮಗಾರಿಗಳ ಹರಾಜು ಮಾಡಿಸುತ್ತಿದ್ದಾರೆ ಆರೋಪಿಸಿದರು.

ವರಸೆ ಬದಲಾಯಿಸಿದ ಪ್ರಸಾದ್: ಕಳೆದ 2 ತಿಂಗಳ ಹಿಂದೆ ರಾಜಕೀಯ ನಿವೃತ್ತಿ ಬಯಸುವುದಾಗಿ ಘೋಷಿಸಿ ತಮ್ಮ ಮನೆಯವರು ಯಾರೂ ನಿಲ್ಲಲ್ಲ. ನಾನು ಯಾರ ಪರ ಪ್ರಚಾರ ಮಾಡಲ್ಲ ಎಂದವರು ವರಸೆ ಬದಲಾಯಿಸಿ ಚುನಾವಣೆಯ ಹೊಸ್ತಿಲಲ್ಲಿ ಅಳಿಯಂದಿರಲ್ಲಿ ಯಾವುದೇ ಭಿನ್ನಮತ ಇಲ್ಲ ಅವರು ಕೂಡ ಎಲ್ಲರಂತೆ ಆಕಾಂಕ್ಷಿಗಳಾಗಿದ್ದಾರೆ ಟಿಕೆಟ್ ಕೊಡುವುದು ಪಕ್ಷದ ವರಿಷ್ಠರಿಗೆ ಬಿಟ್ಟದ್ದು, ಮೋಹನ್‌ಗೆ ಟಿಕೆಟ್ ನೀಡಿದರೆ ನೀವೆಲ್ಲರೂ ಕೆಲಸ ಮಾಡಬೇಕು ಎಂದು ಹೇಳಿಕೆ ನೀಡುವುದು ಸರಿಯಲ್ಲ. ಕಾರ್ಯಕರ್ತರು ನೀವು ಹೇಳಿದಂತೆ ಕೇಳುವ ಸ್ಥಿತಿಯಲ್ಲಿ ಇಲ್ಲ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಮಲ್ಲದೇವರು, ಶುಭೋದಯ ಸಿದ್ದರಾಜು ಹಾಜರಿದ್ದರು.

ಜಮೀನಿಗೆ ನುಗಿದ್ದ ಜಾನುವಾರು ಮೇಲೆ ಮಚ್ಚಿನಿಂದ ಹಲ್ಲೆ

ಚಾಮರಾಜನಗರ: ಆಕಸ್ಮಿಕವಾಗಿ ಜಮೀನಿಗೆ ನುಗ್ಗಿ ಜೋಳದ ಫಸಲನ್ನು ಮೇಯುತ್ತಿದ್ದ ಜಾನುವಾರುಗಳ ಮೇಲೆ ಕೆಲವರು ಮಚ್ಚಿನಿಂದ ಹಲ್ಲೆ ನಡೆಸಿರುವ ಅಮಾನವೀಯ ಘಟನೆ ಜಿಲ್ಲೆಯ ಹನೂರು ತಾಲೂಕಿನ ಒಡೆಯರಪಾಳ್ಯ ಟಿಬೆಟಿಯನ್ ಕ್ಯಾಂಪಿನ ಡಿ ವಿಲೇಜ್‌ನಲ್ಲಿ ನಡೆದಿದೆ.

ಘಟನೆಯಿಂದ 9 ಹಸು, ಕರು, ಎತ್ತುಗಳಿಗೆ ತೀವ್ರ ಗಾಯವಾಗಿದ್ದು, ಈ ಸಂಬಂಧ ಜಾನುವಾರುಗಳ ಮಾಲೀಕ ಗುಂಡಿಮಾಳ ಗ್ರಾಮದ ಸಿದ್ದಪ್ಪ ಟಿಬೆಟಿಯನ್ ಕ್ಯಾಂಪ್ ಡಿ ವಿಲೇಜ್‌ನ ಸಿಟು ಮತ್ತಿತರರ ವಿರುದ್ಧ ಹನೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಗುಂಡಿಮಾಳ ಗ್ರಾಮದ ಸಿದ್ದಪ್ಪ ಅವರು ಒಟ್ಟು 20 ಹಸು, ಕರು, ಎತ್ತುಗಳನ್ನು ಹೊಂದಿದ್ದಾರೆ. ಮಳೆಬಂದು ಜಮೀನಿನಲ್ಲಿ ಬೆಳೆ ಇರುವ ಸಂದರ್ಭದಲ್ಲಿ ತಮ್ಮ ಜಾನುವಾರುಗಳ ಜೊತೆ ಹೋಗಿ ಮೇಯಿಸಿಕೊಂಡು ಬರುತ್ತಿದ್ದರು. ಈಗ ಬೇಸಿಗೆಯಾಗಿದ್ದು ಬೆಳೆಗಳಿಲ್ಲದ ಕಾರಣ ತಮ್ಮ ದನ–ಕರುಗಳನ್ನು ಟಿಬೆಟಿಯನ್

ಹನೂರು ಬಳಿ ಅಮಾನುಷ ಘಟನೆ

ಕ್ಯಾಂಪ್ ಮತ್ತು ಜಮೀನುಗಳ ಆಸುಪಾಸು ಮೇಯಲು ಬಿಡುತ್ತಿದ್ದೇನೆ. ಜಾನುವಾರುಗಳು ಮೇಯ್ದುಕೊಂಡು ಸಂಜೆ ವೇಳೆ ಮನೆಗೆ ಬರುತ್ತಿದ್ದವು ಎಂದು ರೈತ ತಿಳಿಸಿದರು.

ಬುಧವಾರ ಮಧ್ಯಾಹ್ನ ಜಾನುವಾರು ಮೇಯ್ದುಕೊಂಡು ಆಕಸ್ಮಿಕವಾಗಿ ಸಿಟು ಎಂಬುವವರ ಜಮೀನಿಗೆ ನುಗ್ಗಿದೆ. ಇದನ್ನೇ ನೆಪ ಮಾಡಿಕೊಂಡು ನಮ್ಮ ದನ ಕರುಗಳ ಮೇಲೆ ಉದ್ದೇಶಪೂರ್ವಕವಾಗಿ ಸಿಟು ಮತ್ತಿತರರು ಮಚ್ಚಿನಿಂದ ಹಲ್ಲೆ ನಡೆಸಿದ್ದಾರೆ. ಇದರಿಂದ ದನ ಕರುಗಳ ಕಾಲುಗಳಿಗೆ, ಬಾಲಕ್ಕೆ, ಬೆನ್ನಿಗೆ ಗಾಯವಾಗಿದೆ. ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಿದ್ದಪ್ಪ ಠಾಣೆಯಲ್ಲಿ ದೂರು ನೀಡಿದ್ದಾರೆ. ಜಾನುವಾರುಗಳ ಮೇಲೆ ಹೀಗೆ ಮಚ್ಚಿನಿಂದ ಹಲ್ಲೆ ನಡೆಸಿರುವ ಘಟನೆಯಿಂದ ಗುಂಡಿಮಾಳ ಸೇರಿದಂತೆ ಸುತ್ತಮುತ್ತಲ ರೈತರು ಆಕ್ರೋಶಗೊಂಡಿದ್ದಾರೆ.

ಚಾ.ನಗರದಲ್ಲಿ ಕೆ.ಶಿವರಾಂ ಅವರಿಗೆ ಶ್ರದ್ಧಾಂಜಲಿ

ಚಾಮರಾಜನಗರ: ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ ಅವರಿಗೆ ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸಭೆಯಲ್ಲಿ ಕೆ.ಶಿವರಾಂ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ್ದ ಪಕ್ಷದ ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷ ಮೂಡಹಳ್ಳಿ ಮೂರ್ತಿ, ಕೆ.ಶಿವರಾಂ ಅವರ ಗುಣಗಾನ ಮಾಡಿದರು.

ಬಿಜೆಪಿ ಎಸ್‌ಟಿ ಮೋರ್ಚಾದ ಜಿಲ್ಲಾಧ್ಯಕ್ಷ ಚಂದ್ರಶೇಖರ್, ಶಿವು ರಾಮಸಮುದ್ರ, ಚನ್ನಬಸಪ್ಪ, ಪರಮೇಶ್, ನಗರಸಭಾ ಮಾಜಿ ಸದಸ್ಯ ಬಸವರಾಜು, ಪಿ.ರಂಗಸ್ವಾಮಿ ಇತರರು ಭಾಗವಹಿಸಿದ್ದರು.

ಕೆ.ಶಿವರಾಂ ಅವರಿಗೆ ಛಲವಾದಿ ಮಹಾಸಭಾದ ಜಿಲ್ಲಾ ಘಟಕ ಹಾಗೂ ಅಭಿಮಾನಿಗಳ ವತಿಯಿಂದ ನಗರದ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪ್ರಗತಿಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಎಂ.ಕೃಷ್ಣಮೂರ್ತಿ ಮಾತನಾಡಿ, ಶಿವರಾಂ ಅವರು ರಾಜ್ಯದಲ್ಲಿ ಐಎಎಸ್ ಅಧಿಕಾರಿಯಾಗಿ ಹಿಂದುಳಿದ ವರ್ಗಗಳು, ಎಸ್‌ಸಿ, ಎಸ್‌ಟಿ ಜನರ ಕಲ್ಯಾಣಕ್ಕಾಗಿ ಅನೇಕ



ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ ಅವರಿಗೆ ಚಾಮರಾಜನಗರದಲ್ಲಿ ಶುಕ್ರವಾರ ಛಲವಾದಿ ಮಹಾಸಭಾದಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಯೋಜನೆಗಳನ್ನು ಜಾರಿ ಮಾಡಿದ್ದರು. ರಾಜ್ಯದಲ್ಲಿ ಲಕ್ಷಾಂತರ ಕುಟುಂಬಗಳು ಅವರ ಕೆ.ಶಿವರಾಂ ಅವರ ಹೆಸರಿನಲ್ಲಿ ಬದುಕುತ್ತಿದ್ದಾರೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ.ಮಂಜುನಾಥ್, ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಕೆ.ಎಂ.ನಾಗರಾಜು, ಡಿಎಸ್‌ಎಸ್ ಜಿಲ್ಲಾ ಸಂಯೋಜಕ ಸಿ.ಎಂ.ಶಿವಣ್ಣ, ಗಾಯಕ ಸಿ.ಎಂ.ನರಸಿಂಹಮೂರ್ತಿ, ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿದರು.

ಸಭೆಯಲ್ಲಿ ಛಲವಾದಿ ಮಹಾಸಭಾದ ಕೆ.ಆರ್.ನಾರಾಯಣ್, ರಮೇಶ್, ರಾಜು, ಸಿ.ಎನ್.ಸಂಪತ್‌ಕುಮಾರ್, ಶಂಕರ್, ವಾಸು, ರಾಮಸಮುದ್ರಬಾಬು, ಮೂರ್ತಿ, ಅಶೋಕ್ ಇತರರು ಭಾಗವಹಿಸಿದ್ದರು.

ಕಾರ್ಖಾನೆ ಬಸ್ ಮಗುಚಿ 38 ಮಂದಿಗೆ ಗಾಯ

ಚಾಮರಾಜನಗರ: ನಗರದ ಹೊರವಲಯದ ಕೆಲ್ಲಂಬಳ್ಳಿ ಬದನಗುಪ್ಪೆ ಕೈಗಾರಿಕಾ ಪ್ರದೇಶದಲ್ಲಿ ಕಲರ್ ಟೋನ್ ಕಾರ್ಖಾನೆಯ ನೌಕರರನ್ನು ಕರೆದೊಯ್ಯುತ್ತಿದ್ದ ಬಸ್ ಶುಕ್ರವಾರ ಮಧ್ಯಾಹ್ನ ಮಗುಚಿ ಬಿದ್ದುದರಿಂದ 38 ಮಂದಿಗೆ ಗಾಯಗಳಾಗಿವೆ. ಅದೃಷ್ಟವಶಾತ್ ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ವಿಷಯ ತಿಳಿಯುತ್ತಿದ್ದಂತೆಯೇ ಚಾಮರಾಜನಗರ ಗ್ರಾಮಾಂತರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೈಗಾರಿಕಾ ಪ್ರದೇಶದ ತಿರುವಿನ ಬಳಿ ಚಾಲಕನ ನಿಯಂತ್ರಣ ತಪ್ಪಿ ಬಸ್ ಮಗುಚಿದೆ. ಗಾಯಾಳುಗಳಿಗೆ ಮರಿಯಲಾದ ಬಸವ ರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದ್ದು, ಯಾರ ಪ್ರಾಣಕ್ಕೂ ಅಪಾಯವಿಲ್ಲ ಎಂದು ಚಾಮರಾಜನಗರ ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ರವಿಶಂಕರ್ ತಿಳಿಸಿದರು.

ಶಿವಮಲ್ಲಪ್ಪ ನಿಧನ



ಚಾಮರಾಜನಗರ: ತಾಲೂಕಿನ ಮಾದಾಪುರ ಗ್ರಾಮದ ನಿವಾಸಿ, ಎಪಿಎಂಸಿ ಮಾಜಿ ಅಧ್ಯಕ್ಷ ಶಿವಮಲ್ಲಪ್ಪ(79) ಶುಕ್ರವಾರ ಬೆಳಗಿನ ಜಾವ ನಿಧನರಾದರು. ಮೃತರು ಪತ್ನಿ ಅನ್ನಪೂರ್ಣ (ಪಚ್ಚಮ್ಮ) ಮತ್ತು ಪುತ್ರರಾದ ನಂದಿ ಭವನ ಪಾಲುದಾರರಾದ ದಿನೇಶ್, ಶಂಕರ್ ಹಾಗೂ ಪುತ್ರಿ ರೂಪಾ ಮಹದೇವಪ್ರಸಾದ್ ಅವರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಸಂಜೆ ಸ್ವಗ್ರಾಮ ಮಾದಾಪುರದಲ್ಲಿ ನಡೆಯಿತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಹೂಟಗಳ್ಳಿಯಲ್ಲಿರುವ ಕಾರ್ಖಾನೆಗೆ ಶಿಫ್ಟ್‌ಗಳಲ್ಲಿ ಕೆಲಸ ಮಾಡಲು ಸಹಾಯಕರು ಬೇಕಾಗಿದ್ದಾರೆ. ಈ ತಕ್ಷಣ ಕೆಳಕಂಡ ಫೋನ್‌ಗೆ ಸಂಪರ್ಕಿಸಿ: ಸಿದ್ದರಾಜು
9606262809

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಪುರುಷರು/ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 12000/–
8892258814

ಬೇಕಾಗಿದ್ದಾರೆ
ಮೆನ್ಸ್ ಹೇರ್ ಡ್ರೆಸ್ಸರ್ಸ್ –2 ಸಂಬಳ ಅಥವಾ ಪೀಸ್‌ವರ್ಕ್ ರೂಮ್ ಸೌಲಭ್ಯವಿದೆ ಸಿದ್ದಾರ್ಥ ನಗರ, ಮೈಸೂರು
7829567878

ಬೇಕಾಗಿದ್ದಾರೆ
ಹೌಸ್ ಕೀಪಿಂಗ್ ಕೆಲಸ (ಪುರುಷರು ಮಾತ್ರ) 10 ಜನ ಸಿಬ್ಬಂದಿ (ಗುತ್ತಿಗೆಗೆ) ಸರ್ಕಾರಿ ಕಛೇರಿಗೆ (ನಜರ್‌ಬಾದ್ / ಸುತ್ತಮುತ್ತ ಆದ್ಯತೆ) (ವಯಸ್ಸು 25 ರಿಂದ 55) ಸಂಬಳ ದಿನಕ್ಕೆ 500/– (ಇತರೆ ಸೌಲಭ್ಯವಿದೆ.
9900749104
9036745292

30X40 DATTAGALLI
MUDA,East Facing Site for Sale,Dattagalli, Price - 88 Lakhs Near Mangalya Sangam Choultry
8660105902

SITE FOR SALE
60x40 North face, site for sale Srirampura, SP Enclave, near Ring Road, fully constructed layout. Ready for construction. Direct owner. *Brokers Excuse*
Mob: 9964205255

SITE FOR SALE
30x40 East Face
Gaddige Road, Bogadi.
Mob: 9740088990

ZED MSMEನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ
ಫೀಲ್ಡ್ ಸರ್ವೆ, ಟೀಮ್ ಲೀಡರ್, ಆಫೀಸ್ ಎಕ್ಸಿಕ್ಯೂಟಿವ್ (ಮಹಿಳೆ) ತಕ್ಷಣ ಬೇಕಾಗಿದ್ದಾರೆ. ಕೆಲಸದ ಸ್ಥಳ: ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಯಾವುದೇ ರೀತಿಯ ಶುಲ್ಕ ಇರುವುದಿಲ್ಲ.
9686574998

ಬೇಕಾಗಿದ್ದಾರೆ
ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ. Minimum Qualification : PUC ಕೆಲಸದ ವೇಳೆ : 10 am to 8 pm ವಿಚಾರಿಸಿರಿ: ಚೇತನ ಬುಕ್ ಹೌಸ್ ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು

ಸ್ಟಾರ್ ಮ್ಯಾರೇಜಸ್
ಎಲ್ಲಾ ಜನಾಂಗದ ವಧು–ವರರು, ವಿಚ್ಛೇದಿತರು ಹಾಗೂ ವಿಧವಾ–ವಿಧವೆಯರು ಸಂಪರ್ಕಿಸಿ:
8105747339
8197607559

SITES FOR SALE
30x40, 30x50 MUDA APPROVED NEAR RING ROAD SRIRAMPURA, MYSORE
8296832513

2.5 BHK HOME INTERIORS @ ₹ 2.5 Lacs*
Home Space Mart
TALK TO OUR DESIGN TEAM ✆ 8197310113

REQUIRED
For a Reputed Firm in Hebbal Industrial Estate, Mysore.
1. OFFICE ASSISTANT(Female) - 1No
Qualification : B.Com., B.Sc, M.Com
Experience : Minimum 1-2years
Excellent Communication in Kannada English, Hindi. Salary - Rs. 15,000/-
99720 29007

Job Vacancy
MAAN CERAMIC *Tile showroom*
Telecalling for female
Near Vidhyaranyapuram, Opp. NIE COLLEGE, Mysore.
9620967801, 9113998991

ಶ್ರೀ ಗೌರಿಶಂಕರ ಟ್ರಾವೆಲ್ಸ್
11–4–24 (4 ದಿನ) ಬಾದಾಮಿ, ಕೂಡಲಸಂಗಮ, ಹಂಪಿ
26–4–24 (6ದಿನ) ಆಯೋಧ್ಯ, ಕಾಶಿ, ಗಯ
30–5–24 (11ದಿನ) ಆಯೋಧ್ಯ, ಕಾಶಿ, ನೇಪಾಳ, ಮುಕ್ತಿನಾಥ್, ಲುಂಬಿನಿ
15–7–24 (11 ದಿನ) ವೈಷ್ಣೋದೇವಿ, ಅಮರ್‌ನಾಥ್, ಶ್ರೀನಗರ, ಗುಲ್‌ಮಾರ್ಗ (ವಿಮಾನ, ಬಸ್, ಊಟ ರೂಂ)
9620002114

SITES for SALE JP Nagar Ring Road
20 x 30 - 17 Lakhs, 30 x 40 - 33 Lakhs, Near Gurur Bus Stop, Ramabainagar,Mysore.
DTCP approved (Corporation limits) 1.5 Kms from JP Nagar Ring Road
8660105902

S.K.CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೆಬೇಡ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elivation ಸಹಿತ ಎಲ್ಲಾ Construction ಸರ್ವಿಸ್ ಮಾಡಿ ಕೊಡಲಾಗುತ್ತದೆ.
9620528490

ತಕ್ಷಣ ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ Full Time / Part Time ಹೆಸರಾಂತ MNC ಕಂಪನಿ, ಆಫೀಸ್ ಕೆಲಸಕ್ಕೆ (Receptionist, Data Entry Account) ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary + OT (Food and room Free) 18800/- 68000/-
9964499846
9902246741

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿ ಇರುವ ಸಸ್ಯಾಹಾರಿ ಹೋಟೆಲ್‌ನಲ್ಲಿ ಕೆಲಸ ಮಾಡಲು ಸರ್ವಿಸ್ ಹುಡುಗಿಯರು ಮತ್ತು ಕ್ಯಾಷಿಯರ್‌ಗೆ ಹುಡುಗಿಯರು ಬೇಕು. ಉತ್ತಮವಾದ ಸಂಬಳದ ಜೊತೆ ಊಟ, ವಸತಿ, ಇ ಎಸ್ ಐ ಸೌಲಭ್ಯ ನೀಡಲಾಗುತ್ತದೆ. ಸಂಬಳ: 12000 ಯಿಂದ 20000 ವರೆಗೆ
8892088999

ಸಾಲ / LOANS
* House / Site Purchase
* Construction Loan
* Mortgage Loan
Loans for MUDA, Corporation & Revenue, 11A & 11B Property.
77605-98705

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8861401315

WANTED
A reputed lodge in the heart of the city is looking for a reception role, Those having previous experience & freshers also can apply. (Having computer & hotel industry knowledge preferred).
9663427888, 9663747452

RS CONSTRUCTION Engineers & Contractors
ನಿಮ್ಮ ಕನಸಿನ ಮನೆಯನ್ನು ಉತ್ತಮ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ ಇಂದೇ ಸಂಪರ್ಕಿಸಿ
9538575009
7019151884

ಹೋಂ ನರ್ಸ್ ಕೆಲಸಕ್ಕೆ
ವೃದ್ಧರನ್ನು ಆರೈಕೆ ಮಾಡಲು ಪುರುಷ ಮಹಿಳಾ ಹೋಂ ನರ್ಸ್‌ಗಳು ತಕ್ಷಣ ಬೇಕಾಗಿದ್ದಾರೆ. ಊಟ, ವಸತಿಯೊಂದಿಗೆ 15 ರಿಂದ 18 ಸಾವಿರ ಸಂಬಳ ದೊರೆಯುತ್ತದೆ.
9916905188
(ಅನುಭವವಿಲ್ಲದವರಿಗೆ ತರಬೇತಿ ನೀಡಲಾಗುವುದು)

ಆದಿ ಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ
BA, BSc, B.Com, MA, MSc, M.Com, M.Sc, MBA, MBBS, BE, M.Tech, B.Ed, D.Ed, M.Ed, ವಿವಾಹನೊಂದನೆಗೆ ಕರೆ ಮಾಡಿ (2nd Mrriege Also)
91647-43059

ಬೇಕಾಗಿದ್ದಾರೆ
ಕಾರ್ಖಾನೆಯಲ್ಲಿ General Shiftನಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಈ ಕೆಳಕಂಡ ಮೊಬೈಲ್ ಫೋನ್‌ಗೆ ಸಂಪರ್ಕಿಸಿ:
96060 03196



NCVTE New Delhi approved courses
• 3 MONTHS CERTIFICATION COURSE
• 6 MONTHS DIPLOMA COURSE
• 1 YEAR ADVANCE DIPLOMA COURSE
ADMISSION OPEN
*HOSTEL AND PG AVAILABLE
Alpha School of Fashion Design No.56/2, Manandavadi Road, Near Ring Road Signal Junction, Srirampura, Mysore
782 993 7469

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವಾಭಾವಿಕ ಬೆಲುಯ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

REQUIRED
For a Reputed Firm in Hebbal Industrial Estate, Mysore.
1. MARKETING EXECUTIVE(MALE) - 3 Nos
Qualification:ITI/Diploma/Any Degree
Experience: Minimum 1-2years/ Fresher also Can apply. Excellent Communication in Kannada/English/Hindi.
Salary :- Rs.20,000 - Rs.25,000/-
99720 29007

ತಕ್ಷಣ ಬೇಕಾಗಿದ್ದಾರೆ
ಕಡಕೊಳ ನಂಜನಗೂಡು ಏರಿಯಾದಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್ ಮತ್ತು ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು ಸಂಬಳ: 25000/- 12 Hrs + W/o ESI & PF ಸೌಲಭ್ಯವಿರುತ್ತದೆ.
9538567819
8310066229

SITE FOR SALE
40x45 East North Corner Police Layout Near Ring Road (Broker Excuse)
9844998724

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

Sudarshan Saur SOLAR WATER HEATER


SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
6364308851, 7892046990

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM® 10yrs WARRANTY
ISO 9001:2015 Certified Depot
CALL 99012 91267 98454 26862

SITE FOR SALE
30x40 DTCP Approved (Corporation Limit) Nirman Promoters, Nirmaan Nagar. Mosambayanahalli Road, Near Kalpavruksha Raghavendra Swamy Temple Chikkali, T.Narasipura Road, Mysore. Rs.1850 per sqrt
9916939424

SITE FOR SALE
Vidya Nagar Layout 30x40, 30x50 & Add Sites Bulk Sites & Bank Loan Available Attached to Srirangapatna Kushalnagar Express Highway Service Road, Yelawala KHB Road, Yelachahalli, Mysore
9141512156
8494972156

SITE FOR SALE
40x60 Site for Sale
New Khanta Arus Road, Bapuji Layout (Near Dattagalli). *Call*
Mob: 9880273834

Pre-University Layout
KHB ಕೆಂಚಲಗೂಡು ಪಕ್ಕದ ಲೇಔಟ್ H.D. Kote Road, Mysore. Site No. 100, East face ಪೂರ್ವ ಮುಖ 30x40 MUDA ಖಾತೆ 27 Lakhs (Negotiable)
Contact: 7259135555

SITE FOR SALE
40x60 North, Opp. Park, Gaddige Road, Suvarna Nagar.
Call: 9880273834

New House for Sale
40x60 East facing, 4 bedrooms (all attached) at Vijayanagar 1st Stage, 1st Main, Mysore. Price: Rs. 3.6 Cr. (with registration). Slightly negotiable.
Mob: 98807 18980

ಹೊಸ ಮನೆ ಮಾರಾಟಕ್ಕಿದೆ
20x30 ಉತ್ತರ ದಿಕ್ಕು, GF + FF ರೈಲ್ವೆ ಲೇಔಟ್, ಜೆ.ಪಿ. ನಗರ, ಮೈಸೂರು.
9538956060, 8660108796

25X40 VIDYARANYAPURAM
Semi-Commercial Site, West South Corner Old Demolish House for Sale,Price - 76 Lakhs Near Apollo Pharmacy
8660105902

IMMEDIATELY WANTED
Office Boy, Car Driver Age 22-30 Yers above For Developer Office Vijayanagara 4th Stage
9900783098

ಮನೆ ಮಾರಾಟಕ್ಕಿದೆ
ದಟ್ಟಗಳ್ಳಿ (ಕನಕದಾಸನಗರ) 3ನೇ ಹಂತ, ಮೈಸೂರು 20x30 N/F & N/Door, 30 Ft. Road (good location), ground floor 2 BHK, First floor 2 BHK, near by Thriveni Super Market.
BROKERS EXCUSE
Mob: 9945428296

Office Space for Rent
Office Space for rent first floor 410 sq.fts, suitable for office, East face, 37/A, near 18th Cross, 2nd Main Road, Jayanagar, Mysore. Landmark, near to Iskcon.
9739762493, 7899380159

40x60 SBM, Bogadi
40x60,MUDA Approved West Facing Site for Sale, SBM D Block, Bogadi,Price - 1.20 Cr
8660105902

ಕಳೆದಿದೆ
ಅಂಕುರ್, #13/2, ಬುದ್ಧ ಮಾರ್ಗ, ಸಿದ್ದಾರ್ಥನಗರ, ಮೈಸೂರು, ನಮಗೆ ಸೇರಿದ ನಜರ್‌ಬಾದ್ ಮೊಹಲ್ಲಾ, EWS ಮನೆ ನಂ. 593/ಜಿ ನಿವೇಶನವನ್ನು ಹೊಂದಿರುವ ಸ್ವತ್ತಿನ ಟೈಟಲ್ ಡೀಡ್ ಪತ್ರ ದಿನಾಂಕ 29–2–2024ರಂದು ಸಿದ್ದಾರ್ಥ ನಗರದ ಜೆರಾಕ್ಸ್ ಅಂಗಡಿಯಲ್ಲಿ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 7676832408

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಮಾರುವವರು/ಕೊಳ್ಳುವವರು
40x60 ಸೈಟ್ 30x40 ಡ್ಯೂಪ್ಲೆಕ್ ಹೊಸಮನೆ 20x30 ಡ್ಯೂಪ್ಲೆಕ್ ಮನೆ ಸೈಟ್ – ಹಳೆಮನೆ– ಹೊಸಮನೆ–ಮಾರುವವರು– ಕೊಳ್ಳುವವರು ಸಂಪರ್ಕಿಸಿ:
9945042875

ಅನುಬಂಧ ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆ ಮಾಡಿ
6361740552

ತಕ್ಷಣ ಬೇಕಾಗಿದ್ದಾರೆ
ಬಲ್ಲಾಳ್ RTO ಕುವೆಂಪುನಗರ ವಿಜಯನಗರ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಯೋಮಿತಿ : 45 ವರ್ಷದೊಳಗೆ ಸಂಬಳ: 16500/- 26 days ESI & PF ಸೌಲಭ್ಯವಿರುತ್ತದೆ. ವಿದ್ಯಾರ್ಹತೆ : SSLC ಮೇಲ್ಪಟ್ಟು
9620777819
9620667819

ಬೇಕಾಗಿದ್ದಾರೆ
ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು–18 ರಿಂದ 45 ಸಂಬಳ: 16000+ ESI+PF =19000/- 8 hrs Duty ಹಾಗೂ Weekoff ಇರುತ್ತದೆ ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ ರಿಂಗ್ ರೋಡ್ ಮೈಸೂರು
9986874574

ಮನೆ ಬಾಡಿಗೆಗೆ ಇದೆ
2 ಬೆಡ್ ರೂಮ್ 40x60 ಮನೆ ಗ್ರೌಂಡ್ ಫ್ಲೋರ್ ಗಾಯಿತ್ರಿಪುರಂ, 2ನೇ ಹಂತ, 3ನೇ ಕ್ರಾಸ್, ಚರ್ಚ್ ರೋಡ್, ಮೈಸೂರು
6360777652

SHOP FOR RENT
Old Santhepet Near D.Devaraj Urs Road, Mysore Commercial Corner 3 Door Shop
9741428821

WANTED
STORE MANAGER EXPERIENCE REQUIRED MYSORE
9019323999

ಜಮೀನು ಮಾರಾಟಕ್ಕಿದೆ
10 ಗುಂಟೆ ಜಮೀನು ಶ್ರೀರಾಂಪುರ ರಿಂಗ್ ರಸ್ತೆಯಿಂದ 15 ಕಿ.ಮೀ ದೂರದಲ್ಲಿ 15 ಲಕ್ಷಗಳಿಗೆ ಮಾರಾಟಕ್ಕಿದೆ
Owner
7411110087

ಬೇಕಾಗಿದ್ದಾರೆ
JOBS ಮೈಸೂರು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಸಿ ಪೆಟ್ ಕಾಲೇಜು ಹತ್ತಿರ ಇರುವ ಕೋಳಿ ಫೀಡ್ ಕಂಪನಿಗೆ ಲೋಡಿಂಗ್ ಪ್ಯಾಕಿಂಗ್, ಪೌಡರಿಂಗ್, ಹೆಲ್ಪರ್ ಮಾಡಲು 18–45 ವರ್ಷ ಪುರುಷರು ಬೇಕಾಗಿದ್ದಾರೆ. ಸಂಬಳ 17845/– (ಇಎಸ್‌ಐ ಮತ್ತು ಪಿಎಫ್) ಸಂಪರ್ಕಿಸಿ: ಸಾಯಿ ಕೃಪ ಎಂಟರ್‌ಪ್ರೈಸರ್ಸ್
ರತ್ನಯ್ಯ: 9900889325
ಪ್ರಕಾಶ್: 8971460235
(ಆಧಾರ್ ಕಾರ್ಡ್ ಸಮೇತ ಬರಬೇಕು)

ಬೇಕಾಗಿದ್ದಾರೆ
ಸಾತಗಳ್ಳಿ ಬಳಿಯ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕೆ ಸಿಬ್ಬಂದಿ ಬೇಕಾಗಿದ್ದಾರೆ. ಆಸಕ್ತರು ಒಂದು ವಾರದೊಳಗೆ ಸಂಪರ್ಕಿಸಿ
9972959742

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ, ಹೆಬ್ಬಾಳ್ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು ಸಂಬಳ: 18000+W/o (8hrs) ಊಟ ತಿಂಡಿ ಸೌಲಭ್ಯವಿರುತ್ತದೆ.
9880727819
9620667819

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
FAMOUS ASTROLOGER
ಪಂಡಿತ್ ಪ್ರಸಾದ್ ಪೋದುವಾಳ್
9731839596
ಇವರು ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ದಾಂಪತ್ಯ ಸಮಸ್ಯೆ, ಸಾಲಬಾಧೆ, ಭೂಮಿ ಕೋರ್ಟು, ತನ್ನವರೆ ತನಗೆ ಶತ್ರು, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ನೇರ ಭೇಟಿ ಮಾಡಿ ತಕ್ಷಣ ಪರಿಹಾರ ಶತಸಿದ್ಧ
ಮನೆ ವಿಳಾಸ : # 19/D2, ಹೋಟೆಲ್ ದೋಸೆ ಕಾರ್ನರ್ ಪಕ್ಕ, ಹೊಸ ಡಿಸಿ ಆಫೀಸ್ ಎದುರು, ಸಿದ್ಧಾರ್ಥ ಲೇಔಟ್, ಮೈಸೂರು

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಆಫೀಸ್ ಶೋರೂಂ, ಕಂಪನಿಗಳಿಗೆ Packing, Helper, Quality Maintenance, Casheir, Billing, Data Entry, Receptionist ಮುಂತಾದ ಕೆಲಸಗಳಿಗೆ 7th, 10th, PUC, ITI, Diploma Any Degree (Pass/Fail), ಆದವರು ಬೇಕಾಗಿದ್ದಾರೆ. ಸಂಬಳ 14,000 ರಿಂದ 40,000 (ESI+PF+OT) ಸೇರಿ
6364103418, 9164052361

ಬೇಕಾಗಿದ್ದಾರೆ
ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಕಂಪನಿಗೆ ಲೋಡಿಂಗ್, ಅನ್‌ಲೋಡಿಂಗ್ ಪ್ಯಾಕಿಂಗ್ ಮತ್ತು ಪೌಡರಿಂಗ್ ಕೆಲಸ ಮಾಡಲು 18 ರಿಂದ 45 ವರ್ಷದ ಒಳಗಿನ ಪುರುಷರು ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕತೆ ಇಲ್ಲ (ಅನಿಮಲ್ ಫೀಡ್ ಕಂಪನಿಗೆ) ಸಂಬಳ: 17845/– ಸಂಪರ್ಕಿಸಿ: ಚಾಮುಂಡೇಶ್ವರಿ ಎಂಟರ್‌ಪ್ರೈಸಸ್ ಲೋಕೇಶ್ ಎಸ್
8722844236

1) 20x30, 30x40 & 30x50 Near Defence Apartment Bank loan 80% Ready for Registration
2) 20x30 30x40 Bogadi Road
3) 2, 3BHK Flats in Ramakrishna Nagar
4) 100x100 Farm House Plots KRS Back Water attch 19 lakhs starts
5) 20x30 ,30x40 House Srirampura
6) 18x40 40ft Road Kuvempu Nagar.
Prakruthi Properties
9538690359, 9035990359

COMMERCIAL SPACE FOR RENT
Ground Floor, 1st Floor, 2nd Floor, Super Market, Bank, Automobile Study Centre, Government Office, Sharda Devi Nagar
9900585954

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಸೂಪರ್‌ವೈಸರ್ (ಹೂಟಗಳ್ಳಿ, ಕುವೆಂಪುನಗರ, ದಟ್ಟಗಳ್ಳಿ)
2) ಸೆಕ್ಯೂರಿಟಿ ಗಾರ್ಡ್ (ಹೂಟಗಳ್ಳಿ, ಮೇಟಗಳ್ಳಿ, ಕುವೆಂಪುನಗರ, ಸುತ್ತೂರು)
3) ಹೌಸ್‌ಕೀಪಿಂಗ್ (ಹುಡುಗರು/ಮಹಿಳೆಯರು)
ESI, PF & ಊಟದ ಸೌಲಭ್ಯವಿರುತ್ತದೆ.
9739166772
9880419847

ಬೇಕಾಗಿದ್ದಾರೆ /Wanted
ಮೈಸೂರಿನ ಕಾಳಿದಾಸ ರಸ್ತೆಯಲ್ಲಿ (ಪಂಚವಟಿ ಸರ್ಕಲ್ ಹತ್ತಿರ) ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಅನುಭವವುಳ್ಳ Dish Wasing (ಪಾತ್ರೆ ತೊಳೆಯುವ) ಕೆಲಸಕ್ಕೆ (ಮನೆಗೆ ಆಟೋದಲ್ಲಿ ಡ್ರಾಪ್ ಮಾಡಿ ಕೊಡಲಾಗುವುದು.) ಮತ್ತು Tndoor Chef (ತಂದೂರ್ ರೋಟಿ ಚೆಫ್) ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ ವಸತಿ ಹಾಗೂ ESI ಉತ್ತಮ ಸೌಲಭ್ಯಗಳನ್ನು ನೀಡಲಾಗುತ್ತದೆ.
9019916266

ನಮ್ಮಲ್ಲಿ ಗಾರ್ಮೆಂಟ್ ಫ್ಯಾಕ್ಟರಿ ಸೆಟಪ್ ಇರುತ್ತದೆ.
ಫ್ಯಾಕ್ಟರಿ ನಡೆಸಿಕೊಂಡು ಹೋಗುವವರು ಬೇಕಾಗಿದ್ದಾರೆ. ಆಸಕ್ತಿ ಇರುವವರು ಕರೆ ಮಾಡಿ, ಸ್ಥಳ: ಮೈಸೂರು
9901602394

ಬೇಕಾಗಿದ್ದಾರೆ
ಡ್ರೈವಿಂಗ್ ಕೆಲಸಕ್ಕೆ ಮೈಸೂರ್ ಸಿದ್ಧಾರ್ಥ ನಗರದಲ್ಲಿ ಬೆಳಿಗ್ಗೆ 7 ಗಂಟೆ ಯಿಂದ ಸಂಜೆ 7 ಗಂಟೆವರೆಗೂ ಆಫೀಸ್‌ನಲ್ಲಿ ಇದ್ದು ಡ್ರೈವಿಂಗ್ ಕೆಲಸ ಮಾಡುವವರು ಬೇಕಾಗಿದ್ದರೆ. ಬೈಕ್ ಮತ್ತು ಕಾರ್ ಲೈಸೆನ್ ಹೊಂದಿರಬೇಕು ವಯಸ್ಸು 18 ರಿಂದ 40 ವರ್ಷ
8123630683

ಶಿಕ್ಷಕಿಯರು ಬೇಕಾಗಿದ್ದಾರೆ
ನೂತನವಾಗಿ ಪ್ರಾರಂಭವಾಗುತ್ತಿರುವ Pre School ಗೆ ಇಂಗ್ಲಿಷ್ ಮೀಡಿಯಂನಲ್ಲಿ ಭೋದನೆ ಮಾಡಲು NST ಅಥವಾ Montessori ತರಬೇತಿ ಹೊಂದಿರುವ ಶಿಕ್ಷಕಿಯರು ಬೇಕಾಗಿದ್ದಾರೆ. ಮಂಡ್ಯ ನಗರ
9900556044

ಹೆಸರು ಬದಲಾವಣೆ
ಜಯಮ್ಮ W/o ಲೇಟ್ ಕುಮಾರ್ ಸ್ವಾಮಿ ಮನೆ ನಂ. 2480, 3ನೇ ಮೇನ್, 5ನೇ ಕ್ರಾಸ್, ಕೆ.ಜಿ.ಕೊಪ್ಪಲ್, ಮೈಸೂರು ತಿಳಿಯಪಡಿಸುವುದೇನೆಂದರೆ ಜಯಮ್ಮ ಹಾಗೂ ಜಯ ಹೆಸರುಗಳು ಒಬ್ಬರೇ (ನನ್ನ ಹೆಸರುಗಳಾಗಿದ್ದು) ನೋಟರಿ ಕೃಷ್ಣಮೂರ್ತಿ ರವರ ಮುಂದೆ ದಿನಾಂಕ: 7/2/2024ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಜಯಮ್ಮ

ಬೇಕಾಗಿದ್ದಾರೆ
ನಮ್ಮ ಸಂಸ್ಥೆಗೆ ಕೆಲಸ ಮಾಡಲು ಸಮಾಜಸೇವಾ ಮನೋಭಾವದ ವಿದ್ಯಾವಂತ ಯುವತಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೇರ ಸಂಪರ್ಕಿಸಿ:
6361740552

ಮುಡಾ ಖಾತಾ ಸೈಟ್ ಸೇಲ್
ಈಸ್ಟ್ ಫೇಸಿಂಗ್, ಕಾರ್ನರ್ ಸೈಟ್, 1124 ಚದರಡಿ, ಜ್ಞಾನಭಾರತಿ ಲೇಔಟ್, ಏರ್ ಪೋರ್ಟ್ ಹಿಭಾಗದ ರಸ್ತೆ
ಡೈರೆಕ್ಟ್ ಓನರ್
9342123373

ಬೇಕಾಗಿದ್ದಾರೆ
ಫೋಟೋ ಫ್ರೇಂ ಅಂಗಡಿಗೆ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
8147433235
9900377073
6366256350

WANTED
ಫರ್ನಿಷಿಂಗ್ ಅಂಗಡಿಯಲ್ಲಿ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
Salary : 8 K to 10 K
Time-10am to 7pm
Address: Akbar Road, Near Ashoka road, Mysore
9916514950

WANTED
Wanted Diploma / ITI / GTTC Candidates 2 Years Experience in the Field of Tool Room, Production, Contact: Immediately the following Mobile
Lokesh
7022540475

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ನೇರ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಲೋಕಸಭಾ ಚುನಾವಣೆ ಹಿನ್ನಲೆ

ಮೈಸೂರಲ್ಲಿ ಅಪರಾಧ ಹಿನ್ನಲೆಯುಳ್ಳವರ ಪೆರೇಡ್

ದುಷ್ಕೃತ್ಯದಲ್ಲಿ ತೊಡಗದಂತೆ ಪೊಲೀಸರಿಂದ ಖಡಕ್ ಎಚ್ಚರಿಕೆ



ಮೈಸೂರಿನ ಎಲ್ಲಾ ಉಪವಿಭಾಗಗಳ ಎಸಿಪಿಗಳು ಅಪರಾಧ ಹಿನ್ನಲೆಯುಳ್ಳವರ ಪೆರೇಡ್ ನಡೆಸಿ, ಎಚ್ಚರಿಕೆ ನೀಡಿದರು.

ಮೈಸೂರು, ಮಾ1(ಆರ್‌ಕೆ)– ಲೋಕಸಭಾ ಚುನಾವಣೆ ಸಮೀಪಿಸುತ್ತಿರುವುದರಿಂದ ಯಾವುದೇ ಅಪರಾಧ ಪ್ರಕರಣಗಳು ಸಂಭವಿಸದಂತೆ ಮುಂಜಾಗ್ರತಾ ದೃಷ್ಟಿಯಿಂದ ಮೈಸೂರು ನಗರದ ನಾಲ್ಕೂ ಉಪವಿಭಾಗಗಳ ಎಸಿಪಿಗಳು ಕಳೆದ ಮೂರು ದಿನಗಳಿಂದ ತಮ್ಮ ವ್ಯಾಪ್ತಿಯ ಅಪರಾಧ' ಹಿನ್ನಲೆಯುಳ್ಳವರ ಪೆರೇಡ್ ನಡೆಸಿದರು.

ದೇವರಾಜ ಉಪವಿಭಾಗದ ವ್ಯಾಪ್ತಿಯ ಅಪರಾಧ ಹಿನ್ನಲೆಯ ವ್ಯಕ್ತಿಗಳನ್ನು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದ ಪಿ.ಕಾಳಿಂಗರಾವ್ ಸಭಾಂಗಣದಲ್ಲಿ, ಕೆಆರ್.ಉಪವಿಭಾಗದವರನ್ನು ವಿದ್ಯಾರಣ್ಯಪುರಂ ಠಾಣಾ ಆವರಣದಲ್ಲಿ ಎನ್.ಆರ್ ಉಪವಿಭಾಗದವರು ಅಶೋಕ ರಸ್ತೆಯ ಕೇಂದ್ರ ಕಾರಾಗೃಹದ ಮೈದಾನ ಹಾಗೂ ವಿಜಯನಗರ ಉಪವಿಭಾಗ 'ದವರನ್ನು ಹೆಬ್ಬಾಳು ಪೊಲೀಸ್ ಠಾಣಾ ಆವರಣಕ್ಕೆ ಕರೆಸಿ ಎಸಿಪಿಗಳು ಪೆರೇಡ್ ಮಾಡಿ ಕಟ್ಟೆಚ್ಚರ ನೀಡಿದ್ದಾರೆ.

ಲೋಕಸಭಾ ಚುನಾವಣೆ ವೇಳೆ ಗಲಾಟೆ ಗದ್ದಲ, ಗುಂಪು ಘರ್ಷಣೆ, ಹೂಕ್ಕಾಗಿ ನಿರ್ದಿಷ್ಟ ಅಭ್ಯರ್ಥಿಗೆ ಮತ ಹಾಕುವಂತೆ ಒತ್ತಡ, ಧಮ್ಕಿ ಹಾಕುವುದು ಕಂಡುಬಂದಲ್ಲಿ ಕ್ರಿಮಿನಲ್ ಕೇಸು ದಾಖಲಿಸಿ ಜೈಲಿಗೆ ಕಳುಹಿಸುವುದಾಗಿಯೂ ತಿಳಿಸಿದರು.

ರಾಜಕೀಯ ಪಕ್ಷಗಳು ಅಥವಾ ವ್ಯಕ್ತಿಗಳಿಂದ ಹಣ ಪಡೆದು ಅಥವಾ ಇನ್ನಿತರ ಆಮಿಷಗಳಿಗೆ ಒಳಗಾಗಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿ ಮತದಾನದ ವೇಳೆ ಅಥವಾ ಚುನಾವಣಾ ಪ್ರಚಾರ ಸಂದರ್ಭ ಗದ್ದಲ ಉಂಟು ಮಾಡಿದವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಪೊಲೀಸ್ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಈಗಾಗಲೇ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಜಾರಿಗೊಳಿಸಿರುವ ಹಲವು ಗ್ಯಾರಂಟಿ ಯೋಜನೆಗಳು ಹಾಗೂ ಒದಗಿಸಿರುವ ಸೌಲಭ್ಯಗಳನ್ನು ಬಳಸಿಕೊಂಡು ಸಮಾಜದಲ್ಲಿ ಗೌರವಯುತವಾಗಿ ಬದುಕುಹುದಾಗಿದ್ದು, ಜೀವನೋಪಾಯಕ್ಕಾಗಿ ಕಳ್ಳತನದಂತಹ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ತಾವು ಜೊತೆಗೆ ಕುಟುಂಬದವರನ್ನು ಸಂಕಷ್ಟಕ್ಕೆ ಸಿಲುಕಿಸಬೇಡಿ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಪೆರೇಡ್ ವೇಳೆ ಅಪರಾಧ ಹಿನ್ನಲೆಯ ವ್ಯಕ್ತಿಗಳಿಗೆ ಕಿವಿಮಾತು ಹೇಳಿದ್ದಾರೆ.

ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ ಸಹ ಕೆಲ ಉಪವಿಭಾಗಗಳಲ್ಲಿ ನಡೆದ ಪೆರೇಡ್‌ನಲ್ಲಿ ಉಪಸ್ಥಿತರಿದ್ದು ಅಪರಾಧ ಹಿನ್ನಲೆಯ ವ್ಯಕ್ತಿಗಳಿಗೆ ಎಚ್ಚರಿಕೆ ನೀಡಿ ತಿಳುವಳಿಕೆಯನ್ನು ಹೇಳಿದರು.

ಮೈಸೂರಿನಿಂದ ಲಕ್ಷ್ಮಣ್, ಚಾ.ನಗರದಿಂದ ಸುನೀಲ್ ಬೋಸ್, ಶಿವಮೊಗ್ಗದಿಂದ ಗೀತಾ ಶಿವರಾಜ್‌ಕುಮಾರ್ ಕಾಂಗ್ರೆಸ್ ಅಭ್ಯರ್ಥಿಗಳು?

● ರಾಜ್ಯ ನಾಯಕರಿಂದ ಎಐಸಿಸಿಗೆ ಪಟ್ಟಿ ರವಾನೆ ● 28ರಲ್ಲಿ 15ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಮಾರ್ಚ್ 10ರೊಳಗೆ ಬಿಡುಗಡೆ

ಬೆಂಗಳೂರು, ಮಾ.1(ಕೆಎಂಶಿ)– ಬಿಜೆಪಿ–ಜೆಡಿಎಸ್ ಮೈತ್ರಿಗೆ ಸೆಡ್ಡು ಹೊಡೆಯಲು ಸಜ್ಜಾಗಿರುವ ಕಾಂಗ್ರೆಸ್, ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆಲ್ಲಲು ಪ್ರಭಾವೀ ರಾಜಕೀಯ ಕುಟುಂಬಗಳ ಮೊರೆ ಹೋಗಿದೆ.

ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳ ಪೈಕಿ 15 ಕ್ಷೇತ್ರಗಳಿಗೆ ಮಾರ್ಚ್ 10 ರೊಳಗೆ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಲಿದೆ.

15 ಕ್ಷೇತ್ರಗಳಿಗೆ ಏಕೈಕ ಅಭ್ಯರ್ಥಿ ಹೆಸರನ್ನು ಕೆಪಿಸಿಸಿ, ಎಐಸಿಸಿಗೆ ಕಳುಹಿಸಿದ್ದು, ಇದಕ್ಕೆ ಹಸಿರು ನಿಶಾನೆ ದೊರೆತು ಪಟ್ಟಿ ಹೊರಬೀಳಲಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಕಡೇ ಗಳಿಗೆಯಲ್ಲಿ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರಕ್ಕೆ ಕುಸುಮಾ ಜೊತೆಗೆ ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ಬಿಜೆಪಿ ಶಾಸಕ ಎಸ್.ಟಿ ಸೋಮಶೇಖರ್ ಹೆಸರು ಮುನ್ನೆಲೆಗೆ ಬಂದಿದೆ.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ, ದಿವಂಗತ ಬಂಗಾರಪ್ಪ, ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ, ಲಕ್ಷ್ಮೀ ಹೆಬ್ಬಾಳ್ಕರ್, ಕಾಶಪ್ಪನವರ್ ಸೇರಿದಂತೆ ಪ್ರಮುಖ ರಾಜಕೀಯ ಕುಟುಂಬಕ್ಕೆ ಸೇರಿದವರಿಗೆ ಮೊದಲ ಪಟ್ಟಿಯಲ್ಲಿ ಪ್ರಾತಿನಿಧ್ಯ ದೊರೆತಿದೆ.



ಎಂ.ಲಕ್ಷ್ಮಣ್



ಸುನೀಲ್ ಬೋಸ್



ಗೀತಾ ಶಿವರಾಜ್‌ಕುಮಾರ್

ಮೊದಲ ಪಟ್ಟಿಯಲ್ಲೇ ಶಿವಕುಮಾರ್ ಸಹೋದರ ಹಾಲಿ ಸಂಸದ ಡಿ.ಕೆ. ಸುರೇಶ್ ಬೆಂಗಳೂರು ಗ್ರಾಮಾಂತರ, ಮಹದೇವಪ್ಪ ಪುತ್ರ ಸುನೀಲ್ ಬೋಸ್ ಚಾಮರಾಜನಗರ ಮೀಸಲು, ಶಾಸಕ ಹಾಗೂ ವೀರಶೈವ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್ ಅವರ ಪತ್ನಿ ವೀಣಾ ಕಾಶಪ್ಪನವರ್ ಬಾಗಲಕೋಟೆ, ಲಕ್ಷ್ಮೀ ಹೆಬ್ಬಾಳ್ಕರ್ ಪುತ್ರ ಮೃಣಾಲ್ ಅವರನ್ನು ಬೆಳಗಾವಿಯಿಂದ ಕಣಕ್ಕಿಳಿಸಲು ಕೆಪಿಸಿಸಿ, ಎಐಸಿಸಿಗೆ ಶಿಫಾರಸು ಮಾಡಿದೆ.

ಉಳಿದಂತೆ ಮೊದಲ ಪಟ್ಟಿಯಲ್ಲೇ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಎಂ.ಲಕ್ಷ್ಮಣ್, ಮಂಡ್ಯ ಲೋಕಸಭಾ ಕ್ಷೇತ್ರದಿಂದ ಸ್ಟಾರ್ ಚಂದ್ರು ಬಂಗಾರಪ್ಪ ಅವರ ಪುತ್ರಿ ಹಾಗೂ ಮಧುಬಂಗಾರಪ್ಪ ಅವರ ಸಹೋದರಿ ಗೀತಾ ಶಿವರಾಜ್ ಕುಮಾರ್ ಶಿವಮೊಗ್ಗ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಕಣಕ್ಕಿಳಿಯಲಿದ್ದಾರೆ.

ತುಮಕೂರು ಲೋಕಸಭಾ ಕ್ಷೇತ್ರದಿಂದ ಹಿರಿಯ ನಾಯಕ ಎಸ್.ಪಿ.ಮುದ್ದಹನುಮೇಗೌಡ, ಬೆಂಗಳೂರು ಸೆಂಟ್ರಲ್ ಕ್ಷೇತ್ರದಿಂದ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್ ಮೊದಲ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಬಳ್ಳಾರಿ ಮೀಸಲು ಲೋಕಸಭಾ ಕ್ಷೇತ್ರದಿಂದ ವಿ.ಎಸ್.ಉಗ್ರಪ್ಪ, ಚಿತ್ರದುರ್ಗ ಮೀಸಲು ಲೋಕಸಭಾ ಕ್ಷೇತ್ರದಿಂದ ಮಾಜಿ ಸಂಸದ ಚಂದ್ರಪ್ಪ, ಬೀದರ್ ಲೋಕಸಭಾ ಕ್ಷೇತ್ರದಿಂದ ರಾಜಶೇಖರ ಪಾಟೀಲ್, ದಾವಣಗೆರೆಯಿಂದ ವಿನಯ್, ಕೊಪ್ಪಳದಿಂದ ರಾಘವೇಂದ್ರ ಹಟ್ನಾಳ್ ಅವರು ಕಣಕ್ಕಿಳಿಯಲಿದ್ದಾರೆ.

ಗ್ಯಾರಂಟಿ ಯೋಜನೆಗಳನ್ನೇ ಮುಂದಿಟ್ಟುಕೊಂಡು ಈ ಬಾರಿಯ ಚುನಾವಣೆಯಲ್ಲಿ ಕನಿಷ್ಠ 20 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಬೇಕೆಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇದಕ್ಕಾಗಿ ಭಾರೀ ಕಸರತ್ತು ನಡೆಸಿದ್ದಾರೆ.

ಚುನಾವಣಾ ಪೂರ್ವ ಸಮೀಕ್ಷೆ, ಜಿಲ್ಲಾ ಉಸ್ತುವಾರಿ ಸಚಿವರ ತಂಡ ನೀಡಿರುವ ವರದಿ, ಎಲ್ಲವನ್ನು ಆಧರಿಸಿ 15 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿ ಶಿಫಾರಸು ಮಾಡಲಾಗಿದೆ. ಉಳಿದ 13 ಕ್ಷೇತ್ರಗಳಿಗೂ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆದಿದೆ.

ಲೋಕಸಭಾ ಚುನಾವಣೆಗೆ ಕಣಕ್ಕಿಳಿಯಲು ಪಕ್ಷದ ಕೆಲವು ಮುಖಂಡರುಗಳೇ ಆಸಕ್ತಿ ತೋರದ ಕಾರಣ ಕೆಲವು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಹುಡುಕುವುದೇ ರಾಜ್ಯ ಮುಖಂಡರಿಗೆ ಕಷ್ಟವಾಗಿದೆ.

ಈ ಕಾರಣಕ್ಕಾಗಿ ಪ್ರಭಾವಿ ರಾಜಕಾರಣಿ ಕುಟುಂಬ, ಉದ್ದಿಮೆ ಮತ್ತು ಗುತ್ತಿಗೆದಾರರು ಹಾಗೂ ಬಿಜೆಪಿಯಿಂದ ಕೆಲವು ಮುಖಂಡರನ್ನು ಸೆಳೆದು ಟಿಕೆಟ್ ನೀಡಲು ಪಕ್ಷ ಮುಂದಾಗಿದೆ.

ಸಾಲಭಾದೆ: ವಿಷಸೇವಿಸಿ ಮಹಿಳೆ ಆತ್ಮಹತ್ಯೆ

10 ಮಹಿಳೆಯರು ಸೇರಿ 12 ಮಂದಿ ವಿರುದ್ಧ ಪ್ರಕರಣ

ಮೈಸೂರು, ಮಾ1(ಆರ್‌ಕೆ)– ಸಾಲದ ಬಾಧೆ ತಾಳಲಾರದೆ ಪಿಜಿ(ಪೇಯಿಂಗ್‌ಗೆಸ್ಟ್) ನಡೆಸುತ್ತಿದ್ದ ಮಹಿಳೆ ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ವಿಜಯನಗರ ರೈಲ್ವೇ ಬಡಾವಣೆಯಲ್ಲಿ ಗುರುವಾರ ಮುಂಜಾನೆ ಸಂಭವಿಸಿದೆ.

ಮೈಸೂರಿನ ಮಹದೇಶ್ವರ ಬಡಾವಣೆ ನಿವಾಸಿ ಜಯಶ್ರೀ(51) ಆತ್ಮಹತ್ಯೆಗೆ ಶರಣಾದವರು. ಸಮೀಪದ ವಿಜಯನಗರ ರೈಲ್ವೆ ಬಡಾವಣೆಯಲ್ಲಿ ಕಟ್ಟಡವೊಂದನ್ನು ಬಾಡಿಗೆಗೆ ಪಡೆದು ಮಹಿಳೆಯರ ಪಿಜಿ ನಡೆಸುತ್ತಿದ್ದ ಅವರು ಡೆತ್ ನೋಟ್ ಬರೆದಿಟ್ಟು ಪಿಜಿಯಲ್ಲೇ ವಿಷ ಸೇವಿಸಿ ಸಾವನ್ನಪ್ಪಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಗುರುವಾರ ಮುಂಜಾನೆ 4 ಗಂಟೆಗೆ ವೇಳೆ ಸ್ಥಳಕ್ಕೆ ತೆರಳಿ ಮಹಜರು ನಡೆಸಿದ ವಿಜಯನಗರ ಠಾಣೆ ಪೊಲೀಸರು, ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದರು.

ಪಿಜಿ ನಡೆಸಲು ತಾನು ಸಾಲ ಪಡೆದಿದ್ದ ಇಬ್ಬರು ಪುರುಷರು ಮತ್ತು 10 ಮಂದಿ ಮಹಿಳೆಯರಿಗೆ ಕಾಲಕಾಲಕ್ಕೆ ಬಡ್ಡಿ ಹಣ ನೀಡಿದ್ದೇನೆ ಆದರೂ ಸಾಲದ ಹಣ ವಾಪಸ್ ಕೊಡುವಂತೆ ಒತ್ತಡ ಹೇರಿ ಕಿರುಕುಳ ನೀಡುತ್ತಿದ್ದರಿಂದ ಸಾಲದ ಬಾಧೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆಂದು 12 ಮಂದಿಯ ಹೆಸರು ಬರೆದಿಟ್ಟು ಜಯಶೀಲ ವಿಷ ಸೇವಿಸಿದ್ದಾರೆ.

ಪುತ್ರ ಭರತ್ ನೀಡಿದ ದೂರಿನನ್ವಯ 12 ಮಂದಿ ವಿರುದ್ಧ ಸೆಕ್ಷನ್ 306 ಆತ್ಮಹತ್ಯೆಗೆ ಪ್ರಚೋದನೆ ರೀತ್ಯಾ ವಿಜಯನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಹಿಂದುಗಳ ಒಡೆಯುವ ಸಲುವಾಗಿಯೇ ಜಾತಿಗಣತಿ ಮಾಡಿದ್ದಾರೆ: ಸಿ.ಟಿ.ರವಿ

● ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ಸರ್ಕಾರದ ಕೈಗೊಂಬೆಯಂತೆ ವರ್ತಿಸಿದ್ದಾರೆ ● ಜಾತಿ ಗಣತಿ ವರದಿ ವಿರೋಧಿಸುವ ಕಾಂಗ್ರೆಸ್ಸಿಗರು ರಾಜೀನಾಮೆ ನೀಡಲಿ

ಮೈಸೂರು,ಮಾ.1(ಎಂಟಿವೈ)– ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ಜಾತಿ ಗಣತಿ ವರದಿ ಹಿಂದೂಗಳನ್ನು ಒಡೆಯುವ ಸಲುವಾಗಿಯೇ ಸಿದ್ಧಪಡಿಸಲಾಗಿದೆ ಎಂದು ಬಿಜೆಪಿ ರಾಷ್ಟ್ರೀಯ ಮಾಜಿ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಸಚಿವ ಸಿ.ಟಿ.ರವಿ ದೂರಿದ್ದಾರೆ.

ಮೈಸೂರಿನ ಚಾಮರಾಜಪುರಂನಲ್ಲಿರುವ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಕಾಂತರಾಜು ಹಾಗೂ ಜಯಪ್ರಕಾಶ್ ಹೆಗಡೆಯವರು ಕಾಂಗ್ರೆಸ್ ಕೃಪಾಪೋಷಿತ ಮಂಡಳಿಯಂತೆ ಕಾರ್ಯನಿರ್ವಹಿಸಿದ್ದಾರೆ. ಸರ್ಕಾರಕ್ಕೆ ಸಲ್ಲಿಸಿರುವ ಜಾತಿ ಗಣತಿ ವರದಿ, ಜಾತಿ–ಜಾತಿಗಳ ನಡುವೆ ಸಂಘರ್ಷ ಸೃಷ್ಟಿಸಿ ಹಿಂದೂ ಸಮಾಜವನ್ನು ಒಡೆಯುವ ಹುನ್ನಾರ ನಡೆಸಲಾಗಿದೆ. ಜಾತಿ ಗಣತಿ ವರದಿ ವಿಚಾರದಲ್ಲಿ ಕಾಂಗ್ರೆಸ್ ಮಗು ಚೀವುಟುವ, ತೊಟ್ಟಿಲು ತೂಗುವ ಇಬ್ಬಗೆಯ ನೀತಿ ಅನುಸರಿಸುತ್ತಿದೆ. ಜಾತಿ ಗಣತಿ ವರದಿ ವಿಚಾರದಲ್ಲಿ ಮೊದಲೇ ನಿರ್ಧರಿಸಿದಂತೆ ಒಬ್ಬೊಬ್ಬರು ಒಂದೊಂದು ನಿಲುವು ವ್ಯಕ್ತಪಡಿಸುತ್ತಿದ್ದಾರೆ. ಸಿಎಂ ನಡೆ ಒಪ್ಪದವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊರ ಬರಬೇಕು. ಜಯಪ್ರಕಾಶ ಹೆಗಡೆಯವರು ರಾಜ್ಯದಲ್ಲಿ ಜಾತಿ ಗಣತಿಯನ್ನೇ ಮಾಡಿಲ್ಲ. ಹೀಗಿದ್ದರೂ ವರದಿಯನ್ನು ನೀಡಿದ್ದಾರೆ. ಕಾಂತರಾಜ್‌ರ ವರದಿ ನಕಲಿಯೋ ಎಂಬ ಸಂಶಯವಿದೆ ಎಂದು ಆರೋಪಿಸಿದರು.

ಜಾತಿ ಗಣತಿ ವರದಿಯಲ್ಲಿ ಮುಸ್ಲಿಂ ಜನಸಂಖ್ಯೆಯೇ ಮೊದಲ ಸ್ಥಾನದಲ್ಲಿದೆ. ಹಾಗಾಗಿ ಅವರು ಅಲ್ಪಸಂಖ್ಯಾತರಾಗುವುದಿಲ್ಲ. ಸಂವಿಧಾನದಲ್ಲಿ ಅವರನ್ನು ಅಲ್ಪಸಂಖ್ಯಾತರೆಂದು ನೀಡಲಾಗಿರುವ ಸ್ಥಾನ–ಮಾನವನ್ನು ಹಿಂಪಡೆಯಬೇಕು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 10 ತಿಂಗಳಾಗಿದ್ದರೂ ಯಾವುದೇ ಅಭಿವೃದ್ಧಿ ಕೆಲಸವನ್ನೂ ಮಾಡಿಲ್ಲ. ತಮ್ಮ ಆಡಳಿತ ವೈಫಲ್ಯವನ್ನು ಮುಚ್ಚಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೆರಿಗೆ ಪಾಲಿನ ವಿಚಾರವಾಗಿ ಕೇಂದ್ರ ಸರ್ಕಾರದ ವಿರುದ್ಧ ಆರೋಪಿಸುತ್ತಿದ್ದಾರೆ.ರಾಜ್ಯದಲ್ಲಿ ಕಮಿಷನ್ ದಂಧೆ ನಡೆಯುತ್ತಿದೆ. ಕನಕಪುರ ಟ್ಯಾಕ್ಸ್ ಕೊಡದೇ ಯಾವುದೇ ಕೆಲಸವೂ ಆಗುತ್ತಿಲ್ಲ. ವೈಎಸ್‌ಟಿ ಟ್ಯಾಕ್ಸ್ ನೀಡದೆ ವರ್ಗಾವಣೆ ಆಗುವುದಿಲ್ಲ. ಶೇ.40ಕ್ಕಿಂತ ಹೆಚ್ಚಿನ ಕಮಿಷನ್ ಪಡೆಯಲಾಗುತ್ತಿದೆ ಎಂದು ದೂರಿದರು.

ಬಡವರಿಗೆ ಉಚಿತವಾಗಿ ಕೊಡುತ್ತಿರುವ ಅಕ್ಕಿ ರಾಜ್ಯ ಸರ್ಕಾರದ್ದೋ, ಕೇಂದ್ರ ಸರ್ಕಾರದ್ದೋ ಎಂದು ಜನರಿಗೆ ಸತ್ಯ ತಿಳಿಸಲು ಚಾಮುಂಡಿಬೆಟ್ಟಕ್ಕೆ ಬಂದು ಪ್ರಮಾಣ ಮಾಡಲಿ. ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಸಚಿವರು ಬೆಟ್ಟಕ್ಕೆ ಬರಬೇಕು. ಬಿಜೆಪಿಯಿಂದ 25 ಸಂಸದರೊಂದಿಗೆ ನಾನು ಬರುತ್ತೇವೆ. ಕಳೆದ 10 ವರ್ಷದಲ್ಲಿ ರಾಜ್ಯಕ್ಕೆ ಕೇಂದ್ರ ಸರ್ಕಾರ ಎಷ್ಟು ಅನುದಾನ ಕೊಟ್ಟಿದೆ. ಡಾ.ಮನಮೋಹನ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಎಷ್ಟು ಕೊಟ್ಟಿದೆ. ಉಚಿತವಾಗಿ ಜನರಿಗೆ ಅಕ್ಕಿ ಕೊಡುತ್ತಿರುವುದು ಯಾವ ಸರ್ಕಾರ ಚರ್ಚೆ ಮಾಡೋಣ, ಚಾಮುಂಡೇಶ್ವರಿಯ ಮುಂದೆ ಆಣೆ, ಪ್ರಮಾಣ ಮಾಡೋಣ ಬನ್ನಿ ಎಂದು ಸವಾಲು ಹಾಕಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮೈಸೂರು ನಗರಾಧ್ಯಕ್ಷ, ಮಾಜಿ ಶಾಸಕ ಎಲ್.ನಾಗೇಂದ್ರ, ಗ್ರಾಮಾಂತರ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ನಗರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ವಕ್ತಾರ ಎಂ.ಎ.ಮೋಹನ್, ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಗ್ರಾಮಾಂತರ ಪ್ರಧಾನ ಕಾರ್ಯದರ್ಶಿ ಮಹೇಶ್ ಮಡವಾಡಿ, ಚಾಮರಾಜನಗರ ಲೋಕಸಭೆ ಚುನಾವಣಾ ಉಸ್ತುವಾರಿ ಎನ್.ವಿ.ಫಣೀಶ್, ಮಾಜಿ ಶಾಸಕ ಎನ್.ಬಾಲರಾಜು, ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ಎಸ್.ಮಹದೇವಯ್ಯ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಮಾಜಿ ಶಾಸಕ ಸಿ.ಟಿ.ರವಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಬಾಸ್ ಇಸ್ ಆಲ್‌ವೇಸ್ ರೈಟ್....!

ಉಡುಪಿ–ಚಿಕ್ಕಮಗಳೂರು ಕ್ಷೇತ್ರದ ಟಿಕೆಟ್ ವಿಚಾರಕ್ಕೆ ಸಂಬಂಧಿಸಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ ಎಂಬ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೀಡಿರುವ ಹೇಳಿಕೆ ಕುರಿತು ಮಾತನಾಡಿದ ಅವರು, ಬಾಸ್ ಇಸ್ ಆಲ್ ವೇಸ್ ರೈಟ್. ಬಾಸ್ ವಿರುದ್ಧ ಯಾರಾದರೂ ಮಾತಾಡಲು ಸಾಧ್ಯನಾ ಎಂದು ಪ್ರಶ್ನಿಸಿದರು. ನಾನು ಎಲ್ಲಿಯೂ ಕ್ಷೇತ್ರದ ಆಕಾಂಕ್ಷಿ ಎಂದು ಹೇಳಿಲ್ಲ. ಅಲ್ಲಿ ನಡೆಯುತ್ತಿರುವ ವಿದ್ಯಮಾನ ನನಗೆ ಸಂಬಂಧಿಸಿದ್ದು ಎಂದು ಹೇಗೆ ಹೇಳಲು ಸಾಧ್ಯ. ಪಕ್ಷದ ಹೈಕಮಾಂಡ್ ಯಾವುದೇ ತೀರ್ಮಾನ ತೆಗೆದುಕೊಂಡರೂ ಅದಕ್ಕೆ ನಾನು ಬದ್ಧನಾಗಿದ್ದೇನೆ ಎಂದು ತಿಳಿಸಿದರು.

ನಾಳೆ ಉಚಿತ ಆರೋಗ್ಯ ತಪಾಸಣೆ; ಸ್ವಯಂ ಪ್ರೇರಿತ ರಕ್ತದಾನ ಶಿಬಿರ

ಮೈಸೂರು, ಮಾ. 1– ಜೈ ಶ್ರೀ ರಾಮ ಯುವ ಬ್ರಿಗೇಡ್ ಉದ್ಘಾಟನೆ ಅಂಗವಾಗಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಬೋಗಾದಿಯ ರವಿಶಂಕರ್ ಲೇಔಟ್‌ನಲ್ಲಿ ಮಾರ್ಚ್ 3ರಂದು ಬೆಳಗ್ಗೆ 10.30ಕ್ಕೆ ಉದ್ಘಾಟಿಸಲಾಗುವುದು ಎಂದು ಜೈ ಶ್ರೀ ರಾಮ ಯುವ ಬ್ರಿಗೇಡ್ ಕಾರ್ಯದರ್ಶಿ ಮಹೇಶ್ ಕುಮಾರ್ ತಿಳಿಸಿದ್ದಾರೆ


ಸಂಘದ ಉದ್ಘಾಟನೆಯನ್ನು ಸಂಸದ ಪ್ರತಾಪ್ ಸಿಂಹ ನೆರವೇರಿಸಲಿದ್ದಾರೆ. ಅಧ್ಯಕ್ಷತೆಯನ್ನು ಬಿಜೆಪಿ ನಗರ ಅಧ್ಯಕ್ಷ ಎಲ್ ನಾಗೇಂದ್ರ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಶಾಸಕರಾದ ಟಿ.ಎಸ್. ಶ್ರೀವತ್ಸ, ಜಿ.ಟಿ.ದೇವೇಗೌಡ, ಖ್ಯಾತ ವೈದ್ಯರಾದ ಡಾ. ಎಸ್ ಪಿ ಯೋಗಣ್ಣ, ಮೈಸೂರು ಮತ್ತು ಚಾಮರಾಜನಗರ ನ್ಯಾಯಾಂಗ ಇಲಾಖೆಯ ನೌಕರರ ಪತ್ತಿನ ಸಹಕಾರ ಸಂಘದ ಅಧ್ಯಕ್ಷರದ ಶೇಷಾದ್ರಿ ಎಂ ವಿ, ಸಂಘದ ಅಧ್ಯಕ್ಷರು ಡಿ. ರಾಘವೇಂದ್ರ, ಕಾರ್ಯದರ್ಶಿ ಆರ್ ಮಹೇಶ್ ಕುಮಾರ್, ಉಪಾಧ್ಯಕ್ಷ ವೀರೇಶ್ ರೆಡ್ಡಿ, ಸಹ ಕಾರ್ಯದರ್ಶಿ ಪ್ರದೀಪ್ ಕುಮಾರ್, ಖಜಾಂಚಿ ಪ್ರವೀಣ್ ಕುಮಾರ್ ಮತ್ತು ಸಂಘದ ಪದಾಧಿಕಾರಿಗಳು ಹಾಜರಿರುವರು.



ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್ ಅವರ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು. ಶಾಸಕ ಕೆ.ಹರೀಶ್‌ಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ರವೀಶ್ ಶ್ರೀನಿವಾಸ್, ಪುಟ್ಟರಾಜು, ದಿನಿ ಮತ್ತಿತರರು ಉಪಸ್ಥಿತ ರಿದ್ದರು. ಇದೇ ವೇಳೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು.

ದ್ವಿತೀಯ ಪಿಯುಸಿ ಪರೀಕ್ಷೆ ಆರಂಭ

ಕನ್ನಡ ಭಾಷೆಗೆ 711 ವಿದ್ಯಾರ್ಥಿಗಳು ಗೈರು



ಮೈಸೂರು, ಮಾ1(ಆರ್‌ಕೆ)– ರಾಜ್ಯಾದ್ಯಂತ ಇಂದಿನಿಂದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ಆರಂಭವಾದವು

ಮೈಸೂರು ನಗರದ 26 ಸೇರಿದಂತೆ ಜಿಲ್ಲೆಯಾದ್ಯಂತ 49 ಕೇಂದ್ರಗಳಲ್ಲಿ ಮೊದಲ ದಿನವಾದ ಇಂದು ನಡೆದ ಕನ್ನಡ ಪ್ರಥಮ ಭಾಷೆಗೆ 28,665 ಮಂದಿ ನೊಂದಾಯಿಸಿಕೊಂಡಿದ್ದರಾದರೂ, 27,954 ವಿದ್ಯಾರ್ಥಿಗಳು ಹಾಜರಾಗಿದ್ದು, 711 ಮಂದಿ ಗೈರಾಗಿದ್ದಾರೆ ಎಂದು ಪದವಿ ಪೂರ್ವ ಮತ್ತು ವೃತ್ತಿ ತರಬೇತಿ ಇಲಾಖೆ ಮೈಸೂರು ಜಿಲ್ಲಾ ಉಪನಿರ್ದೇಶಕ ಎಂ.ಮರಿಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಅರೇಬಿಕ್ ಭಾಷೆಗೆ ನೊಂದಣಿಯಾಗಿದ್ದ ಎಲ್ಲಾ 7 ಮಂದಿಯೂ ಹಾಜರಾಗಿ ಪರೀಕ್ಷೆ ಬರೆದಿದ್ದಾರೆ. ಎಲ್ಲಾ ಕೇಂದ್ರಗಳಲ್ಲೂ ನಿಗದಿತ ಸಮಯದಲ್ಲಿ ಗೊಂದಲಗಳಿಲ್ಲದೆ ಪರೀಕ್ಷೆಗಳು ಆರಂಭವಾಗಿ ಸುಗಮವಾಗಿ ನಡೆದವು. ಇಲಾಖೆಯ ಉಪ ನಿರ್ದೇಶಕರು ಗೋಪಾಲಸ್ವಾಮಿ, ಎಸ್‌ಡಿಎಂ ಮತ್ತು ಮಹಾರಾಣಿ ಪಿಯು ಕಾಲೇಜು ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಮೊಬೈಲ್ ಫೋನ್, ಎಲೆಕ್ಟ್ರಾನಿಕ್ ವಾಚ್‌ಗಳಂತಹ ಉಪಕರಣಗಳನ್ನು ಪರಿಕ್ಷಾ ಕೊಠಡಿಗೆ ನಿಷೇಧಿಸಿ ಸಿಸಿಟಿವಿ ಕಣ್ಗಾವಲಿನಲ್ಲಿ ಕಟ್ಟುನಿಟ್ಟಾಗಿ ಪರೀಕ್ಷೆ ನಡೆಸಲಾಯಿತು. ನಿಷೇದಾಜ್ಞೆ ಜಾರಿಯಲ್ಲಿರುವ ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಹೊರತುಪಡಿಸಿ ಬೇರೆಯವರು ಸುಳಿಯದಂತೆ ಎಚ್ಚರ ವಹಿಸಲಾಗಿತ್ತು.

ಆಯಾ ಠಾಣಾ ಪೊಲೀಸ್ ಸಿಬ್ಬಂದಿಗಳನ್ನು ಪರಿಕ್ಷಾ ಕೇಂದ್ರಗಳಿಗೆ ನಿಯೋಜಿಸಲಾಗಿದ್ದು, ಸುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಬಂದ್ ಮಾಡಿಸಿ ಅಕ್ರಮ ನಡೆಯದಂತೆ ನಿಗಾ ವಹಿಸಿದ್ದರಿಂದ ಇಂದಿನ ಪರೀಕ್ಷೆಸುಸೂತ್ರವಾಗಿ ನಡೆದುವು

ಇಂದು ದಾಸಶ್ರೇಷ್ಠರ ಆರಾಧನೆ; ಸಂಗೀತ ಪ್ರಾತ್ಯಕ್ಷಿಕೆ

ಮೈಸೂರು, ಮಾ.1(ಎಂಕೆ)– ಮೈಸೂರು ವಿವಿ ಲಲಿತಾಕಲಾ ಕಾಲೇಜಿನ ರಂಗಮಂದಿರದಲ್ಲಿ ನಾಳೆ(ಮಾ.2) ಬೆಳಗ್ಗೆ 10 ಗಂಟೆಗೆ ಶ್ರೀ ತ್ಯಾಗರಾಜ ಮತ್ತು ಶ್ರೀ ಪುರಂದರದಾಸ ಆರಾಧನೆ ಹಾಗೂ ಸಂಗೀತ ವಿಭಾಗದ ವತಿಯಿಂದ ವಿಶೇಷ ಸಂಗೀತ ಪ್ರಾತ್ಯಕ್ಷಿಕೆ ಹಮ್ಮಿಕೊಳ್ಳಲಾಗಿದೆ.

ಫ್ರಾನ್ಸ್ ದೇಶದ ಸಂಗೀತ ಮಾಂತ್ರಿಕರಾದ ಲುಯಿಗಿ ಕಾರ್ಡಾ, ಕ್ರಿಸ್ಟೋಫ್ ವಂಡೆಪುಟ್ಟೆ ವಿಶೇಷ ಸಂಗೀತ ಉಪನ್ಯಾಸ ನೀಡಲಿದ್ದಾರೆ. ಸಂಗೀತ ಕಾರ್ಯಕ್ರಮಕ್ಕೆ ಎಲ್ಲಾ ಅಧ್ಯಾಪಕರು, ಅಧ್ಯಾಪಕೇತರ ಸಿಬ್ಬಂದಿ, ಸಂಶೋಧನ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ಕೋರಲಾಗಿದೆ.

ಜಿ.ಟಿ.ದೇವೇಗೌಡರು ಸಹಕಾರ ಕ್ಷೇತ್ರದಲ್ಲಿ ಸರ್ಕಾರದ ಅತೀವ ಹಸ್ತಕ್ಷೇಪ ಖಂಡಿಸಿದ್ದಾರೆಯೇ ಹೊರತು ಮೀಸಲಾತಿ ವಿರೋಧಿಸಿಲ್ಲ

● ದಲಿತ ಮುಖಂಡರು, ಜಿಪಂ ಮಾಜಿ ಉಪಾಧ್ಯಕ್ಷ ಸುಬ್ಬಯ್ಯ ಸ್ಪಷ್ಟನೆ ● ರಾಜಕೀಯ, ಸಹಕಾರ ಕ್ಷೇತ್ರದಲ್ಲಿ ದೇವೇಗೌಡರದ್ದು ಜಾತ್ಯಾತೀತ ನಿಲುವು ಎಂಬುದು ಎಲ್ಲರಿಗೂ ಗೊತ್ತು ● ಗೌಡರು ಸದನದಲ್ಲಿ ಮಾತನಾಡಿದ್ದನ್ನು ಮಾರ್ಪಡಿಸಿ, ವಿಡಿಯೋ ವೈರಲ್ ಮೂಲಕ ಅಪಪ್ರಚಾರ ಸಲ್ಲದು

ಮೈಸೂರು, ಮಾ.1(ಜಿಎ)–ಸಹಕಾರ ಸಂಘಗಳಲ್ಲಿ ಸರ್ಕಾರದ ಹಸ್ತಕ್ಷೇಪ ಒಳ್ಳೆಯ ಬೆಳವಣಿಗೆ ಅಲ್ಲ ಎಂದಷ್ಟೇ ಶಾಸಕರೂ ಆದ ಸಹಕಾರಿ ಧುರೀಣ ಜಿ.ಟಿ.ದೇವೇಗೌಡರು ಸರ್ಕಾರದ ನಡೆಯನ್ನು ಖಂಡಿಸಿದ್ದಾರೆಯೇ ಹೊರತು, ಮೀಸಲಾತಿ ವಿರೋಧಿಗಳಲ್ಲ ಎಂದು ದಲಿತ ಮುಖಂಡ, ಜಿಪಂ ಮಾಜಿ ಉಪಾಧ್ಯಕ್ಷ ಸುಬ್ಬಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಹಕಾರ ಕ್ಷೇತ್ರದಲ್ಲಿ ಸಂಘದ ಸದಸ್ಯರಲ್ಲದವರು ಮತ್ತು ಸರ್ಕಾರದ ಭಾಗವಾಗದವರಿಗೆ ನಾಮನಿರ್ದೇಶನ ಮಾಡುವುದು ಬೇಡ ಎಂದು ಶಾಸಕ ಜಿ.ಟಿ.ದೇವೇಗೌಡರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ, ಇದನ್ನು ತಪ್ಪಾಗಿ ಅರ್ಥೈಸಿಕೊಂಡು ಕಾಂಗ್ರೆಸ್ ಹಾಗೂ ಸಂವಿಧಾನ ಸಂರಕ್ಷಣಾ ಸಮಿತಿ, ಜಿ.ಟಿ.ದೇವೇಗೌಡರ ಕಚೇರಿ ಮುಂದೆ ಪ್ರತಿಭಟನೆ ಮಾಡಿದ್ದು ಖಂಡನೀಯ. ಉದ್ದೇಶ ಪೂರ್ವಕವಾಗಿ ಜಿಟಿಡಿ ಅವರ ಘನತೆಗೆ ಧಕ್ಕೆ ತರುವ ಕೆಲಸ ಮಾಡಿದ್ದಾರೆ ಎಂದು ಖಂಡಿಸಿದರು.

ಪ್ರಪಂಚದಲ್ಲಿ ಸಹಕಾರ ಚಳುವಳಿ ಆರಂಭವಾಗಿ ಸುಮಾರು 180 ವರ್ಷಗಳಾಗಿವೆ. ನಮ್ಮ ದೇಶದಲ್ಲಿ ಆರಂಭವಾಗಿ ಸುಮಾರು 120 ವರ್ಷಗಳಾಗಿದ್ದು, ಸಹಕಾರ ಚಳುವಳಿಯ ಸಂಸ್ಥಾಪಕರು ನಿರ್ದಿಷ್ಟವಾದ ನೀತಿ ನಿಯಮಗಳನ್ನು ರೂಪಿಸಿಕೊಂಡು ಪ್ರಜಾಪ್ರಭುತ್ವ ವಿಧಾನದಲ್ಲಿ ತಾವು ಸ್ಥಾಪಿಸಿದ ಸಹಕಾರ ಸಂಘವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದು ಜಗತ್ತಿಗೆ ದಾರಿ ದೀಪವಾದರು. ಸದಸ್ಯರು ಸ್ವಇಚ್ಛೆ ಮತ್ತು ಸಮಾನತೆಯಿಂದ ಸಂಘದಲ್ಲಿ ಪಾಲ್ಗೊಳ್ಳುವುದು ಪ್ರಜಾಪ್ರಭುತ್ವ ಆಡಳಿತ ವಿಧಾನ, ಸ್ವಾಯತ್ತ ಕಾರ್ಯಾಚರಣೆ ಇವೆಲ್ಲವೂ ಸಹಕಾರದ ವಿಶಿಷ್ಟ ಗುಣಲಕ್ಷಣಗಳಾಗಿದ್ದು, ಅಂತಹ ಸಹಕಾರ ಸಂಘಗಳಲ್ಲಿ ಸರ್ಕಾರದ ಹಸ್ತಕ್ಷೇಪ ಒಳ್ಳೆಯ ಬೆಳವಣಿಗೆ ಅಲ್ಲ ಎಂದರು.


ಸಹಕಾರ ಕ್ಷೇತ್ರದಲ್ಲಿ ಈಗಾಗಲೇ ಮೀಸಲಾತಿ ಇದೆ. ಹೀಗಿದ್ದರೂ ಹೊಸದಾಗಿ ಮೂರು ನಾಮನಿರ್ದೇಶನ ಮಾಡಲು ಹೊರಟಿದ್ದೀರಿ. ಉದಾಹರಣೆಗೆ ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟವಿದೆ. ಅಲ್ಲಿ 13 ಚುನಾಯಿತ ನಿರ್ದೇಶಕರು ಇದ್ದಾರೆ. ನಾಲ್ವರು ಸರ್ಕಾರದ ಅಧಿಕಾರಿಗಳು ಇದ್ದಾರೆ. ಅವರ ಜೊತೆಗೆ ಈಗ ಒಂದು ನಾಮ ನಿರ್ದೇಶನವಿದೆ. ಇದರೊಂದಿಗೆ ಹೊಸದಾಗಿ ಮೂರು ನಾಮ ನಿರ್ದೇಶನ ಮಾಡಿದರೆ ಸರ್ಕಾರದವರೇ ಅಧ್ಯಕ್ಷರಾಗುತ್ತಾರೆ. ಚುನಾಯಿತ ಪ್ರತಿನಿಧಿಗಳು ಅಧ್ಯಕ್ಷರಾಗಲು ಅವಕಾಶವಿಲ್ಲ. ಈ ರೀತಿ ನಾಮ ನಿರ್ದೇಶನ ಮಾಡಿ ಸಹಕಾರಿ ಸಂಸ್ಥೆಗಳನ್ನು ಸರ್ಕಾರ ಸಂಪೂರ್ಣವಾಗಿ ಹತೋಟಿಯಲ್ಲಿಟ್ಟುಕೊಳ್ಳಲು ಹೊರಟಿರುವುದು ಸಹಕಾರ ಕ್ಷೇತ್ರಕ್ಕೆ ಅಪಚಾರ ಮಾಡಿದಂತೆ ಎಂದರು.

ಜಿ.ಟಿ.ದೇವೇಗೌಡರ ರಾಜಕೀಯ ಪ್ರವೇಶ ಬಾಗಿಲೇ ಸಹಕಾರ ಕ್ಷೇತ್ರ ಅಲ್ಲಿಂದ ರಾಜ್ಯದ ಉನ್ನತ ಸ್ಥಾನ ತಲುಪಿದ್ದಾರೆ. ಜಾತ್ಯತೀತ, ಧರ್ಮಾತೀತ ಮತ್ತು ಪಕ್ಷಾತೀತವಾಗಿ ಸಹಕಾರ ಕ್ಷೇತ್ರಗಳಲ್ಲಿ ಎಲ್ಲ ವರ್ಗದ ಜನರ ದುಃಖ–ದುಮ್ಮಾನಗಳಿಗೆ ಸ್ಪಂದಿಸುತ್ತ ಸಹಕಾರ ಕ್ಷೇತ್ರವನ್ನು ಪಾರದರ್ಶಕವಾಗಿ ಮುನ್ನಡೆಸುತ್ತಾ ಆ ಕ್ಷೇತ್ರಕ್ಕೆ ಒಂದು ಕಳಸ ಪ್ರಾಯವಾಗಿ ತಮ್ಮದೇ ಆದಂತಹ ಅಪಾರ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ ಎಂದರು.

ನಂತರ ಶಿವಕುಮಾರ್ ಮಾತನಾಡಿ, ಜಿಟಿಡಿ ಅವರು ಸಹಕಾರ ಸಚಿವರಾಗಿದ್ದಾಗಲೂ ಮೀಸಲಾತಿ ವಿರೋಧಿ ನೀತಿ ಅನುಸರಿಸಲಿಲ್ಲ. ಈಗ ಏಕೆ ವಿರೋಧಿಸುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಜಿಲ್ಲಾ ಸಹಕಾರ ಯೂನಿಯನ್‌ಗಳಲ್ಲಿ ದಲಿತರೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದ ಉದಾಹರಣೆ ಇಲ್ಲ. ಆದರೆ ಜಿ.ಟಿ.ದೇವೇಗೌಡರು ತಾವು ಅಧ್ಯಕ್ಷರಾಗಿದ್ದ ಜಿಲ್ಲಾ ಸಹಕಾರ ಯೂನಿಯನ್‌ಗೆ ರಾಜಿನಾಮೆ ನೀಡಿ ಬನ್ನೂರಿನ ದಲಿತ ಮುಖಂಡ ಬಿ.ಪಿ.ನಂಜುಂಡಸ್ವಾಮಿ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಮುಖಂಡರಾದ ಕೆ.ಆರ್.ನಗರದ ಸುಬ್ಬಯ್ಯ ಅವರನ್ನು ಎಂ.ಡಿ.ಸಿ.ಸಿ.ಬ್ಯಾಂಕ್‌ಗೆ ಸಾಮಾನ್ಯ ಕ್ಷೇತ್ರದಿಂದ ನಿಲ್ಲಿಸಿ ಗೆಲ್ಲಿಸಿದ್ದಾರೆ. ಹುಣಸೂರು ಟಿ.ಎ.ಪಿ.ಸಿ.ಎಂ.ಎಸ್.ಗೆ ದಲಿತ ಮುಖಂಡರಾದ ಬಸವಲಿಂಗಯ್ಯ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ.

ಬಿ.ಜೆ.ಪಿ.ಯಲ್ಲಿದ್ದಾಗ ಹುಣಸೂರು ಕ್ಷೇತ್ರದ ದಲಿತ ಮುಖಂಡರಾದ ಪುಟ್ಟಮಾದಯ್ಯ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಬಹುಮತವಿಲ್ಲದಿದ್ದರೂ ನಮ್ಮ ಕ್ಷೇತ್ರದ ಮುಖಂಡರಾದ ಕಡಕೊಳ ನಾಗರಾಜು ಅವರನ್ನು ಜಿಲ್ಲಾ ಪಂಚಾಯಿತಿ ಅಧ್ಯಕ್ಷರನ್ನಾಗಿ ಮಾಡಿದ್ದು ಇತಿಹಾಸ. ಇಂತಹ ವ್ಯಕ್ತಿಯ ವಿಡಿಯೋವನ್ನು ಎಡಿಟ್ ಮಾಡಿ, ಪೂರ್ತಿ ವಿಡೀಯೋವನ್ನು ಮರೆಮಾಚಿ ತಪ್ಪು ಸಂದೇಶ ರವಾನೆಯಾಗುವಂತೆ ಮಾಡಲಾಗಿದೆ. ಶಾಸಕರದ್ದು ನಾಮ ನಿರ್ದೇಶನದ ವಿರುದ್ಧ ನಿಲುವೆ ಹೊರತು, ಅವರು ಮೀಸಲಾತಿ ವಿರೋಧಿಗಳಲ್ಲ. ಅವರು ಸದಾ ಮೀಸಲಾತಿಯ ಪರವಾಗಿ ರಾಜಕೀಯ ಮತ್ತು ಸಹಕಾರ ಕ್ಷೇತ್ರದಲ್ಲಿ ಹೋರಾಟ ಮಾಡುತ್ತಾ ಬಂದಿರುವವರು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಹಕಾರ ಕ್ಷೇತ್ರದ ಮುಖಂಡರಾದ ಮೋಹನ್‌ಕುಮಾರ್, ಚಂದ್ರಶೇಖರ್, ಶಿವಕುಮಾರ್, ಬಸವಲಿಂಗಯ್ಯ, ಎಂ.ಪಿ. ನಾಗರಾಜ್ ಹಾಗೂ ಉಮಾಪತಿ ಉಪಸ್ಥಿತರಿದ್ದರು.



ತಿ.ನರಸೀಪುರದಲ್ಲಿ ಜನಸಂಪರ್ಕ ಸಭೆ

ಅರ್ಜಿ ಸಲ್ಲಿಸಲು ನೂಕು ನುಗ್ಗಲು... ಸರ್ಕಾರದ ವಿರುದ್ಧ ದಸಂಸ ಘೋಷಣೆ

ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ ಮಾಜಿ ಶಾಸಕ ಡಾ.ಯತೀಂದ್ರ


ತಿ.ನರಸೀಪುರದ ಪುರಸಭೆ ಎದುರು ನಡೆದ ಜನಸಂಪರ್ಕ ಸಭೆಯಲ್ಲಿ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ತಿ.ನರಸೀಪುರ, ಮಾ.1- ಅರ್ಜಿ ಸಲ್ಲಿಸಲು ನೂಕು ನುಗ್ಗಲು...! ಎರಡು ಗಂಟೆ ತಡವಾಗಿ ಆಗಮಿಸಿದ ಡಾ. ಯತೀಂದ್ರ....! ದಸಂಸ ಕಾರ್ಯಕರ್ತರಿಂದ ಸರ್ಕಾರದ ವಿರುದ್ಧ ಘೋಷಣೆ...! ಪೊಲೀಸರೊಂದಿಗೆ ಮಾತಿನ ಚಕಮಕಿ...! ಅರ್ಜಿದಾರರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿದ್ದ ಕಾರ್ಯಕರ್ತರು....! ಇವು ಪಟ್ಟಣದ ಪುರಸಭೆ ಕಚೇರಿ ಎದುರು ಶುಕ್ರವಾರ ನಡೆದ ಜನಸಂಪರ್ಕ ಸಭೆಯಲ್ಲಿ ಕಂಡು ಬಂದ ದೃಶ್ಯಗಳು.

ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿ ವಾರ್ಡ್‌ಗಳ ಸಂಬಂಧ ಆಯೋಜಿಸಿದ್ದ ಜನಸಂಪರ್ಕ ಸಭೆಯಲ್ಲಿ ನಿರೀಕ್ಷೆಗೂ ಮೀರಿ ವಿವಿಧ ಸಮಸ್ಯೆಗಳ ಕುರಿತು ಅರ್ಜಿಗಳು ಸಲ್ಲಿಕೆಯಾದವು. ಆದರೆ ಈ ವೇಳೆ ಸಮರ್ಪಕ ವ್ಯವಸ್ಥೆ ಕಲ್ಪಿಸದ ಹಿನ್ನೆಲೆಯಲ್ಲಿ ನೂಕುನುಗ್ಗಲು ಉಂಟಾಗಿ ಸಾರ್ವಜನಿಕರು ಪರದಾಡುವಂತಾಯಿತು.

ಬೆಳಗ್ಗೆ 11 ಗಂಟೆಗೆ ಆರಂಭವಾಗಬೇಕಿದ್ದ ಜನಸಂಪರ್ಕ ಸಭೆ ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ತಡವಾಗಿ ಆಗಮಿಸಿದ್ದರಿಂದ ಮಧ್ಯಾಹ್ನ 1 ಗಂಟೆಗೆ ಆರಂಭವಾಯಿತು. ಸಾರ್ವಜನಿಕರು ವಿವಿಧ ಸಮಸ್ಯೆಗಳ ಕುರಿತು ಅರ್ಜಿ ಸಲ್ಲಿಸುತ್ತಿದ್ದ ವೇಳೆ ವೇದಿಕೆ ಬಳಿಯೇ ದಸಂಸ ಸದಸ್ಯರು ಮುಖಂಡ ಉಮಾ ಮಹದೇವ್ ನೇತೃತ್ವದಲ್ಲಿ ಪಟ್ಟಣದ ಕೆಎಸ್‌ಐಸಿ ಕಾರ್ಖಾನೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕವಾಗಿದ್ದ ನಿಂಗರಾಜು ಎಂಬ ಕಾರ್ಮಿಕರನ್ನು ವಿನಾಕಾರಣ ಕೆಲಸದಿಂದ ತೆಗೆದು ಹಾಕಲಾಗಿದೆ ಎಂದು ಆರೋಪಿಸಿ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಲಾರಂಭಿಸಿದರು.

ಈ ವೇಳೆ ಸ್ಥಳದಲ್ಲಿದ್ದ ಪೊಲೀಸರು ಪ್ರತಿಭಟನೆ ಕೈ ಬಿಟ್ಟು ಸರತಿ ಸಾಲಿನಲ್ಲಿ ನಿಂತು ಅರ್ಜಿ ಸಲ್ಲಿಸಿ ಎಂದು ತಿಳಿಸಿದರಾದರೂ ಇದಕ್ಕೊಪ್ಪದ ಪ್ರತಿಭಟನಾಕಾರರು ಸರತಿ ಸಾಲಿನಲ್ಲಿ ನಿಂತು ಅರ್ಜಿ ಸಲ್ಲಿಸುವ ವರ್ಗಕ್ಕೆ ನಾವು ಸೇರಿಲ್ಲ. ಸಮಸ್ಯೆ ಸಂಬಂಧ ಹಲವು ಬಾರಿ ಪ್ರತಿಭಟನೆ ಮಾಡಿದ್ದೇವೆ. ಹಾಗಾಗಿ ನಾವು ನೇರವಾಗಿ ಯತೀಂದ್ರ ಅವರಿಗೆ ಮನವಿ ಸಲ್ಲಿಸಬೇಕೆಂದು ಪಟ್ಟು ಹಿಡಿದು ಘೋಷಣೆ ಕೂಗಲಾರಂಭಿಸಿದರು. ಈ ವೇಳೆ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ಈ ವೇಳೆ ಡಾ. ಯತೀಂದ್ರ ಸಿದ್ದರಾಮಯ್ಯ ಪ್ರತಿಭಟನಾಕಾರರ ಸಮಸ್ಯೆ ಆಲಿಸಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ ನ್ಯಾಯ ದೊರಕಿಸಿಕೊಡುವ ಭರವಸೆ ನೀಡಿದರು.

ಇದೇ ವೇಳೆ ಸಾರ್ವಜನಿಕರು ಕೆಎಸ್‌ಐಸಿಯಲ್ಲಿ ಉದ್ಯೋಗ ಕೊಡಿ, ವೃದ್ಧಾಪ್ಯ ವೇತನ, ಗೃಹಲಕ್ಷ್ಮಿ ಯೋಜನೆ ಹಣ ಬರುತ್ತಿಲ್ಲ, ಬೀದಿ ದೀಪ ದುರಸ್ಥಿ ಮಾಡಿಸಿ, ಸಾಲಕ್ಕೆ ಶಿಫಾರಸು ಮಾಡಿ ಎಂಬುದು ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಅರ್ಜಿ ಸಲ್ಲಿಸಿದರು. ಅಲ್ಲದೇ ಪೌರ ಕಾರ್ಮಿಕರು ತಮಗೆ ಸರ್ಕಾರದಿಂದ ನಿವೇಶನ ಕೊಡಿಸುವಂತೆ ಮನವಿ ಸಲ್ಲಿಸಿದರು. ಎಲ್ಲಾ ಸಮಸ್ಯೆಗಳನ್ನು ನಿಂತು ಶಾಂತಚಿತ್ತದಿಂದ ಆಲಿಸಿದ ಡಾ.ಯತೀಂದ್ರ ಅರ್ಜಿಗಳನ್ನು ಪರಿಶೀಲಿಸಿ ಈಡೇರಿಸಬಹುದಾದ ಸಮಸ್ಯೆಯನ್ನು ಆದ್ಯತೆ ಮೇರೆಗೆ ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು.

ಕಾರ್ಯಕರ್ತರದ್ದೇ ಕಾರುಬಾರು: ಇಂದು ನಡೆದ ಜನಸಂಪರ್ಕ ಸಭೆಯಲ್ಲಿ ಅರ್ಜಿ ಸಲ್ಲಿಸುವ ವೇಳೆ ಸಾರ್ವಜನಿಕರಿಗಿಂತ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಡಾ. ಯತೀಂದ್ರ ಸಿದ್ದರಾಮಯ್ಯ ಬೆಂಬಲಿಗರೇ ಹೆಚ್ಚಾಗಿದ್ದು ಕಂಡು ಬಂತು.

ಈ ವೇಳೆ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು. ಟಿ.ಎಂ.ನಂಜುಂಡಸ್ವಾಮಿ, ಎಸ್. ಮದನ್ ರಾಜ್, ಸಾಮಾಜಿಕ ನ್ಯಾಯ ಸಮಿತಿ ಮಾಜಿ ಅಧ್ಯಕ್ಷ ಸೈಯದ್ ಅಹ್ಮದ್, ಸದಸ್ಯರಾದ ಪ್ರಕಾಶ್, ಬಾದಾಮಿ ಮಂಜು, ಹೇಮಂತ್, ಎಲ್.ಮಂಜುನಾಥ್, ಮಾಜಿ ಸದಸ್ಯರಾದ ರಾಘವೇಂದ್ರ, ಕೆ. ಗಣೇಶ್, ಕರಿಯಪ್ಪ, ಪದವೀಧರ ಸಂಘದ ಜಿಲ್ಲಾಧ್ಯಕ್ಷ ಎಂ.ರಮೇಶ್, ತಾಲೂಕು ಅಧ್ಯಕ್ಷ ಉಮೇಶ್, ಫೈನಾನ್ಸ್ ರಾಜು, ಕೆಡಿಪಿ ಮಾಜಿ ಸದಸ್ಯ ಎಂ.ಮಿಥುನ್, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮಹೇಶ್, ಮಾಜಿ ಅಧ್ಯಕ್ಷ ಪ್ರಶಾಂತ್ ಬಾಬು, ವರುಣ ಬ್ಲಾಕ್ ಅಧ್ಯಕ್ಷ ಮುದ್ದೇಗೌಡ, ಗುರುಸ್ವಾಮಿ, ಮಹಿಳಾ ಘಟಕದ ಅಧ್ಯಕ್ಷೆ ಭಾಗ್ಯಮ್ಮ, ಲತಾ, ಪ್ರಥಮ ದರ್ಜೆ ಗುತ್ತಿಗೆದಾರ ಮಾಧು, ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್, ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತ್ ಕುಮಾರಿ, ವ್ಯವಸ್ಥಾಪಕ ಮಹೇಂದ್ರ, ರಾಜೇಂದ್ರ ಮತ್ತಿತರರಿದ್ದರು.

ಬಂಗಾರಪ್ಪ ಬಡಾವಣೆಗೆ ಮೂಲ ಸೌಕರ್ಯ ಕಲ್ಪಿಸಿ!

ಪಟ್ಟಣದ ಹೊರ ವಲಯದ ಬಂಗಾರಪ್ಪ ಬಡಾವಣೆಗೆ ಮೂಲ ಸೌಕರ್ಯ ಕಲ್ಪಿಸುವಂತೆ ಬಡಾವಣೆ ನಿವಾಸಿಗಳು ಮನವಿ ಸಲ್ಲಿಸಿದರು. ಭೈರಾಪುರ ಮತ್ತು ಆಲಗೂಡು ಗ್ರಾಪಂ ಅನ್ನು ಪುರಸಭೆಯೊಂದಿಗೆ ವಿಲೀನಗೊಳಿಸಿದ ನಂತರ ಬಂಗಾರಪ್ಪ ಬಡಾವಣೆಯನ್ನು ಸಂಪೂರ್ಣ ನಿರ್ಲಕ್ಷಿಸಲಾಗಿದೆ. ಹಲವು ಮಂದಿಗೆ ಹಕ್ಕುಪತ್ರ ನೀಡಿ ಖಾತೆ ಮಾಡಿಕೊಡಲಾಗಿದೆ. ಆದರೆ ಕಂದಾಯ ಕಟ್ಟಿಸಿಕೊಳ್ಳುತ್ತಿಲ್ಲ. ಬಡಾವಣೆ ಸರ್ವೆ ಮಾಡಿಸಿ ಬೋರ್‌ವೆಲ್ ಕೊರೆಸಬೇಕು. ಪುರಸಭೆಯೊಂದಿಗೆ ವಿಲೀನಗೊಂಡ ಭೈರಾಪುರ ಹಾಗೂ ಆಲಗೂಡು ಗ್ರಾಮದಲ್ಲಿ ನಿವೇಶನ ಹಾಗೂ ಮನೆಯ ಕಂದಾಯ ಕಟ್ಟಿಸಿಕೊಳ್ಳಲಾಗುತ್ತಿದೆ. ಆದರೆ ಬಂಗಾರಪ್ಪ ಬಡಾವಣೆ ನಿವೇಶನದ ಕಂದಾಯ ಕಟ್ಟಿಸಿಕೊಳ್ಳುತ್ತಿಲ್ಲ ಎಂದು ಅಳಲು ತೋಡಿಕೊಂಡ ನಿವಾಸಿಗಳು ಕೂಡಲೇ ತಾವು ಬಡಾವಣೆ ಸರ್ವೇ ಮಾಡಿಸಿ, ಕಂದಾಯ ಕಟ್ಟಿಸಿಕೊಳ್ಳುವ ಜೊತೆಗೆ ಬಡಾವಣೆಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸಿಕೊಡುವಂತೆ ಮನವಿ ಮಾಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಕೆಟಿಎಂ (ಕ)	2 ಪ್ರದರ್ಶನಗಳು,
ಜುಗಲ್‌ಬಂದಿ (ಕ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಕ್ರಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಛಾಯಾ (ಕ)	2 ಪ್ರದರ್ಶನಗಳು
ನಮೋಭಾರತ್ (ಕ)	2 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಆಪರೇಷನ್ ವ್ಯಾಲಂಟೇನ್ (ತೆ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ವಾರಿ-3 (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಹದೇವ್ (ಹಿ)	4 ಪ್ರದರ್ಶನಗಳು
ಪ್ರಭಾ	
ಛಾಯಾ (ಕ)	2 ಪ್ರದರ್ಶನಗಳು
ನಮೋಭಾರತ್ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್ ದೂ : 4240422/4241800

ಸ್ಕ್ರೀನ್ 1	ಚಾರಿ 111 (ತೆ): ಬೆ.10.30ಕ್ಕೆ, ಡ್ಯೂನ್ ಪಾರ್ಟ್2 (ಇಂ): ಮ.1.05ಕ್ಕೆ, ರಾ.10.25ಕ್ಕೆ, ಆರ್ಟಿಕಲ್ 370 (ಹಿಂ): ಸಂ.4.15ಕ್ಕೆ, ರಾ.7.25ಕ್ಕೆ.
ಸ್ಕ್ರೀನ್ 2	ಜುಗಲ್‌ಬಂದಿ (ಕ): ಬೆ.10.45ಕ್ಕೆ, ಉಪಾಧ್ಯಕ್ಷ (ಕ): ಮ.1.30ಕ್ಕೆ, ಲಾಪತಾ ಲೇಡಿಸ್ (ಹಿಂ): ಸಂ.4.25ಕ್ಕೆ, ಒಂದು ಸರಳ ಪ್ರೇಮಕಥೆ (ಕ): ರಾ.7ಕ್ಕೆ, ಮಂಜುಮಲೆ (ಮ): ರಾ.10ಕ್ಕೆ.
ಸ್ಕ್ರೀನ್ 3	ಆರ್ಟಿಕಲ್ 370 (ಹಿಂ): ಬೆ.10.40ಕ್ಕೆ, ರಾ.9.45ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ): ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.
ಸ್ಕ್ರೀನ್ 4	

ಐನಾಕ್ಸ್ ಮೂವೀಸ್ INOX LIVE THE MOVIE ದೂ : 2533444 / 2433456

ಸ್ಕ್ರೀನ್ 1	ಆಪರೇಷನ್ ವ್ಯಾಲೆಂಟೈನ್ (ತೆ): ಬೆ.9.55ಕ್ಕೆ, ಲಾಪತಾ ಲೇಡಿಸ್ (ಹಿಂ): ಮ.12.45ಕ್ಕೆ, ಡ್ಯೂನ್ ಪಾರ್ಟ್2 (ಇಂ): ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಡ್ಯೂನ್ ಪಾರ್ಟ್2 (ಇಂ): ಬೆ.9.50ಕ್ಕೆ, ಮ.1.20ಕ್ಕೆ, ಕ್ರೀಂ (ಕ): ಸಂ.4.50ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ): ರಾ.7.25ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಲಾಪತಾ ಲೇಡಿಸ್ (ಹಿಂ): ಬೆ.10ಕ್ಕೆ, ರಾ.7.25ಕ್ಕೆ, ಆರ್ಟಿಕಲ್ 370 (ಹಿಂ): ಮ.12.45ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಆಪರೇಷನ್ ವ್ಯಾಲೆಂಟೈನ್ (ತೆ): ಮ.12ಕ್ಕೆ, ಉಪಾಧ್ಯಕ್ಷ (ಕ): ಮ.3.05ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಸಂ.6.20ಕ್ಕೆ.

ಮೈಸೂರು ವಿಷನ್ ಸಿನಿಮಾ ದೂ : 0821-2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್ PVR CINEMAS ಮೊ.ನಂ: 8951357139 ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಝಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಕ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸರಣಿ ಕಳ್ಳತನ: ಲಕ್ಷಾಂತರ ರೂ., ಚಿನ್ನಾಭರಣ ಕಳವು

ನಂಜನಗೂಡು, ಮಾ.1- ಒಂದೇ ದಿನ ಎರಡು ಮನೆಗಳ ಬೀಗ ಮುರಿದಿರುವ ಕಳ್ಳರು ಸರಣಿ ಕಳ್ಳತನ ನಡೆಸಿ ಲಕ್ಷಾಂತರ ರೂ. ಹಾಗೂ ಚಿನ್ನಾಭರಣ ದೋಚಿರುವ ಘಟನೆ ನಗರದ ವಿದ್ಯಾನಗರ ಹಾಗೂ ಕೃಷ್ಣಪ್ಪ ಬಡಾವಣೆಗಳಲ್ಲಿ ನಡೆದಿದೆ.

ವಿದ್ಯಾನಗರ ನಿವಾಸಿ ಬಸವರಾಜು ಹಬ್ಬಕ್ಕೆಂದು ತಮ್ಮ ಅತ್ತೆ ಮನೆ ಹೊಸಹಳ್ಳಿಗೆ ಹೋಗಿದ್ದ ವೇಳೆ ಮನೆ ಬೀಗ ಮುರಿದು ಒಳ ನುಗ್ಗಿರುವ ಕಳ್ಳರು ಮಕ್ಕಳ ಶಾಲಾ ದಾಖಲಾತಿಗೆ ಕೂಡಿಟ್ಟಿದ್ದ 1 ಲಕ್ಷ ರೂ. ಗಳನ್ನು ದೋಚಿ ಪರಾರಿಯಾಗಿದ್ದಾರೆ. ಅಲ್ಲದೇ ಕೃಷ್ಣಪ್ಪ ಬಡಾವಣೆ ನಿವಾಸಿ ಸಂತೋಷ್ ಅವರು ಹಬ್ಬಕ್ಕೆಂದು ಬೊಕ್ಕಹಳ್ಳಿಯ ಸಂಬಂಧಿಕರ ಮನೆಗೆ ತೆರಳಿದ್ದ ವೇಳೆ ಮನೆ ಬೀಗ ಮುರಿದು ಒಳ ನುಗ್ಗಿರುವ ಕಳ್ಳರು ಮನೆ ಬೀರುವಿನಲ್ಲಿದ್ದ 1 ಲಕ್ಷ ರೂ. ಓಲೆ, ಉಂಗುರ ಸೇರಿದಂತೆ 11 ಗ್ರಾಂ ತೂಕದ ಚಿನ್ನ, ಬೆಳ್ಳಿ ದೀಪ ಸೇರಿದಂತೆ 1.48 ಲಕ್ಷ ಮೌಲ್ಯದ ಚಿನ್ನ ಮತ್ತು ಬೆಳ್ಳಿ ಪದಾರ್ಥ ಕದ್ದು ಪರಾರಿಯಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಶ್ವಾನದಳ, ಬೆರಳಚ್ಚು ತಜ್ಞರು ಪರಿಶೀಲನೆ ನಡೆಸಿದ್ದು, ಈ ಸಂಬಂಧ ನಂಜನಗೂಡು ಪಟ್ಟಣ ಠಾಣೆಯಲ್ಲಿ ದೂರು ದಾಖಲಾಗಿದೆ.

ಪೊಲೀಸರ ನಿರ್ಲಕ್ಷ್ಯದಿಂದಾಗಿ ನಗರದಲ್ಲಿ ಸರಣಿ ಕಳ್ಳತನ, ಸರಗಳ್ಳತನ ಪ್ರಕರಣಗಳು ಹೆಚ್ಚಾಗಿರುವುದಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹೀಗಾಗಿ ನಗರ ವ್ಯಾಪ್ತಿಯ ಎಲ್ಲಾ ಬಡಾವಣೆಗಳಲ್ಲೂ ರಾತ್ರಿ ವೇಳೆ ಗಸ್ತು ಹೆಚ್ಚಿಸಬೇಕು ಎಂದು ಒತ್ತಾಯಿಸಿದ್ದಾರೆ.



ಜಿಲ್ಲಾ ಉಪಾಧ್ಯಕ್ಷರಾಗಿ ನೇಮಕ

ತಿ.ನರಸೀಪುರ, ಮಾ.1- ಬಿಜೆಪಿ ಮೈಸೂರು ಜಿಲ್ಲಾ ಉಪಾಧ್ಯಕ್ಷರನ್ನಾಗಿ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಆದೇಶದ ಮೇರೆಗೆ ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ತ್ಯಾಜ್ಯ ನಿರ್ವಹಣೆಗೆ ಪಿಡಿಓಗಳು ಸಿದ್ಧರಾಗಿ: ತಾಪಂ ಇಓ ಮನು


ಹುಣಸೂರಿನಲ್ಲಿ ತ್ಯಾಜ್ಯ ನಿರ್ವಹಣೆ ಸಂಬಂಧ ತರಬೇತಿ ಕಾರ್ಯಾಗಾರ ನಡೆಯಿತು.

ಹುಣಸೂರು, ಮಾ.1- ಪಿಡಿಓಗಳು ಚುನಾಯಿತ ಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಘನ, ದ್ರವ ತ್ಯಾಜ್ಯ ನಿರ್ವಹಣೆ ಮಾಡಲು ಮಾನಸಿಕವಾಗಿ ಸಿದ್ಧರಾದರೆ ಮಾತ್ರ ಯಶಸ್ಸು ಕಾಣಲು ಸಾಧ್ಯ ಎಂದು ತಾಪಂ ಇಓ ಬಿ.ಕೆ.ಮನು ತಿಳಿಸಿದರು.

ನಗರದ ತಾಪಂ ಕಚೇರಿ ಸಭಾಂಗಣದಲ್ಲಿ ತಾಪಂ, ಐಟಿಸಿ ಮತ್ತು ಔಟ್‌ರೀಚ್ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಗ್ರಾಮೀಣ ಭಾಗದಲ್ಲಿ ತ್ಯಾಜ್ಯ ನಿರ್ವಹಣೆ ಕುರಿತು ಏರ್ಪಡಿಸಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಇದು ಯಾರೋ ಒಬ್ಬರು ಮಾಡುವ ಕೆಲಸವಲ್ಲ. ಎಲ್ಲರೂ ಸೇರಿಮಾಡುವ ಕೆಲಸ. ಮೊದಲು ನಮ್ಮ ಊರುಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಘನ ತ್ಯಾಜ್ಯ ನಿರ್ವಹಣೆ ಸುಲಭವಾದರೆ, ದ್ರವ ತ್ಯಾಜ್ಯ ನಿರ್ವಹಣೆ ಕಷ್ಟವಾಗಿರುತ್ತದೆ. ಹೀಗಾಗಿ ಇದನ್ನು ಮನಗಂಡು ಪಿಡಿಓಗಳು ಕೆಲಸ ಮಾಡಬೇಕು ಎಂದರು.

ಸಿಡಿಡಿ ಸಂಸ್ಥೆ ಸಂಪನ್ಮೂಲ ವ್ಯಕ್ತಿ ರೋಹಿಣಿ ಪ್ರದೀಪ್ ಮಾತನಾಡಿ, ಕೇವಲ ಕೈಗಾರಿಕೆಗಳಿಂದ ಬರುವ ನೀರು ಮಾಲಿನ್ಯವಾಗುತ್ತಿಲ್ಲ. ಅದಕ್ಕಿಂತ ಹೆಚ್ಚಾಗಿ ಗ್ರಾಮೀಣ ಭಾಗದಲ್ಲಿ ಚರಂಡಿಗಳ ಮೂಲಕ ಕೆರೆ, ನದಿಗೆ ಸೇರುವ ನೀರು ಹೆಚ್ಚು ಮಾಲಿನ್ಯವಾಗಿರುತ್ತದೆ. ಇದರಿಂದ ಸಾವಿರಾರು ಜೀವರಾಶಿಗಳ ಜೀವ ಹಾನಿಯಾಗುತ್ತಿದೆ ಎಂದರು.

ಐಟಿಸಿ ಸಂಸ್ಥೆ ಕಾರ್ಯ ನಿರ್ವಾಹಕ ಅಧಿಕಾರಿ ಎಂ.ಮನೋಜ್ ಮಾತನಾಡಿ, ನಮ್ಮ ಸಂಸ್ಥೆಯಿಂದ ಸಿಎಸ್‌ಆರ್ ಯೋಜನೆಯಡಿ ಗ್ರಾಮೀಣ ಸರ್ಕಾರಿ ಶಾಲೆಗಳಿಗೆ ಹೈಟೆಕ್ ಶೌಚಾಲಯ, ಕಾಂಪೌಂಡ್, ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಜೊತೆಗೆ ಮೈಸೂರು ಜಿಲ್ಲೆಯ ಎಲ್ಲಾ ತಾಲೂಕಿನಲ್ಲಿ ಘನ ಹಾಗೂ ದ್ರವ ತ್ಯಾಜ್ಯ ನಿರ್ವಹಣೆ ಮಾಡಲು ಎಲ್ಲಾ 256 ಗ್ರಾಪಂಗಳಲ್ಲಿ ಐಇಸಿ ಚಟುವಟಿಕೆಯಡಿ ಚುನಾಯಿತ ಪ್ರತಿನಿಧಿಗಳು, ಪಿಡಿಓಗಳು ಸಾರ್ವಜನಿಕರಿಗೆ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ ಎಂದರು.

ಕಾರ್ಯಾಗಾರದಲ್ಲಿ ತಾಲೂಕಿನ 41 ಗ್ರಾಪಂ ಅಧ್ಯಕ್ಷರು, ಪಿಡಿಓ, ಔಟ್‌ರೀಚ್ ಸಂಸ್ಥೆ ಸಂಯೋಜಕರಾದ ಪ್ರಶಾಂತ್, ಮಹೇಶ್ ಪ್ರಸಾದ್, ಜಿ.ಎಸ್.ಜಗದೀಶ, ಕ್ಷೇತ್ರ ಸಿಬ್ಬಂದಿ ಶಶಿಕುಮಾರ, ಮಾದೇಶ್, ಸಂಪತ್ತು, ಸಂಜೀವಿನ ಒಕ್ಕೂಟದ ಸಿಬ್ಬಂದಿ ಭಾಗವಹಿಸಿದ್ದರು.

ಪ್ರಸ್ತುತ ಮಕ್ಕಳಲ್ಲಿ ಆದರ್ಶ, ಮೌಲ್ಯಗಳ ಕೊರತೆ ಹೆಚ್ಚುತ್ತಿದೆ

ಅನ್ವೇಷಣಾ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಹೆಚ್.ಕೆ.ಚಂದ್ರಮೋಹನ್


ಅನ್ವೇಷಣಾ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ತಂದೆ-ತಾಯಿಗೆ ಪಾದಪೂಜೆ ಮಾಡಿ ಆಶೀರ್ವಾದ ಪಡೆದರು.

ಹಿರೀಕ್ಯಾತನಹಳ್ಳಿ, ಮಾ.1- ಪ್ರಸ್ತುತ ಮಕ್ಕಳಲ್ಲಿ ಆದರ್ಶ, ಮೌಲ್ಯಗಳ ಕೊರತೆ ಹೆಚ್ಚಾಗುತ್ತಿದೆ ಎಂದು ಅನ್ವೇಷಣಾ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಹೆಚ್.ಕೆ. ಚಂದ್ರಮೋಹನ್ ತಿಳಿಸಿದರು.

ಇಲ್ಲಿನ ಬಿಳಿಗೆರೆ ಗ್ರಾಮದ ಅನ್ವೇಷಣಾ ಶಿಕ್ಷಣ ಸಂಸ್ಥೆಯಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭ ಹಾಗೂ ಪೋಷಕರ ಪಾದ ಪೂಜೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಕ್ಕಳಿಗೆ ತಂದೆ-ತಾಯಿ ಹಾಗೂ ಗುರುಗಳ ಆಶೀರ್ವಾದ ಮುಖ್ಯ. ಆದರೆ ಇಂದಿನ ಮಕ್ಕಳಲ್ಲಿ ಆದರ್ಶ, ಮೌಲ್ಯಗಳ ಕೊರತೆ ಎದ್ದು ಕಾಣುತ್ತಿದೆ. ವಿದ್ಯಾರ್ಥಿಗಳಲ್ಲಿ ತಂದೆ-ತಾಯಿ, ಗುರುಗಳ ಬಗ್ಗೆ ಗೌರವ ಇಲ್ಲ ಎಂದ ಅವರು ಅಲ್ಲಮಪ್ರಭುಗಳ ವಚನ ಉಚ್ಚರಿಸುತ್ತಾ ತ್ರೇತಾ ಯುಗದಲ್ಲಿ ಗುರು ಶಿಷ್ಯನಿಗೆ ಬಡಿದು ಬುದ್ದಿ ಕಲಿಸಿದರೆ ಇಂದು ಗುರು ಶಿಷ್ಯನಿಗೆ ವಂದಿಸಿ ಬುದ್ದಿ ಕಲಿಸಬೇಕಾದ ಅನಿವಾರ್ಯತೆ ಇದೆ. ಇಂದಿನ ಮಕ್ಕಳಲ್ಲಿ ಎಲ್ಲೋ ಒಂದು ಕಡೆ ಒಳ್ಳೆಯ ಸಂಸ್ಕಾರ ಕಳೆದು ಹೋಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳು ಬೆಳಗ್ಗೆ ಎದ್ದ ಕೂಡಲೇ ನಿಮ್ಮ ತಂದೆ-ತಾಯಿಗೆ ನಮಸ್ಕರಿಸುವುದನ್ನು ಅಭ್ಯಾಸ ಮಾಡಿಕೊಳ್ಳಿ. ಅದು ನಿಮ್ಮ ಯಶಸ್ಸಿಗೆ ಕಾರಣವಾಗುತ್ತದೆ. ಇಂದು ನಾನು ಈ ವೇದಿಕೆಯಲ್ಲಿ ಮಾತನಾಡುತ್ತಿದ್ದೇನೆ ಎಂದರೆ ಅದಕ್ಕೆ ನನ್ನ ತಂದೆ-ತಾಯಿ ಆಶೀರ್ವಾದವೇ ಕಾರಣ ಎಂದರು. ಇದೇ ವೇಳೆ ಈ ಬಾರಿಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 600ಕ್ಕೆ 595 ಅಂಕ ಪಡೆಯುವ ನಮ್ಮ ಸಂಸ್ಥೆಯ ವಿದ್ಯಾರ್ಥಿಗೆ ಸಂಸ್ಥೆ ವತಿಯಿಂದ 1 ಲಕ್ಷ, 590 ಅಂಕ ಪಡೆಯುವ ವಿದ್ಯಾರ್ಥಿಗೆ 50 ಸಾವಿರ ರೂ. ಬಹುಮಾನ ನೀಡುವುದಾಗಿ ಘೋಷಿಸಿದರು.

ಸಂಸ್ಥೆ ಪ್ರಾಂಶುಪಾಲ ಹೆಚ್.ಎನ್.ಗಿರೀಶ್ ಮಾತನಾಡಿ ಅನ್ವೇಷಣಾ ಸಂಸ್ಥೆ ಪ್ರತಿವರ್ಷ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಹಾಗೂ ಸಿಇಟಿ, ನೀಟ್, ಜೆಇಇಯಂತಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅತ್ಯುತ್ತಮ ಫಲಿತಾಂಶ ನೀಡುವ ಜೊತೆಗೆ ವಿದ್ಯಾರ್ಥಿಗಳಿಗೆ ಉತ್ತಮ ಸಂಸ್ಕೃತಿ ಮತ್ತು ಸಂಸ್ಕಾರಗಳನ್ನು ನೀಡಲು ಶ್ರಮಿಸುತ್ತಿದೆ ಎಂದರು.

ಸಮಾರಂಭದಲ್ಲಿ ಎಸ್‌ಎಂಎಲ್, ಐಎಸ್‌ಯುಜೆಡ್‌ಯುನ ಡೀಲರ್ ಪ್ರವೀಣ್ ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು. ಉಪ ಪ್ರಾಂಶುಪಾಲೆ ಆಶಾ, ಸಂಸ್ಥೆ ಸಂಸ್ಥಾಪಕ ನಂಜುಂಡಶೆಟ್ಟಿ, ಕಾರ್ಯದರ್ಶಿ ಹೆಚ್.ಸಿ.ಪ್ರಶಾಂತ್, ಖಜಾಂಚಿ ಸುಪ್ರಿಯ, ನಿರ್ದೇಶಕರಾದ ಜಯಮ್ಮ ಸರಸ್ವತಿ, ಉಪನ್ಯಾಸಕರಾದ ಆಶಾರಾಣಿ, ಖತೇಜ, ವಸೀಂ ಪಾಟಾ, ರೂಹಿ ಅಫ್ಸಾನ, ಶ್ವೇತಾ, ರಘುನಂದನ್, ರವಿಚಂದ್ರ, ಪುನೀತ್ ಕುಮಾರ್, ಕಾವ್ಯ, ಸೌಂದರ್ಯ, ವಿಷ್ಣುದೇವ್, ಸುಬ್ಬುಕೃಷ್ಣ, ಪೂಜಾ, ವೆಂಕಟೇಶ್, ಪೋಷಕರು ಹಾಗೂ ವಿದ್ಯಾರ್ಥಿಗಳು ಮತ್ತಿತರರು ಹಾಜರಿದ್ದರು.

ನಾಲ್ಕು ವರ್ಷದ ಪದವಿ ಹಿಂಪಡೆಯಲು ಆಗ್ರಹಿಸಿ ಪ್ರತಿಭಟನೆ



ಹೆಚ್.ಡಿ.ಕೋಟೆ ಪದವಿ ಕಾಲೇಜಿನ ಎದುರು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಹೆಚ್.ಡಿ.ಕೋಟೆ, ಮಾ.1- ನಾಲ್ಕು ವರ್ಷದ ಪದವಿ ಕೋರ್ಸ್ ಘೋಷಿಸುವಲ್ಲಿ ವಿಳಂಬ ಹಾಗೂ 4 ವರ್ಷದ ಪದವಿ ಹಿಂಪಡೆಯಬೇಕೆಂದು ಆಗ್ರಹಿಸಿ ಎಐಡಿಎಸ್‌ಓ ಸಂಘಟನೆ ನೇತೃತ್ವದಲ್ಲಿ ಪಟ್ಟಣದ ಪದವಿ ಕಾಲೇಜಿನ ಎದುರು ವಿದ್ಯಾರ್ಥಿಗಳು ಶುಕ್ರವಾರ ಪ್ರತಿಭಟನೆ ನಡೆಸಿದರು.

ಎಐಡಿಎಸ್‌ಓ ಮುಖಂಡರಾದ ಚಂದ್ರಿಕಾ ಮಾತನಾಡಿ, ಕಳೆದ ಸರ್ಕಾರ ಅತ್ಯಂತ ತರಾತುರಿಯಲ್ಲಿ ಯಾವುದೇ ಪೂರ್ವಸಿದ್ಧತೆ ಇಲ್ಲದೇ ಎನ್‌ಇಪಿಯನ್ನು ಜಾರಿಗೊಳಿಸಿತು. ಎನ್‌ಇಪಿ ಭಾಗವಾಗಿದ್ದ ನಾಲ್ಕು ವರ್ಷದ ಪದವಿಯನ್ನು ಅಪ್ರಜಾತಾಂತ್ರಿಕವಾಗಿ ಹೇರಿಕೆ ಮಾಡಿ, ವಿದ್ಯಾರ್ಥಿಗಳ ಭವಿಷ್ಯಕ್ಕೆ ಕಂಟಕವನ್ನುಂಟು ಮಾಡಿತು ಎಂದು ಕಿಡಿಕಾರಿದರು.

ಈ ಹಿನ್ನೆಲೆಯಲ್ಲಿ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆ ಶಿಕ್ಷಣಕ್ಕೆ ಮಾರಕವಾಗಿರುವ ಎನ್‌ಇಪಿ ವಿರುದ್ಧ ರಾಜ್ಯದಲ್ಲಿ ಹೋರಾಟ ಮಾಡಿತು. ಅಲ್ಲದೇ ಇದರ ವಿರುದ್ಧ 35 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ವಯಂಸೇವಕರಾಗಿ ರಾಜ್ಯದ ಮೂಲೆ ಮೂಲೆಗಳಿಂದ 36 ಲಕ್ಷ ಸಹಿಗಳನ್ನು ಸಂಗ್ರಹಿಸುವ ಮೂಲಕ ಎನ್‌ಇಪಿಯನ್ನು ರಾಜ್ಯದಿಂದ ಹಿಮ್ಮೆಟ್ಟಿಸಲಾಯಿತು. ರಾಜ್ಯ ಸರ್ಕಾರ ರಾಜ್ಯದ ಶಿಕ್ಷಣ ನೀತಿ ರೂಪಿಸಲು ಸಮಿತಿ ರಚಿಸಿದೆ. ಆದರೆ ಜನಪರ ಶಿಕ್ಷಣ ನೀತಿ ರೂಪಿಸುವಂತೆ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆ ರಾಜ್ಯದ 23 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸಂಪರ್ಕಿಸಿ ಸಮೀಕ್ಷೆ ನಡೆಸಿದ್ದು, ಈ ವೇಳೆ ಶೇ.83 ರಷ್ಟು ವಿದ್ಯಾರ್ಥಿಗಳು ನಾಲ್ಕು ವರ್ಷದ ಪದವಿ ಬೇಡವೆಂದು ಹೇಳಿದ್ದಾರೆ.

ರಾಜ್ಯ ಸರ್ಕಾರ ರಚಿಸಿರುವ ರಾಜ್ಯ ಶಿಕ್ಷಣ ಆಯೋಗವು ರಾಜ್ಯ ಶಿಕ್ಷಣ ನೀತಿ ಕುರಿತಾದ ಅಂತಿಮ ವರದಿಯನ್ನು ಆಗಸ್ಟ್‌ನಲ್ಲಿ ನೀಡುವುದಾಗಿ ಹೇಳಿರುವುದು ಆತಂಕಕ್ಕೆ ಕಾರಣವಾಗಿದೆ. 4 ವರ್ಷದ ಪದವಿಯನ್ನು ಹಿಂಪಡೆಯುವ ಕುರಿತು ರಾಜ್ಯ ಸರ್ಕಾರ ಸ್ಪಷ್ಟ ನಿರ್ಧಾರ ಕೈಗೊಂಡಿಲ್ಲ. ಸರ್ಕಾರದ ಈ ವಿಳಂಬವು ವಿದ್ಯಾರ್ಥಿಗಳ ಭವಿಷ್ಯವನ್ನು ಅತಂತ್ರಕ್ಕೆ ದೂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

6ನೇ ಸೆಮಿಸ್ಟರ್ ಪ್ರವೇಶಿಸಲಿರುವ ಪದವಿ ವಿದ್ಯಾರ್ಥಿಗಳಿಗೆ ಇದೇ ಅಂತಿಮ ವರ್ಷವೇ ಅಥವಾ ಇನ್ನೊಂದು ವರ್ಷ ಓದಬೇಕೇ ಎಂಬುದರ ಕುರಿತು ಯಾವ ಸ್ಪಷ್ಟತೆ ನೀಡಲಾಗಿಲ್ಲ. ಈ ವಿಳಂಬದಿಂದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವರ್ಷದ ಕುರಿತಾಗಿಯೇ ಸ್ಪಷ್ಟತೆ ಇಲ್ಲದಂತಾಗಿದೆ. ಇನ್ನೂ 2-3 ತಿಂಗಳಲ್ಲಿ 3ನೇ ವರ್ಷದ ಪದವಿ ಮುಗಿಯಲಿದ್ದು, ಅವರ ಭವಿಷ್ಯ ಅತಂತ್ರದಲ್ಲಿದೆ. ಹೀಗಾಗಿ 4 ವರ್ಷ ಪದವಿ ಕೋರ್ಸ್ ಕುರಿತ ನಿರ್ಧಾರವನ್ನು ಕೂಡಲೇ ಪ್ರಕಟಿಸಬೇಕು ಎಂದು ಆಗ್ರಹಿಸಿದರು. ಇದೇ ವೇಳೆ ತಹಸೀಲ್ದಾರ್ ಮೂಲಕ ಸಿಎಂಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಕಾರ್ಯಕರ್ತರಾದ ಅಂಜಲಿ ಹಾಗೂ ಸರ್ಕಾರಿ ಪದವಿ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಾ.12, ದಿ.ಆರ್.ಧ್ರುವನಾರಾಯಣ್ ಮೊದಲ ಪುಣ್ಯಸ್ಮರಣೆ

ಕಾರ್ಯಕ್ರಮದಲ್ಲಿ ಸಿಎಂ, ಡಿಸಿಎಂ ಸೇರಿದಂತೆ ಗಣ್ಯರು ಭಾಗಿ: ಶಾಸಕ ದರ್ಶನ್


ಪೂರ್ವಭಾವಿ ಸಭೆಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿದರು.

ನಂಜನಗೂಡು, ಮಾ.1- ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ನಮ್ಮನ್ನಗಲಿ ಒಂದು ವರ್ಷ ಕಳೆಯುತ್ತಿರುವ ಹಿನ್ನೆಲೆಯಲ್ಲಿ ಮಾ.12ರಂದು ಸ್ವಗ್ರಾಮ ಹೆಗ್ಗವಾಡಿಯಲ್ಲಿ ಮೊದಲ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ನನ್ನ ತಂದೆ ಧ್ರುವನಾರಾಯಣ್ ಅವರು ಕುಟುಂಬಕ್ಕಿಂತಲೂ ಕಾರ್ಯಕರ್ತರೊಂದಿಗೆ ಕಾಲ ಕಳೆದಿದ್ದೆ ಹೆಚ್ಚು. ಆದ್ದರಿಂದಲೇ ಅಪಾರ ಅಭಿಮಾನಿಗಳು, ಕಾರ್ಯಕರ್ತರು, ಅವರ ಮೇಲೆ ಹೆಚ್ಚಿನ ಪ್ರೀತಿ, ವಿಶ್ವಾಸ, ನಂಬಿಕೆ ಇಟ್ಟುಕೊಂಡಿದ್ದರು. ಪ್ರಸ್ತುತ ನನಗೆ ಶಾಸಕ ಸ್ಥಾನದ ಜೊತೆಗೆ ನನ್ನ ತಂದೆಯ ಅಪಾರ ಅಭಿಮಾನಿಗಳನ್ನು ಒಟ್ಟಾಗಿ ಕರೆದೊಯ್ಯುವ ಬಹುದೊಡ್ಡ ಜವಾಬ್ದಾರಿ ಇದೆ. ಇದನ್ನು ನಿಭಾಯಿಸಲು ನನ್ನ ತಂದೆ ದೈಹಿಕವಾಗಿ ನಮ್ಮನ್ನು ಅಗಲಿದ್ದರೂ, ಈಗಲೂ ನನ್ನ ಬೆನ್ನಿಗೆ ನಿಂತಿರುವ ಪ್ರೇರಕ ಶಕ್ತಿಯಾಗಿದ್ದಾರೆ. ಅಭಿಮಾನಿಗಳ ಆ ಪ್ರೀತಿ, ವಿಶ್ವಾಸ, ನಂಬಿಕೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಅವರ ಸ್ಥಾನ ತುಂಬಲು ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಮಾ.11ಕ್ಕೆ ನನ್ನ ತಂದೆ ನಿಧನರಾಗಿ 1 ವರ್ಷ. ಅಂದು ಚಾಮರಾಜನಗರ-ಮೈಸೂರು ಜಿಲ್ಲೆಯ ಎಲ್ಲಾ 8 ಕ್ಷೇತ್ರಗಳಲ್ಲೂ ಸೇವಾ ಕಾರ್ಯ ಹಮ್ಮಿಕೊಳ್ಳುವ ಮೂಲಕ ಅವರಿಗೆ ಗೌರವ ಸಲ್ಲಿಸಲಾಗುವುದು. ಮಾ.12ರಂದು ಅವರು ಪ್ರಕೃತಿಯಲ್ಲಿ ಲೀನವಾದ ಹಿನ್ನೆಲೆಯಲ್ಲಿ ಸ್ವಗ್ರಾಮ ಹೆಗ್ಗವಾಡಿಯಲ್ಲಿ ಬೃಹತ್ ವೇದಿಕೆ ನಿರ್ಮಿಸಿ ಎರಡೂ ಜಿಲ್ಲೆಗಳ ಅಪಾರ ಅಭಿಮಾನಿಗಳು, ಕಾರ್ಯಕರ್ತರೊಂದಿಗೆ ಪುಣ್ಯಸ್ಮರಣೆ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ, ಸಚಿವ ಕೆ.ವೆಂಕಟೇಶ್, 8 ಕ್ಷೇತ್ರಗಳ ಶಾಸಕರು ಸೇರಿದಂತೆ ನನ್ನ ತಂದೆ ಜೊತೆಗೆ ಒಡನಾಟ ಹೊಂದಿದ್ದ ಶಾಸಕರು, ಮಾಜಿ ಶಾಸಕರು, ಮಾಜಿ ಮಂತ್ರಿಗಳು, ಅಪಾರ ಅಭಿಮಾನಿಗಳು, ಕಾರ್ಯಕರ್ತರು ಭಾಗಿಯಾಗಲಿದ್ದಾರೆ. ಈ ಕಾರ್ಯಕ್ರಮಕ್ಕೆ 8 ಕ್ಷೇತ್ರಗಳ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರನ್ನು, ಅಭಿಮಾನಿಗಳನ್ನು ಕರೆತರುವ ಮೂಲಕ ಅವರಿಗೆ ಗೌರವ ಸಲ್ಲಿಸಬೇಕು ಎಂದು ಮನವಿ ಮಾಡಿದರು.

> ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ಆರ್.ಧ್ರುವನಾರಾಯಣ್ ನನಗೆ ಅಚ್ಚುಮೆಚ್ಚಿನ ಸ್ನೇಹಿತರಾಗಿದ್ದರು. ಶ್ರಮಜೀವಿಗಳಾಗಿದ್ದ ಅವರ ಪರಿಶ್ರಮದಿಂದ ಕಾಂಗ್ರೆಸ್ ಇಂದು ಅಧಿಕಾರ ಹಿಡಿಯುವಂತಾಗಿದೆ. ಅವರ ಪುಣ್ಯಸ್ಮರಣೆ ಕಾರ್ಯಕ್ರಮದ ಜವಾಬ್ದಾರಿ ವಹಿಸಿಕೊಂಡು ಕಾರ್ಯಕ್ರಮ ಯಶಸ್ವಿಗೆ ಶ್ರಮಿಸೋಣ.
> - ಬಿ.ಸೋಮಶೇಖರ್, ಮಾಜಿ ಸಚಿವ.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಸಿ. ಬಸವರಾಜು, ವಿಶ್ವಕರ್ಮ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ. ಶಂಕರ್, ಶ್ರೀಕಂಠನಾಯಕ, ಹಾಡ್ಯ ರಂಗಸ್ವಾಮಿ, ವಿಧಾನಸಭಾ ಉಸ್ತುವಾರಿ ಸೋಮೇಶ್, ಮುಖಂಡರಾದ ಕಾವೇರಪ್ಪ, ಬಿ.ಕೆ.ರವಿಕುಮಾರ್, ಪ್ರದೀಪ್, ಕಳಲೆ ರಾಜೇಶ್, ಎಂ.ಮಾದಪ್ಪ, ಮುದ್ದುಮಾದಶೆಟ್ಟಿ, ವಿಜಯ್‌ಕುಮಾರ್, ಶ್ರೀನಿವಾಸಮೂರ್ತಿ, ಎನ್.ಎಂ.ಮಂಜುನಾಥ್, ಕುಳ್ಳಯ್ಯ, ಕಾಡಾ ಅಧ್ಯಕ್ಷ ಮರಿಸ್ವಾಮಿ, ಜಿಪಂ ಮಾಜಿ ಸದಸ್ಯೆ ಲತಾ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ನಗರಸಭಾ ಸದಸ್ಯರಾದ ಮಹೇಶ್, ಗಾಯತ್ರಿ, ಶ್ರೀಕಂಠಸ್ವಾಮಿ, ಕೆ.ಎಂ.ಬಸವರಾಜು ಸೇರಿದಂತೆ ಹಲವರಿದ್ದರು.

2ನೇ ವರ್ಷದ ಪುಣ್ಯಸ್ಮರಣೆ



ನೀವು ಕಣ್ಮರೆಯಾಗಿ 2 ವರ್ಷ ಕಳೆದರೂ, ನಿಮ್ಮ ನೆನಪು ಶಾಶ್ವತ, ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ ಕುಟುಂಬಸ್ಥರು ಹಾಗೂ ಸಿಬ್ಬಂದಿಗಳು. ಗಜಮುಖ್ ಸೆಕ್ಯೂರಿಟಿ - ಮೈಸೂರು

ಅರಮಣಮಾಡ ಸನ್ನಿ
(ಎ.ಕೆ. ಅಯ್ಯಪ್ಪ)
ನಿಧನ: 02.03.2022

SAD DEMISE



22-07-1932 01-03-2024

Smt. Saraswathi Vasudeva Murthy

With profound grief and sorrow we mourn the
Sad Demise of Smt. Saraswathi Vasudeva Murthy
Our Mom, who brought out the best in all of us
"W/o of Late Sri. Vasudeva Murthy"
who left us for her heavenly abode on
Friday, 1st March 2024
DEEPLY MOURNED BY
Daughter Smt. T. Vijaya Lakshmi Muralidhar &
Son in-law Muralidhar Bhagavat
Grand Daughters & Great Grand Daughters
Rattehalli Family, MLR Family, Bhagavat Family, MGM Family
Prabha Theatre & Mahajana Education Society



